
ನೊಬೆಲ್ ಪುರಸ್ಕೃತ ಸಾಹಿತ್ಯ ಮಾಲೆ



ಅಕ್ಟೇವಿಯಾ ಪಾಜ್

ವಾಚಿಕೆ

ಕೆ. ಎನ್. ವಿಜಯಲಕ್ಷ್ಮಿ

ನೊಬೆಲ್ ಪುರಸ್ಕೃತ ಸಾಹಿತ್ಯ ಮಾಲೆ

ಆಕ್ಟೇವಿಯಾ ಪಾಜ್

ವಾಚಿಕೆ

ಅಕ್ಟೇವಿಯಾ ಪಾಜ್
(೧೯೧೪-)

ಲ್ಯಾಟಿನ್ ಅಮೆರಿಕದ ಸಮಕಾಲೀನ ಪ್ರಮುಖ ಲೇಖಕರಲ್ಲಿ ಅಕ್ಟೇವಿಯಾ ಪಾಜ್ ವಿಶ್ವಪ್ರಸಿದ್ಧಿ ಹೊಂದಿರುವವನು. ಮೆಕ್ಸಿಕೋ ನಗರದಲ್ಲಿ ಹುಟ್ಟಿದ ಪಾಜ್ ಬಾಲ್ಯದಿಂದಲೇ ಸಾಹಿತ್ಯದತ್ತ ಆಸಕ್ತನಾಗಿದ್ದವನು. ೧೯೩೦ರಲ್ಲಿ ತನ್ನ ಹದಿನೇಳನೇ ವಯಸ್ಸಿನಿಂದಲೇ ಬರೆಯಲು ಆರಂಭಿಸಿದ ಪಾಜ್ ಮೊದಲು ಫ್ರೆಂಚ್ 'ಸರ್ರಿಯಲಿಸಂ'ನಿಂದ ಪ್ರಭಾವಿತನಾಗಿದ್ದರೂ ಮುಂದೆ ತನ್ನ ಪ್ರತಿಭೆಯಲ್ಲಿ ತನ್ನದೇ ಆದ ಸ್ವಂತಿಕೆಯ ಅಭಿವ್ಯಕ್ತಿಯಲ್ಲಿ ಔನ್ನತ್ಯದ ಸಾಧನೆಯೆಡೆಗೆ ನಡೆಯಲಾರಂಭಿಸಿದ. ಮೂಲತಃ ಕವಿಯಾದ ಪಾಜ್‌ನ ಬರಹಗಳು ಸ್ಪಾನಿಷ್ ಭಾಷೆಯಲ್ಲಿ ಇಪ್ಪತ್ತನೇ ಶತಮಾನದ ತಲ್ಲಣಗಳನ್ನು ಅನನ್ಯ ರೀತಿಯಲ್ಲಿ ಮೂಡಿಸಿವೆ.

ಭಾರತದಲ್ಲಿಯೂ ಕೆಲಕಾಲ ರಾಯಭಾರಿಯಾಗಿದ್ದ ಪಾಜ್ ಭಾರತೀಯ ಚಿಂತನೆ, ಸಂಸ್ಕೃತಿಗಳಿಂದ ತನ್ನ ಸೃಜನಶೀಲತೆಗೆ ಸಮೃದ್ಧತೆ ತಂದುಕೊಂಡಿದ್ದಾನೆ. ಭಾರತದಲ್ಲಿ ಇದ್ದಾಗ ದೇಶದ ಹಲವೆಡೆ ಪ್ರವಾಸ ಮಾಡಿದ ಫಲವಾಗಿ ಹಲವಾರು ಕವಿತೆಗಳಲ್ಲಿ ಈ ಅನುಭವವನ್ನು ದಾಖಲಿಸಿದ ಪಾಜ್ ತನ್ನ ದೇಶದಲ್ಲಿ ನಡೆದ ವಿದ್ಯಾರ್ಥಿ ಚಳುವಳಿಯನ್ನು ಸರ್ಕಾರ ಹತ್ತಿಕ್ಕಿದ್ದನ್ನು ಪ್ರತಿಭಟಿಸಿ ರಾಜಿನಾಮೆ ನೀಡಿದ. ೧೯೯೦ರಲ್ಲಿ ನೊಬೆಲ್ ಪುರಸ್ಕಾರ ಪಡೆದ ಪಾಜ್‌ನ ಈ ವಾಚಿಕೆಯನ್ನು, ಈಗಾಗಲೇ ಸ್ಯಾಫೋ, ಸಿಲ್ವಿಯಾಪ್ಲಾತ್‌ರ ಕಾವ್ಯವನ್ನು ಕನ್ನಡಕ್ಕೆ ತಂದಿರುವ ಶ್ರೀಮತಿ ಕೆ.ಎನ್. ವಿಜಯಲಕ್ಷ್ಮಿ ಅವರು ಅನುವಾದದೊಂದಿಗೆ ಸಿದ್ಧಪಡಿಸಿದ್ದಾರೆ.

ನೊಬೆಲ್ ಪುರಸ್ಕೃತ ಸಾಹಿತ್ಯ ಮಾಲೆ

ಆಕ್ಟೇವಿಯಾ ಪಾಜ್

ವಾಚಿಕೆ

ಆಯ್ಕೆ/ಅನುವಾದ
ಕೆ.ಎನ್. ವಿಜಯಲಕ್ಷ್ಮೀ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು - ೫೬೦ ೦೧೮

OCTAVIO PAZ, selected writings of Noble Laureate Octavio · Paz, translated by K.N. Vijayalakshmi, Published by Kannada Pustaka Pradhikara (Kannada Book Authority) Pampa Mahakavi Road, Chamarajpet, Bangalore - 560 018.
Pages: xii + 140 = 152 First Edition: (1997) Price: Rs. 26/-

ಬೆಲೆ : ಇಪ್ಪತ್ತಾರು ರೂಪಾಯಿಗಳು

ಮೊದಲ ಮುದ್ರಣ : ೧೯೯೭

ಮುಖಪುಟ : ರಾ. ಸೂರಿ

ಅಕ್ಷರ ಜೋಡಣೆ ಮತ್ತು ಮುದ್ರಣ:
ನೀತು ಗ್ರಾಫಿಕ್ಸ್ : ನಂ. 99/18, 12 ನೇ ಮುಖ್ಯ ಪೈಪ್‌ಲೈನ್ ರಸ್ತೆ
ಹನುಮಂತನಗರ, ಬೆಂಗಳೂರು- 50 ದೂರವಾಣಿ: 6614113

ಮುನ್ನುಡಿ

ಕನ್ನಡ ಪುಸ್ತಕ ಪ್ರಾಧಿಕಾರವು ಕನ್ನಡ ಪುಸ್ತಕೋದ್ಯಮದ ಬೆಳವಣಿಗೆಗೆ ಪೂರಕವಾಗಿ ಅನೇಕ ಯೋಜನೆಗಳನ್ನು ರೂಪಿಸಿಕೊಂಡಿದೆ. ಅವುಗಳಲ್ಲಿ ಮುಖ್ಯವಾದುವೆಂದರೆ: ಕನ್ನಡದಲ್ಲಿ ಆಯಾವರ್ಷ ಪ್ರಕಟವಾಗುವ ಕೃತಿಗಳನ್ನು ಲೇಖಕರಿಂದ- ಪ್ರಕಾಶಕರಿಂದ ಕೊಂಡು ಗ್ರಂಥಾಲಯಗಳ ಮೂಲಕ ಓದುಗರಿಗೆ ತಲುಪಿಸುವುದು ಹಾಗೂ ಅತ್ಯುತ್ತಮವಾದ ಕೃತಿಗಳನ್ನು ಪರಿಣತ ವಿದ್ವಾಂಸರಿಂದ ಬರೆಯಿಸಿ ಪ್ರಕಟಿಸುವುದು.

ಈ ಯೋಜನೆಗಳಿಗೆ ಪೂರಕವಾಗಿ ಕಳೆದ ಐದು ವರ್ಷಗಳಿಂದ ಕನ್ನಡ ಪುಸ್ತಕ ಪ್ರಾಧಿಕಾರವು ಸೃಜನಶೀಲ ಹಾಗೂ ಸೃಜನೇತರ ಸಾಹಿತ್ಯವನ್ನು ಕನ್ನಡಿಗರಿಗೆ ಒದಗಿಸುತ್ತಾ ಬಂದಿದೆ. ಕನ್ನಡದ ಮೌಲಿಕವಾದ ಹಲವಾರು ವರ್ಷಗಳಿಂದ ಬೇಡಿಕೆಯಲ್ಲಿದ್ದೂ ಪುನರ್ ಮುದ್ರಣವಾಗದಿದ್ದ ಗ್ರಂಥಗಳನ್ನು ಆಯ್ದು ''ಜನಪ್ರಿಯ ಪುಸ್ತಕ ಮಾಲೆ''ಯ ಮೂಲಕ ಪ್ರಕಟಿಸುತ್ತಾ ಬಂದಿದೆ. ಹಾಗೆಯೇ ಸಮಕಾಲೀನ ಸಾಹಿತ್ಯ, ಶಿಕ್ಷಣ, ಸಂಸ್ಕೃತಿ, ಮಾನವಿಕ, ಶಾಸ್ತ್ರ ವಿಚಾರ, ಕಲೆ, ಶಿಶು ಸಾಹಿತ್ಯ ಹಾಗೂ ವಿಜ್ಞಾನ ಶಿಕ್ಷಣಕ್ಕೆ ಸಂಬಂಧಿಸಿದಂತೆ ವಿಶಿಷ್ಟವಾದ ಕೃತಿಗಳನ್ನು ಹೊರತರುವ ಉದ್ದೇಶದಿಂದ ಮೂಲಭೂತ ಶೈಕ್ಷಣಿಕ ಮಾಲೆ, ವಿಜ್ಞಾನ ದೀಪ ಮಾಲೆ, ಮಕ್ಕಳ ಪುಸ್ತಕ ಮಾಲೆಗಳನ್ನು ಪ್ರಾರಂಭಿಸಿದೆ. ಅಲ್ಲದೆ, ಕನ್ನಡದ ಕೆಲವು ಲೇಖಕರ ಶತಮಾನೋತ್ಸವ ಸಂದರ್ಭದಲ್ಲಿ ಅವರ ಪ್ರಾತಿನಿಧಿಕ ಸಂಕಲನವನ್ನು ಸಂಪಾದಿಸಿ ಪ್ರಕಟಿಸುವ ಕೆಲಸವನ್ನೂ ಮಾಡುತ್ತಿದೆ.

ಜಗತ್ತಿನ ಬೇರೆ ಬೇರೆ ವಿಜ್ಞಾನಿಗಳ, ತತ್ವಜ್ಞಾನಿಗಳ ಬದುಕು ಮತ್ತು ಬರಹಗಳನ್ನು ಕುರಿತು ತಜ್ಞರಿಂದ ಬರೆಯಿಸಿ ಕನ್ನಡದ ಓದುಗರಿಗೆ ತಲುಪಿಸಬೇಕೆಂಬ ಮಹತ್ವಾಕಾಂಕ್ಷೆಯನ್ನೂ ಪ್ರಾಧಿಕಾರ ಹೊಂದಿದೆ. ಹೀಗೆ ಪರಿಚಯಿಸುವುದರ ಮೂಲಕ ಬೇರೆ ಬೇರೆ ದೇಶಗಳ ಭಾಷೆ, ಸಂಸ್ಕೃತಿ ಹಾಗೂ ನಾಗರಿಕತೆಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಪ್ರಸ್ತುತ ನೊಬೆಲ್ ಬಹುಮಾನ ವಿಜೇತ ಲೇಖಕರ ಮಾಲಿಕೆಯೊಂದನ್ನು 'ನೊಬೆಲ್ ಪುರಸ್ಕೃತ ಸಾಹಿತ್ಯ ಮಾಲೆ' ಎಂದು ಆರಂಭಿಸುತ್ತಿದ್ದೇವೆ.

ನೊಬೆಲ್ ಬಹುಮಾನ ಜಗತ್ತಿನಲ್ಲಿಯೇ ಅತ್ಯಂತ ಪ್ರತಿಷ್ಠಿತವಾದ ಬಹುಮಾನ. ಆಲ್‌ಫ್ರೆಡ್ ನೊಬೆಲ್ ತನ್ನ ಉಯಿಲಿನಲ್ಲಿ ತನ್ನ ಉಳಿದಿರುವ ಆಸ್ತಿಯನ್ನೇ ಮೂಲ ಬಂಡವಾಳವಾಗಿಟ್ಟುಕೊಂಡು ಅದರಿಂದ ಬರುವ ಬಡ್ಡಿ

ಹಣದಲ್ಲಿ ಪ್ರತಿವರ್ಷ ಐದು ಬಹುಮಾನಗಳನ್ನು ಕೊಡುವಂತೆ ತಿಳಿಸಿದ್ದಾರೆ. ಈ ಬಹುಮಾನಗಳು 'ಭೌತಶಾಸ್ತ್ರ'. 'ರಸಾಯನಶಾಸ್ತ್ರ', 'ಶರೀರ ಶಾಸ್ತ್ರ', ಅಥವಾ 'ವೈದ್ಯಕೀಯ ಶಿಕ್ಷಣ', 'ಸಾಹಿತ್ಯ' ಹಾಗೂ 'ಮನುಕುಲದ ಶಾಂತಿಗಾಗಿ' ಎಂದು ಸೂಚಿಸಿದ್ದಾರೆ. ಹಾಗೆ ಆಯಾ ವರ್ಷ ಬಹುಮಾನ ಪಡೆಯುವವರು ಹಿಂದಿನ ವರ್ಷಾವಧಿಯಲ್ಲಿ ಮಾನವ ಕುಲಕ್ಕೆ ತುಂಬ ಪ್ರಯೋಜನಕಾರಿಯಾದ, ಅತ್ಯಂತ ಶ್ರೇಷ್ಠ ಕಾರ್ಯ ಮಾಡಿರಬೇಕು. ವಿವಿಧ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವಿವಿಧ ಅಕಾಡೆಮಿಗಳು ಆಯ್ಕೆ ಮಾಡಿ ಬಹುಮಾನ ವನ್ನು ನಿರ್ಧರಿಸುತ್ತವೆ. ಈ ಬಹುಮಾನ ನೀಡುವಲ್ಲಿ ಅಭ್ಯರ್ಥಿಗಳ ರಾಷ್ಟ್ರೀಯತೆಯನ್ನು ಪರಿಗಣಿಸಬಾರದೆಂಬುದನ್ನು ನೊಬೆಲ್ ಸೂಚಿಸಿದ್ದಾರೆ. ಇಂತಹ ಪುರಸ್ಕಾರವನ್ನು ಪಡೆದ ಸಾಹಿತಿಗಳನ್ನು ಕುರಿತ ಕೃತಿಗಳನ್ನು ಕನ್ನಡಿಗರಿಗೆ ತಲುಪಿಸುವುದು ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ.

ಪ್ರಸ್ತುತ 'ನೊಬೆಲ್ ವಾಚಿಕೆಗಳು' ಎಂಬ ಈ ಮಾಲಿಕೆಯ ಕೃತಿಗಳನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಯು ಸಿದ್ಧಪಡಿಸಿ ಕೊಟ್ಟಿದೆ. ಈ ಅಕಾಡೆಮಿಯ ಹಿಂದಿನ ಅಧ್ಯಕ್ಷರಾದ ಪ್ರೊ. ಬರಗೂರು ರಾಮಚಂದ್ರಪ್ಪ ಅವರು ಬೇರೆ ಬೇರೆ ಲೇಖಕರಿಂದ ಹಸ್ತಪ್ರತಿಯನ್ನು ಸಿದ್ಧಪಡಿಸಲು ನೆರವಾಗಿದ್ದಾರೆ; ಅಂತೆಯೇ ಅಕಾಡೆಮಿಯು ಸಿದ್ಧಪಡಿಸಿದ ಈ ಕೃತಿಗಳನ್ನೆಲ್ಲಾ ಕನ್ನಡ ಪುಸ್ತಕ ಪ್ರಾಧಿಕಾರವು ಪ್ರಕಟಿಸಲು ಇಂದಿನ ಅಧ್ಯಕ್ಷರಾದ ಶ್ರೀ ಶಾಂತರಸರವರು ಒಪ್ಪಿಗೆ ನೀಡಿದ್ದಾರೆ. ಇವರಿಬ್ಬರಿಗೂ ಪ್ರಾಧಿಕಾರವು ಆಭಾರಿಯಾಗಿದೆ. ಈ ಮಾಲಿಕೆಯಲ್ಲಿನ ಕೃತಿಗಳು ಇಷ್ಟು ಅಚ್ಚುಕಟ್ಟಾಗಿ ಹೊರಬರಲು ಶ್ರೀ ಲಿಂಗ ರಾಜು ಅವರು ಶ್ರಮಿಸಿದ್ದಾರೆ. ಪ್ರಸ್ತುತ 'ಅಕ್ಟೇವಿಯಾ ಪಾಜ್ ವಾಚಿಕೆ'ಯನ್ನು ಪರಿಶ್ರಮದಿಂದ ಸಿದ್ಧಪಡಿಸಿರುವ ಶ್ರೀಮತಿ ಕೆ.ಎನ್. ವಿಜಯಲಕ್ಷ್ಮಿ ಅವರಿಗೂ ಹಾಗೆಯೇ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ನೀತು ಗ್ರಾಫಿಕ್ಸ್ ಅವರಿಗೂ ಈ ಪುಸ್ತಕಕ್ಕೆ ಹೊದಿಕೆಯನ್ನು ಬರೆದುಕೊಟ್ಟ ರಾ. ಸೂರಿ ಯವರಿಗೂ ಕೃತಜ್ಞತೆಗಳು. ಸಹೃದಯ ಕನ್ನಡಿಗರು ಈ ಮಾಲಿಕೆಯನ್ನು ಆದರ ದಿಂದ ಸ್ವಾಗತಿಸಿ ತಮ್ಮ ಅಭಿಪ್ರಾಯಗಳನ್ನು ತಿಳಿಸುತ್ತಾರೆಂದು ಆಶಿಸುತ್ತೇನೆ.

ನೆಲಮನೆ ದೇವೇಗೌಡ
ಅಧ್ಯಕ್ಷರು
ಕನ್ನಡ ಪುಸ್ತಕ ಪ್ರಾಧಿಕಾರ

ನನ್ನ ಮಾತು

ಅಕ್ಟೇವಿಯಾ ಪಾಜ್ ನೊಬೆಲ್ ಪಾರಿತೋಷಕ ವಿಜೇತ ಕವಿ. ಈ ಕವಿಯ ನಾಲ್ಕು ಪುಸ್ತಕಗಳನ್ನು ಆಧಾರವಾಗಿಟ್ಟುಕೊಂಡು ನಾನು ಈ ಅನುವಾದವನ್ನು ಸಿದ್ಧಪಡಿಸಿದ್ದೇನೆ. ಕವಿ-ಕಾವ್ಯವನ್ನು ಕುರಿತು ಮಾಹಿತಿಯನ್ನು ಸಂಗ್ರಹಿಸಿ ಮುನ್ನುಡಿ ಬರೆದಿದ್ದೇನೆ. ಇದನ್ನು ಓದಿಕೊಂಡರೆ ಕವಿತೆಗಳಿಗೆ ಒಂದು ಪ್ರವೇಶ ಸಿಕ್ಕುತ್ತದೆ. ಪಾಜ್ ಉನ್ನತ ಪ್ರತಿಭೆಯ ಕವಿ. ಲೋಕದ ಅನೇಕ ತಿಳುವಳಿಕೆಗಳು ಅವನ ಕಾವ್ಯದಲ್ಲಿ ಹಾಸುಹೊಕ್ಕಾಗಿದೆ. ಆಧುನಿಕ ಸಂವೇದನೆ ಪಾಜ್‌ನ ಕವಿತೆಯಲ್ಲಿ ಸೂಕ್ಷ್ಮವಿವರಗಳೊಂದಿಗೆ ಅಭಿವ್ಯಕ್ತಗೊಂಡಿದೆ.

ಹಿಂದೆ ಪ್ರೊ. ಬರಗೂರು ರಾಮಚಂದ್ರಪ್ಪನವರು ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ ಈ ವಾಚಿಕೆಯನ್ನು ಸಿದ್ಧಪಡಿಸಲು ಒಪ್ಪಿಸಿದಾಗ ನನಗೆ ಸಂತೋಷವಾಯಿತು. ಅವರಿಗೆ ನಾನು ಮೊದಲಿಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಈ ಮೊದಲೇ ಪಾಜ್‌ನ ಕೆಲವು ಕವಿತೆಗಳನ್ನು ನಾನು ಅನುವಾದಿಸಿದ್ದೆ. ಈ ಕೃತಿಯನ್ನು ಪ್ರಾಧಿಕಾರ ಪ್ರಕಟಿಸಲು ಪ್ರೇರಕರಾದ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಶಾಂತರಸ ಅವರಿಗೆ ಹಾಗೂ ಅನುವಾದವನ್ನು ಪ್ರಕಟಿಸುತ್ತಿರುವ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ನೆಲಮನೆ ದೇವೇಗೌಡ ಅವರಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಕೆ.ಎನ್. ವಿಜಯಲಕ್ಷ್ಮಿ

ಪರಿವಿಡಿ

Our cultural crisis, for perhaps the first time in history, is the same as the crisis of our species.... It is not Western culture that is in danger of being destroyed tomorrow, as the cultures of the Greeks and the Arabs, the Aztecs and the Egyptians were destoryed in the past: it is man himself. The old plurality of cultures, postulating various and contrary ideals, and offering various and contrary views of the future, has been replaced by a single civilization and a single future. Until recently, history was a meditation on the many truths proposed by many cultures, and a verification of the radical heterogencity of every society and archetype... All of today's civilizations derive from that of the Western world, which has assimilated or crushed its rivals... World history has become everyone's task, and our own labyrinth is the labyrinth of all mankind.

Octavio Paz, *The Labyrinth of Solitude*

ಕವಿಕಾವ್ಯ ಪರಿಚಯ

ಅಕ್ಟೇವಿಯಾ ಪಾಜ್ ಮಾರ್ಚ ೩೧-೧೯೧೪ರಲ್ಲಿ ಮೆಕ್ಸಿಕೋ ನಗರದಲ್ಲಿ ಹುಟ್ಟಿದನು. ಅವನ ತಾತ ಹೆಸರಾಂತ ಪತ್ರಿಕೋದ್ಯಮಿ. ಫ್ರೆಂಚರ ವಿರುದ್ಧ ಸೆಣಸಿದ ವೀರ. ತಂದೆ ವಕೀಲ. ಆತನೂ ಮೆಕ್ಸಿಕನ್ ಕ್ರಾಂತಿಯಲ್ಲಿ ಭಾಗವಹಿಸಿದವನು. ತಾಯಿ ಸ್ಪಾನಿಷ್ ಹೆಂಗಸು.

ಬಾಲ್ಯದಲ್ಲಿ ತನ್ನ ತಾಯ್ನಾಡಾದ ಮೆಕ್ಸಿಕೋ ಬಗ್ಗೆ ಅಭಿಮಾನಿಯಾಗಿದ್ದ ಪಾಜ್ ತನ್ನ ಕೃತಿಗಳಲ್ಲಿ ಪದೇ ಪದೇ ತನ್ನ ದೇಶವನ್ನು ಸ್ಮರಿಸುತ್ತಾನೆ. ಬಾಲ್ಯದ ನೆನಪುಗಳ ಬಗ್ಗೆ ಪಾಜ್ ಹೀಗೆ ಹೇಳುತ್ತಾನೆ: ''ನಾನು ಬಹಳ ದೊಡ್ಡಮನೆಯಲ್ಲಿ ವಾಸಿಸುತ್ತಿದ್ದೆ. ಸುತ್ತಲೂ ಸುಂದರ ತೋಟ. ಸಿವಿಲ್ ಯುದ್ಧದಿಂದ ನಮ್ಮ ಸಂಸಾರ ಬಡತನದಿಂದ ಬಳಲುವಂತಾಯಿತು. ನಮ್ಮ ಮನೆಯಲ್ಲಿ ಅತ್ಯಂತ ಪುರಾತನ ಮೇಜು, ಕುರ್ಚಿ ಪುಸ್ತಕಗಳಿದ್ದವು. ನಮ್ಮ ಹಳೆಯಮನೆಯ ಗೋಡೆಗಳು ಕುಸಿಯುವಂತಿತ್ತು. ನಾನು ಮಗ್ಗಲಲ್ಲೇ ಇದ್ದ ಬೇರೊಂದು ವಿಶಾಲವಾದ ಕೂಲ್‌ಗೆ ಹೋದೆ. ಅದರ ಒಂದು ಬದಿಗೆ ಗೋಡೆ ಇರಲಿಲ್ಲ. ಅದಕ್ಕೆ ಪರದೆ ಇಳಿಬಿಟ್ಟು ಹೇಗೋ ಗಾಳಿಮಳೆಗಳಿಂದ ರಕ್ಷಿಸಿಕೊಳ್ಳುತ್ತಿದ್ದೆ. ಅಲ್ಲಿ ಹರಿದಾಡುವ ಕ್ರಿಮಿಕೀಟಾದಿಗಳೇ ನಮ್ಮ ಮನೆಯನ್ನು ಸಂಶೋಧಿಸಿತು.''

ಪಾಜ್ ತನ್ನ ಕವನಸಂಕಲನಗಳನ್ನು ೧೯೩೧ರಿಂದ ಪ್ರಕಟಿಸಲು ಆರಂಭಿಸಿದ. ಆಗ ಆತನಿಗೆ ಹದಿನೇಳು ವರ್ಷ. ಮೊದಲನೆಯ ಸಂಕಲನ ***'Savage moon'*** (ಕ್ರೂರಚಂದ್ರ). ೧೯೩೭ರ ವೇಳೆಗೆ ಅವನಿಗೆ ಅನೇಕ ಯುವಕವಿಗಳ ಪರಿಚಯವಾಯಿತು. ನೆರೂಡ, ಡಬ್ಲ್ಯೂ.ಎಚ್. ಆಡನ್ ಕವಿಗಳನ್ನು ಭೆಟ್ಟಿಯಾದ ಪಾಜ್ ೧೯೩೮ರಲ್ಲಿ ಮೆಕ್ಸಿಕೋದಲ್ಲಿನ ರಾಜಕೀಯ ದಿನಪತ್ರಿಕೆಯ ಅಂಕಣಕಾರನಾಗಿ ಬರೆಯಲು ಆರಂಭಿಸಿದ. ಅದರ ಹೆಸರು 'ಎಲಿ ಪಾಪ್ಯುಲರ್'. ಅವನು ತನ್ನ ಕಾವ್ಯವನ್ನು ಸ್ಪಾನಿಷ್ ಭಾಷೆಯಲ್ಲಿ ಬರೆದ. ಹಿಟ್ಲರನ ದಮನಶೀಲ ಚಟುವಟಿಕೆಗಳ ಪ್ರಭಾವ ಇವನ ಕಾವ್ಯಕ್ರಿಯೆಯ ಮೇಲೂ ಆಯಿತು. ೧೯೪೧ರಲ್ಲಿ ಬಹಳ ಸಮರ್ಥವಾದ ವಿವಿಧ ಕವಿಗಳ ಕವಿತೆಗಳನ್ನು ಸಂಪಾದಿಸಿದ. ಅದರ ಹೆಸರು ***Laural***. ೧೯೪೩ರಲ್ಲಿ ***'The***

Prodigal Son' ಎಂಬ ಪತ್ರಿಕೆಯನ್ನು ಹೊರತಂದಾಗ ಅಂತರ್ರಾಷ್ಟ್ರೀಯ ಲೇಖಕರ ಪರಿಚಯ ಈತನಿಗಾಯಿತು. ಜಾನ್‌ಡನ್ ಕವಿತೆಗಳನ್ನು ಪಾಜ್ ಸ್ಪಾನಿಷ್ ಭಾಷೆಗೆ ಅನುವಾದಿಸಿದ **(Eliot Lautre amont)**. ಪಾಜ್‌ಗೆ ಸರಿಯಾದ ನೌಕರಿಯಿಲ್ಲದ ಕಾರಣ ಆತನು ಸೆಂಟ್ರಲ್ ಬ್ಯಾಂಕಿನಲ್ಲಿ ಸುಟ್ಟು ಹಾಕಲು ಇಟ್ಟ ಹರಿದ ನೋಟುಗಳನ್ನು ಎಣಿಸುವ ಕೆಲಸವನ್ನು ನಿರ್ವಹಿಸ ಬೇಕಾಯಿತು. ಪಾಜ್‌ಗೆ ೧೯೪೪ರಲ್ಲಿ ಗುಜ್ಜನ್ ಹೆಮ್ ಎಂಬ ಫೆಲೋಷಿಪ್ ದೊರಕಲು ನ್ಯೂಯಾರ್ಕ್, ಸ್ಯಾನ್‌ಫ್ರಾನ್ಸಿಸ್ಕೊಗಳಿಗೆ ಹೋಗಿ ಅಲ್ಲಿ ತನ್ನ ಮೊದಲ ಗದ್ಯಗ್ರಂಥ *'The Labyrinth of Solitude'* ಎಂಬುದನ್ನು ೧೯೫೦ರಲ್ಲಿ ಪ್ರಕಟಿಸಿದ್ದು, ಅದರಲ್ಲಿ ಅಭಿವೃದ್ಧಿ ಹೊಂದದೆ ಇರುವ ಹಿಂದುಳಿದ ಬಡರಾಷ್ಟ್ರಗಳ ಕಾವ್ಯದ ಬಗ್ಗೆ ವಿಷಾದದಿಂದ ಬರೆದ. ೧೯೪೫ರಲ್ಲಿ ಪ್ಯಾರಿಸ್ಸಿಗೆ ಬಂದ ಪಾಜ್ ಅಲ್ಲಿ ಆ್ಯಂಡ್ರಿ ಬ್ರಿಟನ್ ಎಂಬ ಕವಿಯೊಂದಿಗೆ ನಿಕಟ ಸ್ನೇಹ ಬೆಳಸಿ ಆತನೊಂದಿಗೆ 'ಸರ್ರಿಯಲಿಸಂ ಪಂಥ'ದ ಚಟುವಟಿಕೆಗಳಲ್ಲಿ ಭಾಗವಹಿಸತೊಡಗಿದ. ಪಾಜ್‌ನ ಅನೇಕ ಕೃತಿಗಳು ಆ ಕಾಲದಲ್ಲಿ ಹೊರ ಬಂದವು. ರಂಗಭೂಮಿಯ ಚಟುವಟಿಕೆಗಳು, ಪ್ರದರ್ಶನಗಳು, ಭಾಷಣಗಳು ಹಾಗೂ ವಿವಾದಾತ್ಮಕ ಚರ್ಚೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ೧೯೫೬ರ ವೇಳೆಗೆ ಕಾವ್ಯ ಮೀಮಾಂಸೆಯ ಬಗ್ಗೆ ಅತ್ಯಂತ ಮಹತ್ವಪೂರ್ಣ ಪುಸ್ತಕವನ್ನು ಬರೆದ. ಅದರ ಹೆಸರು *'Elarcylazira' 'The bow and the Lyre'* ಎಂದು.

೧೯೬೨ರಲ್ಲಿ ಆಕ್ಟೇವಿಯಾ ಪಾಜ್ ಮೆಕ್ಸಿಕನ್ ರಾಯಭಾರಿಯಾಗಿ ಇಂಡಿಯಾಕ್ಕೆ ಬಂದ. ನಮ್ಮ ದೇಶದಲ್ಲಿ ಮೇರಿಜೋಸಿ ಟ್ರಾಮಿನಿ ಎಂಬ ಹೆಣ್ಣನ್ನು ಸಂಧಿಸಿ ವಿವಾಹವಾದ. ತನ್ನ ಜೀವನದಲ್ಲೇ ಮಹತ್ವಪೂರ್ಣ ಘಟನೆ ನಿಮ್ಮ ದೇಶದಲ್ಲಿ ಸಂಭವಿಸಿತು ಎಂದು ಹೇಳಿಕೊಂಡಿದ್ದಾನೆ. ಇಂಡಿಯಾದ ಕಲೆ, ಸಂಸ್ಕೃತಿ, ತತ್ವಶಾಸ್ತ್ರ, ಕಾವ್ಯ, ರಾಜಕೀಯಗಳ ಗಂಭೀರ ಅಧ್ಯಯನ ನಡೆಸಿದ ಪಾಜ್ ಹತ್ತುವರ್ಷಗಳಲ್ಲಿ ಎಂಟು ಕವನಸಂಗ್ರಹಗಳನ್ನು ಪ್ರಕಟಿಸಿದ. *'Conjunctions and disjunctions'* ಎಂಬುದು ಆತನ ಶ್ರೇಷ್ಠ ಕೃತಿಯಾಗಿದೆ. ಮೆಕ್ಸಿಕನ್ ವಿದ್ಯಾರ್ಥಿಗಳು ತಮ್ಮ ಸರ್ಕಾರದ ವಿರುದ್ಧ ಪ್ರತಿಭಟಿಸಿ ಚಳುವಳಿ ನಡೆಸಿದ ಕಾರಣ ಇಂಡಿಯಾದಲ್ಲಿ ರಾಯಭಾರಿ ಕೆಲಸಕ್ಕೆ ೧೯೬೮ರಲ್ಲಿ ಪಾಜ್ ರಾಜಿನಾಮೆ ಇತ್ತ. ಅನಂತರ ಕೆಲವು ವರ್ಷಗಳ ಕಾಲ ಕೇಂಬ್ರಿಡ್ಜ್, ಟೆಕ್ಸಾಸ್, ಹೊವರ್ಡ್ ಯೂನಿವರ್ಸಿಟಿಗಳಲ್ಲಿ ಪ್ರಾಧ್ಯಾಪಕನಾಗಿ ದುಡಿದು ೧೯೭೧ರಲ್ಲಿ

ಪಾಜ್ ತನ್ನ ತಾಯ್ನಾಡಾದ ಮೆಕ್ಸಿಕೋಗೆ ವಾಪಸ್ಸಾದ. ಅಲ್ಲಿ ಸಾಂಸ್ಕೃತಿಕ ಹಾಗೂ ರಾಜಕೀಯಕ್ಕೆ ಸಂಬಂಧಿಸಿದ ಮಾಸಪತ್ರಿಕೆ 'ಪ್ಲೂರಲ್' ಸಂಪಾದಕನಾಗಿ ದುಡಿದ. *'Excelsior'* ಎಂಬ ದಿನಪತ್ರಿಕೆಯ ಸಂಬಂಧಿ ಪತ್ರಿಕೆಯೇ ಪ್ಲೂರಲ್ *'Plural'*. ಪ್ಲೂರಲ್ ಮಾಸಪತ್ರಿಕೆಯನ್ನು ೧೯೭೬ರಲ್ಲಿ ಮೆಕ್ಸಿಕನ್ ಸರ್ಕಾರ ಮುಟ್ಟುಗೋಲು ಹಾಕಿದಾಗ ಅಲ್ಲಿ ನೌಕರರೆಲ್ಲ ಸೇರಿ ಬೇರೊಂದು ಮಾಸ ಪತ್ರಿಕೆಯನ್ನು ಆರಂಭಿಸಿದರು. ಅದರ ಹೆಸರು ***Return. (Vuelta)*** ಇದೊಂದು ಸಮರ್ಥ ಪತ್ರಿಕೆ ಎಂಬ ಹೆಗ್ಗಳಿಕೆ ಗಳಿಸಿ ಇಡೀ ಲ್ಯಾಟಿನ್ ಅಮೆರಿಕದಲ್ಲೆಲ್ಲಾ ಪ್ರಸಿದ್ಧಿ ಪಡೆಯಿತು. ಬೌದ್ಧಿಕ ಸಾಮರ್ಥ್ಯದ ಮಾಸಪತ್ರಿಕೆ ಎಂದು ಹೆಸರುವಾಸಿಯಾಯಿತು.

೧೯೭೦ರಲ್ಲಿ ಪಾಜ್ ಏಳು ಪ್ರಭಾವಶಾಲೀ ಪುಸ್ತಕಗಳನ್ನು ಪ್ರಕಟಿಸಿದ: ೧. ಮೆಕ್ಸಿಕನ್ ರಾಜಕೀಯ, ೨. ಮೆಕ್ಸಿಕನ್ ಕವಿ ಕ್ಸೇವಿಯರ್ ಎಲ್ಲರುಟಿಯ, ೩. ಚಾರ್ಲ್ಸ್ ಫೋರರ್‌ನ ಸಮಗ್ರ ಕಾವ್ಯ (ಆರು ಭಾಷೆಗಳಲ್ಲಿ ಈತನ ಕವಿತೆ ಗಳು ಅನುವಾದಿತವಾದವು) ೪. ***The Children of the mire*** (ಮಣ್ಣಿನ ಮಕ್ಕಳು) ೫. ಹೊವರ್ಡ್‌ನಲ್ಲಿ ನಡೆದ ಭಾಷಣಗಳ ಮಾಲೆ ೬. ರಮ್ಯಪಂಥ ೭. *The monkey grammarian.*

ಇದೇ ಕಾಲದಲ್ಲಿ ದೃಶ್ಯಕಲೆಯ ಬಗ್ಗೆ ವಿಶೇಷ ಅಭ್ಯಾಸ ಮಾಡಿದ ಪಾಜ್ ಪಾಶ್ಚಾತ್ಯ ತಾಂತ್ರಿಕಕಲೆ ಎಂಬ ಪ್ರದರ್ಶನವನ್ನು ಏರ್ಪಡಿಸಿದ. ಈ ಪ್ರದರ್ಶನದಲ್ಲಿ ಎಷ್ಟೋ ಕಲಾವಿದರು ಬೆಳಕಿಗೆ ಬಂದರು. ರಫಿನೋಟ ಮಯೊ, ರಾಬರ್ಟ್ ಮದರ್‌ವೆಲ್, ಪೆರ್ರಿಅಲಿಚಿನ್ಸ್ಕಿ, ಅಜ್ಞಯುಂಕರ್ಸ್, ಬ್ರಿಯನ್‌ಸಿಸ್ಸನ್, ಹಸ್ರಿಮಿಚಕ್ಸ್, ರಾಬರ್ಟ್ ಕಾಸ್ಕೆನ್ ಬರ್ಗ ಮತ್ತು ಛಾಯಾ ಗ್ರಾಹಕ ಮ್ಯಾನ್ಯುಯಲ್ ಆಲ್‌ವಸ್ ಬ್ರಾವೋ ಮತ್ತು ಇತರರು.

೧೯೮೦ರಲ್ಲಿ ಪಾಜ್ ಜಗತ್ತಿನ ಅನೇಕ ಕಡೆಗಳಲ್ಲಿ ಭಾಷಣ ಮಾಡಲು ತೊಡಗಿದ. ಇಂಡಿಯಾ, ಜಪಾನ್, ಸೌತ್ ಅಮೆರಿಕ, ಸ್ಪೈನ್, ಜರ್ಮನಿ, ಮೆಕ್ಸಿಕನ್ ಟಿ.ವಿಯಲ್ಲಿ ಕಾಣಿಸಿಕೊಳ್ಳುತ್ತಾ ಭಾಷಣ ಕಾವ್ಯವಾಚನಗಳಲ್ಲಿ ತೊಡಗಿದ. ಮೆಕ್ಸಿಕನ್ ಇತಿಹಾಸ, ಕಲೆ, ಸಾಹಿತ್ಯ, ರಾಜಕೀಯ ಶಾಂತಿ, ಪ್ರಜಾ ಪ್ರಭುತ್ವ ಕುರಿತಾದ ಲೇಖನಗಳುಳ್ಳ *'One earth four or five worlds;* ಎಂಬ ಕೃತಿಯನ್ನು ೧೯೮೫ರಲ್ಲಿ ಗ್ರೇಟ್‌ಬ್ರಿಟನ್‌ನ ಕಾರ್‌ಕನೆಟ್ ಪ್ರೆಸ್‌ನವರು ಪ್ರಕಟಿಸಿದರು. ಪಾಜ್‌ನ ಮತ್ತೊಂದು ಶ್ರೇಷ್ಠಕೃತಿಯನ್ನು ೧೯೮೭ರಲ್ಲಿ ಇದೇ ಮುದ್ರಕರು ಪ್ರಕಟಿಸಿದರು. ಅದರ ಹೆಸರು 'ಆನ್ ಪೂಯಟ್ಸ್ ಆ್ಯಂಡ್

ಆದರ್ಸ್'. ಇದರಲ್ಲಿ ಮಹಾಕವಿಗಳು, ತತ್ವಚಿಂತಕರು ಆದ ಫ್ರಾಸ್ಟ್, ವಾಲ್ಟ್ ವಿಟ್‌ಮನ್, ವಿಲಿಯಂ ಕಾರ್ಲೋಸ್ ವಿಲಿಯಮ್ಸ್, ಚಾರ್ಲ್ಸ್ ಬಾಮ್ ಲಿಸನ್ಸ್, ಜೀನ್ ಪಾಲ್ ಸಾರ್ತ್ರ, ಬೋದಿಲೇರ್, ಆ್ಯಂಪ್ರಿ ಬ್ರಿಟನ್ ಹೆನ್ರಿ ಮಚಕ್ಸ್, ದಸ್ತವೋಸ್ಕಿ, ಲೂಯಿಸ್‌ಸುರ್‌ನುಡ, ಆರ್ಟೆಗ ಟಿ ಗಾಸೆ, ಗುಲಾಗ್ ಇವರೊಂದಿಗೆ ಪಾಜ್ ನಡೆಸಿದ ಚರ್ಚೆಗಳು, ಲೇಖನಗಳೂ ಇವೆ. ಅಕ್ಟೇವಿಯಾ ಪಾಜ್ ಅವರನ್ನು ಅಂತರಾಷ್ಟ್ರೀಯ ಕವಿ ಎಂದು ಪರಿಗಣಿಸಿ ೧೯೬೩ರಲ್ಲಿ ಗ್ರ್ಯಾಂಡ್‌ಪ್ರಿಕ್ಸ್ ಪ್ರಶಸ್ತಿಯನ್ನು, ೧೯೭೭ರಲ್ಲಿ ಜರೂಸಿಲಮ್ ಪ್ರಶಸ್ತಿಯನ್ನೂ, ೧೯೯೦ರಲ್ಲಿ ನೊಬೆಲ್ ಪ್ರಶಸ್ತಿಯನ್ನೂ ಕೊಟ್ಟು ಗೌರವಿಸ ಲಾಯಿತು.

ತನ್ನ ಆತ್ಮೀಯ ಗುರು ಹಾಗೂ ಕವಿಯಾದ ಆ್ಯಂಡ್ರಿಬ್ರಿಟನ್ ಸಾವನ್ನಪ್ಪಿ ದಾಗ ಪಾಜ್ ಹೀಗೆ ಹೇಳುತ್ತಾನೆ. ''ಎಲ್ಲರ ಕೇಂದ್ರ ವ್ಯಕ್ತಿಯಾಗಿ ಗಮನಸೆಳೆದ ಆತನ ಪ್ರಭಾವದಿಂದ ಬಿಡಿಸಿಕೊಂಡು ಹೊರಚಿಮ್ಮುವುದೇ ಕಷ್ಟದ ಕೆಲಸ. ನಾನು ಆತನ ಪ್ರತಿರೂಪವೂ, ಪ್ರತಿಧ್ವನಿಯೂ ಆದೆ ಎಂಬ ಭೀತಿ ನನ್ನಲ್ಲಿತ್ತು. ಇದೇ ಭಾವನೆ ಆತನ ಅನೇಕ ಶಿಷ್ಯರಲ್ಲೂ ಇತ್ತು. ನಾನು ಏನೇ ಬರೆಯಲಿ ಆ್ಯಂಡ್ರಿಬ್ರಿಟನ್‌ರೊಂದಿಗೆ ಮೌನ ಸಂವಾದ ನಡೆಸುತ್ತಿರುವೆ ಎಂದು ಅನ್ನಿಸುತ್ತಿತ್ತು.'' ಎಂದಿದ್ದಾನೆ. ಇದಕ್ಕೆ ಪೂರಕವಾಗಿ ಇಂಗ್ಲೀಷ್ ವಿಮರ್ಶಕ ಜೇಸನ್ ವಿಲ್ಸನ್ ''ಪಾಜ್‌ನ ಗದ್ಯಕೃತಿಗಳಲ್ಲಿ ಅದರಲ್ಲೂ ಆತನ ಕಾವ್ಯ ಮೀಮಾಂಸೆಗೆ ಸಂಬಂಧಿಸಿದ ಕೃತಿಯಲ್ಲಿ ಆತನ ಗುರು ಆ್ಯಂಡ್ರಿಬ್ರಿಟನ್ ಪ್ರಭಾವ ಬೀರಿದ್ದಾನೆ ಎಂದಿದ್ದಾನೆ. ಪಾಜ್‌ನ ಮತ್ತೊಂದು ವಿಚಾರಪೂರ್ಣಕೃತಿ ***alternating current*** ಎಂಬುದು. ಕವಿಗಳಲ್ಲಿ ಎರಡು ಬಗೆಯ ಪ್ರವೃತ್ತಿ ಗಳನ್ನು ಪಾಜ್ ಗುರುತಿಸಿದ್ದಾನೆ. ಒಂದು, ಕಾವ್ಯ ಪರಂಪರೆಯನ್ನು ಕುರಿತು ತನ್ನದೇ ಆದ ವಿಚಾರಗಳು- ಮತ್ತೊಂದು ಬುದ್ಧಿಶಕ್ತಿಯ ಮೂಲಕ ಇತಿಹಾಸ ವನ್ನು ಕಲಾತ್ಮಕವಾಗಿ ಪುನನಿರ್ಮಿಸುವಿಕೆ ಹಾಗೂ ಆಧುನೀಕರಣಗೊಳಿಸುವ ಪ್ರತಿಭೆ. /

ವಿಮರ್ಶಾ ತತ್ವಗಳು ಫ್ರಾನ್ಸ್ ಹಾಗೂ ಇಂಗ್ಲೆಂಡಿನಲ್ಲಿ ಬೆಳೆದಂತೆ ಸ್ಪೈನಿನಲ್ಲಿ ಬೆಳೆಯಲಿಲ್ಲ. ಪಾಜ್‌ನ ವಿಚಾರಪೂರ್ಣ ಬರಹಗಳು ಈ ಕೊರತೆ ಯನ್ನು ನಿವಾರಿಸಿದವು. ಸಾಮಾಜಿಕ, ಸಾಹಿತ್ಯಕ, ವಿಮರ್ಶಾತತ್ವಗಳ ಬಗ್ಗೆ ಚಿಂತನೆ ನಡೆಸಿದ ಪಾಜ್ ೧೯೫೦ರಲ್ಲಿ ***'Labyrinth of Solitude'*** (ನಿರ್ಜನ ಪ್ರದೇಶದ ತೊಡಕುದಾರಿಗಳು) ಕೃತಿಯಲ್ಲಿ ಮೆಕ್ಸಿಕನ್ ಸಂಸ್ಕೃತಿ ಇತಿಹಾಸಗಳನ್ನು

ಕೂಲಂಕುಷವಾಗಿ ವಿಶ್ಲೇಷಿಸಿದ್ದಾನೆ. 'ಮೆಕ್ಸಿಕೋ ನಗರ ಯುದ್ಧಕ್ಕೆ ಸಿಕ್ಕು ಸುಟ್ಟು ಬೂದಿಯಾಗಿತ್ತು, ಪುನಃ ಮೈದಾಳಿ ನಿಂತಿದೆ. ಮೆಕ್ಸಿಕನ್ ಗಂಡುಹೆಣ್ಣುಗಳು ಎಲ್ಲಾ ಸಮಾಧಿಗ್ರಸ್ತ ಪ್ರತಿಮೆಗಳೇ; ಆಸೆ ಆಕಾಂಕ್ಷೆಗಳಿಂದ ಮಿಡಿವ ಜೀವನ ವೃತ್ತಾಂತವನ್ನು ಅರುಹುವ ಪ್ರತಿಮೆಗಳು', ಎನ್ನುವ ಪಾಜ್ ಈ ಕೃತಿಯ ಮೂಲಕ ಲ್ಯಾಟಿನ್ ಅಮೆರಿಕನ್ನರ ಬೌದ್ಧಿಕಕ್ಷೇತ್ರದಲ್ಲಿ ಜಾಗೃತಿಯನ್ನುಂಟು ಮಾಡಿದನು. 'ಇತಿಹಾಸ ಎಂಬುದು ಈಗಾಗಲೇ ಯೋಚಿಸಿರುವಂತೆ ಬೌದ್ಧಿಕ ಜ್ಞಾನದ ಒಂದು ನಿರ್ಮಿತಿ. ಇದು ಮಾತು ಹಾಗೂ ಲಯಬದ್ಧ ಕಾವ್ಯದ ನಡುವೆ ನಿಂತಿದೆ. ಇತಿಹಾಸಕಾರನಿಗೆ ನಿರ್ಧಾರಿತ ಮಾನದಂಡಗಳಿಲ್ಲ. ವಿಜ್ಞಾನಿಗೂ, ಕವಿಗೂ ಕಾಣ್ಕೆಗಳಿರುತ್ತವೆ. ಆಯಾ ಕಾಲದ ಘಟನೆಗಳನ್ನು ಸನ್ನಿವೇಶಗಳಿಗೆ ತಕ್ಕಂತೆ ವಿಂಗಡಿಸಿ ಅಭಿವ್ಯಕ್ತಿಸುವುದು ಕವಿಯ ಸೃಷ್ಟಿಕ್ರಿಯೆ. ಇತಿಹಾಸವನ್ನು ಕೂಲಂಕುಷವಾಗಿ ಗ್ರಹಿಸಿ ಕಾವ್ಯಪ್ರತಿಮೆಯಲ್ಲಿ ಅದನ್ನು ಪುನರ್ ನಿರ್ಮಿಸಲಾಗುತ್ತದೆ. ಆಯಾ ಕಾಲದೇಶಗಳ ನಡಾವಳಿಗಳು, ಆಚರಣೆಗಳು ಇವುಗಳನ್ನು ಪಾಜ್ ವಿಶ್ಲೇಷಿಸುತ್ತಾ ಶವಸಂಸ್ಕಾರದ ಸಂದರ್ಭದಲ್ಲಿ ಸಕ್ಕರೆ, ಮಣ್ಣು, ತೆಂಗಿನಗರಿ ವಹಿಸುವ ಮಹತ್ವದ ಪಾತ್ರವನ್ನು ವಿವರಿಸುತ್ತಾನೆ. ಈಗೀಗ ಸಂಸ್ಕಾರ ಮಾಡುವಲ್ಲಿ ನಂಬಿಕೆ ಕಡಿಮೆಯಾಗುತ್ತಿದೆ. ಆಚರಣೆಗಳಿಗೂ ನಂಬಿಕೆಗಳಿಗೂ ವ್ಯತ್ಯಾಸವಿದೆ ಎನ್ನುತ್ತಾನೆ. ಆಚರಣೆಗಳು ಬದಲಾಗದೆ ಸ್ಥಿರವಾಗಿ ಉಳಿಯುವಂಥಹವು. ನಂಬಿಕೆಗಳು ಚಲನಶೀಲ, ಕಾಲಕಾಲಕ್ಕೂ ಬದಲಾಗುತ್ತಿರುತ್ತವೆ. ಮನುಷ್ಯನ ನಂಬಿಕೆಗಳಿಗಿಂತಲೂ ಆಚರಣೆಗಳು ಅವನ ವ್ಯಕ್ತಿತ್ವವನ್ನು ಪ್ರತಿಬಿಂಬಿಸಬಲ್ಲದು ಎಂದಿದ್ದಾನೆ. ಸ್ವಾತಂತ್ರ್ಯಸಮರ ಪೂರ್ವದಲ್ಲಿ ಲ್ಯಾಟಿನ್ ಅಮೆರಿಕನ್ನರಲ್ಲಿದ್ದ ನಂಬುಗೆ, ಆಚರಣೆಗಳು ಯುದ್ಧಾನಂತರದಲ್ಲಿ ಬುಡಮೇಲಾಯಿತು. ವಸಾಹತುಶಾಹಿ ರಾಜ್ಯಸ್ಥಾಪನೆಯಿಂದ ಚರ್ಚುಗಳ ಹಾಗೂ ರಾಜ್ಯದ ನಡುವೆ ಬಿರುಕು ತಲೆದೋರಿತು. ಮೆಕ್ಸಿಕನ್ ಕ್ರಾಂತಿ ಝಪಾತ ಯುದ್ಧದಲ್ಲಿ ಬರ್ಬರತೆ ಭೀಕರತೆಗಳು ತಲೆದೋರಿದವು. ಅದಕ್ಕೆ ಪ್ರತಿಕ್ರಿಯೆಯಾಗಿ ಪಾಜ್ ಹೀಗೆ ಹೇಳುತ್ತಾನೆ:

> ಒಳಿತಿನಿಂದ ಮತ್ತೊಂದು ಒಳಿತನ್ನ ಹುಡುಕುವೆವು,
> ಜಗತ್ತನ್ನು ಅದು ನೇರಗೊಳಿಸುವುದು.
> ನಂಬುಗೆ ಕಳೆದುಕೊಳ್ಳದ ಪರಿಪೂರ್ಣರು ನಾವು-
> ತೇಜೋವಧೆಗೆ ಗುರಿಯಾಗಿ ತೀರ ನೊಂದವರು
> ನಮಗೆ ಸಿಗಬೇಕಾದ್ದು ಸಿಗಲಿ, ಮುಗ್ಧರು ನಾವಲ್ಲ.

ಮುಂದೆ ಪಾಜ್ ಇತಿಹಾಸ ಹಾಗೂ ಕಾವ್ಯದ ಅವಿನಾಭಾವ ಸಂಬಂಧ ವನ್ನು ಕುರಿತು-

ಕಾವ್ಯ

ಸತ್ಯ ಇತಿಹಾಸಗಳ ನಡುವೆ ಕಟ್ಟಿದ ಸೇತುವೆ
ಆ ದಾರಿ ಈ ದಾರಿ ತಿಳಿಸಿ ಹೇಳಲಾಗದ ದಾರಿ;
ನೋಡಿದವರ ಕಣ್ಣಿಗೆ
ಸ್ಥಿರತೆಯಲ್ಲೂ ಚಲನಶೀಲತೆ ತೋರುವ ದಾರಿ

ಇತಿಹಾಸ ಬಿಟ್ಟು ಕಾವ್ಯವಿಲ್ಲ, ಇತಿಹಾಸದ ಕುಲುಮೆಯಲ್ಲೇ ಜೀವ ತಳೆವ ಕಾವ್ಯ ನಿಜವಾದ ಕಾವ್ಯ ಎನ್ನುತ್ತಾನೆ. ಒಬ್ಬ ವಿಮರ್ಶಕ ಹೊಂಚುಹಾಕುತ್ತಿರುವ ಬೇಟೆಗಾರನಂತಿರಬೇಕು. ಏಕಾಂಗಿಯಾಗಿ ತುದಿಯಂಚಿನಲ್ಲಿ ನಿಂತು ಹೀಗೆ ಲೋಕವನ್ನು ಪರಿವೀಕ್ಷಿಸುವುದು ಒಂದು ವಿಧದಲ್ಲಿ ವರ, ಮತ್ತೊಂದು ರೀತಿ ಯಲ್ಲಿ ಶಾಪ. ಪ್ರತಿಭೆಯ ಪುನರಾವರ್ತನೆಯನ್ನು ಹೊಸಬಗೆಯಲ್ಲಿ ಬೆಳಕಿಗೆ ತರುವುದೇ ವಿಮರ್ಶೆ. ಪ್ರತಿಭೆ ಕೇವಲ ಕಲ್ಪನೆಯ ಮಟ್ಟದಲ್ಲೇ ನಿಲ್ಲದೆ ಲೋಕದ ಕಠೋರ ವಾಸ್ತವಿಕ ಸತ್ಯದ ಅರಿವಿನ ಕಡೆಗೆ ಚಲಿಸಬೇಕು. ಆದ್ದ ರಿಂದಲೇ ಒಬ್ಬ ವಿಮರ್ಶಕ ಸತ್ಯದ ಅರಿವಿನ ಕಡೆಗೆ ಚಲಿಸಬೇಕು. ಆದ್ದ ರಿಂದಲೇ ಒಬ್ಬ ವಿಮರ್ಶಕ ಭ್ರಮೆಭ್ರಾಂತಿಗಳಿಗೆ ಗುರಿಯಾಗದೆ ಸತ್ಯದರ್ಶಕ ನಾಗಿರಬೇಕು. ಲ್ಯಾಟಿನ್ ಅಮೆರಿಕಾದಲ್ಲಿ ಪ್ರಜಾಪ್ರಭುತ್ವ ಸೋಲನ್ನು ಅನುಭವಿ ಸಿದಂತೆ ವಿಮರ್ಶೆಯೂ ಅಲ್ಲಿ ಸೋಲನ್ನು ಅನುಭವಿಸಿತು. ವಿಮರ್ಶೆಯ ಶಿಸ್ತು ಭಾಷೆಗೆ ಅರ್ಥಪೂರ್ಣತೆಯನ್ನು ಒದಗಿಸಿಕೊಡುತ್ತದೆ. ಒಂದು ಸಮಾಜವು ಭ್ರಷ್ಟಾಚಾರಕ್ಕೆ ಗುರಿಯಾದರೆ ಅಲ್ಲಿನ ಭಾಷೆಯು ಕೂಡ ಕೊಳೆತ ಭಾಷೆ ಯಾಗುತ್ತದೆ. ಆದ್ದರಿಂದಲೇ ಸಾಮಾಜಿಕ ವಿಮರ್ಶೆ ಮೊದಲಿಗೆ ಆರಂಭವಾಗು ವುದೇ ವ್ಯಾಕರಣಶುದ್ಧತೆಯಿಂದ, ಅರ್ಥಗಳ ಹೊಸಹೊಸ ಶೋಧನೆಗಳ ಮೂಲಕ. ನಿಜವಾದ ಶ್ರೇಷ್ಠ ಬರಹಗಾರನಿಗೂ ಭಾಷೆಯೊಂದಿಗೆ ಅವನ ನೇರ ಸಂಪರ್ಕ ಒಮ್ಮೊಮ್ಮೆ ಮುಜುಗರವನ್ನುಂಟುಮಾಡುತ್ತದೆ. ಭಾಷೆಯ ಮೂಲದ ಆಳದಿಂದ ನೈಸರ್ಗಿಕವಾಗಿ ಮೂಡಿಬರುವ ಶೃಂಗಾರ, ಕಾಮಕ್ಕೆ ಸಂಬಂಧಿಸಿದ ಪ್ರತಿಮೆಗಳು ಹೆಚ್ಚು ತೀವ್ರ ಪ್ರಭಾವಶಾಲಿಯಾಗಿ ಭಾಷೆಯಲ್ಲಿ ಅಭಿವ್ಯಕ್ತಿ ಗೊಳ್ಳುತ್ತವೆ. ಕವಿಯು ಭಾಷೆಯನ್ನು ಪ್ರೇಮಿಸಿ ಸ್ವಚ್ಛಂದ ಸದರಗಳಿಂದ ಅದನ್ನು ಬಳಸಬಲ್ಲವನಾಗಿರಬೇಕು ಎಂಬುದೇ ಅವನ ನಿಲುವು.

೧೯೬೨ ರಿಂದ ೧೯೬೮ರವರೆಗೆ ಇಂಡಿಯಾದಲ್ಲಿ ಮೆಕ್ಸಿಕನ್ ರಾಯಭಾರಿಯಾಗಿ ಪಾಜ್ ಕೆಲಸ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಮೆಕ್ಸಿಕೋದಲ್ಲಿ ಒಂದು ಘಟನೆ ನಡೆಯಿತು. ಒಲಂಪಿಕ್ ಕ್ರೀಡಾಕೂಟಗಳು ಅಲ್ಲಿ ಪ್ರಾರಂಭಗೊಂಡು ಕೆಲವು ವಿಚಾರವಾದಿ ಯುವಕರು ಅದರ ವಿರುದ್ಧ ಭಾರಿ ಸಂಖ್ಯೆಯಲ್ಲಿ ಪ್ರತಿಭಟಿಸಿ ಚಳುವಳಿಗೆ ಆರಂಭಿಸಿದರು. ಈ ಗಲಭೆಯಲ್ಲಿ ಅಪಾರ ಸಂಖ್ಯೆಯಲ್ಲಿ ಜನರು ಪ್ರಾಣ ಕಳೆದುಕೊಂಡರು. ಸರ್ಕಾರ ಅಲ್ಲಿನ ಕಾನೂನು ಕಟ್ಟಲೆಗಳನ್ನೆಲ್ಲಾ ಗಾಳಿಗೆ ತೂರಿತ್ತು. ಪ್ರಜಾಪ್ರಭುತ್ವದ ದಿವ್ಯದರ್ಶನವನ್ನು ಕಂಡು ಬಲ್ಲವನಾಗಿದ್ದ ಪಾಜ್ ರಾಜಕೀಯದ ಬಗ್ಗೆ ಭ್ರಮನಿರಸನಗೊಂಡ. ರಾಜಕೀಯ ಮುಖಂಡರ ಬಣ್ಣಬಣ್ಣದ ಮಾತುಗಾರಿಕೆ, ಜನರ ಹಸಿವು, ನಿರುದ್ಯೋಗ ಯಾವುದೇ ಸಮಸ್ಯೆಯನ್ನು ನೀಗಲು ಶಕ್ತವಾಗಲಿಲ್ಲ. ಇಂಥ ಪರಿಸ್ಥಿತಿ ಎಲ್ಲ ದೊಡ್ಡ ನಗರಗಳಲ್ಲೂ ಕಂಡು ಬರುತ್ತಿತ್ತು ಎಂಬುದನ್ನು ಗ್ರಹಿಸಿದ ಪಾಜ್, ಈ ಎಲ್ಲ ಕಾರಣಗಳಿಂದ ಮೆಕ್ಸಿಕನ್ ಸರ್ಕಾರದ ಬಗ್ಗೆ ಜಿಗುಪ್ಸೆಗೊಂಡು ತನ್ನ ರಾಯಭಾರಿ ಕೆಲಸಕ್ಕೆ ರಾಜೀನಾಮೆ ಕೊಟ್ಟು ಇಂಡಿಯಾದಿಂದ ಮತ್ತೆ ಮೆಕ್ಸಿಕೋ ನಗರಕ್ಕೆ ವಾಪಸಾದ. ಇದಾದ ಎರಡು ವರ್ಷಗಳ ಅನಂತರ ರಾಜಕೀಯ ತಾಪತ್ರಯಗಳಿಂದ ಬೇಸತ್ತ ಪಾಜ್ ತನ್ನದೇ ಆದ ರೀತಿಯಲ್ಲಿ ಬದುಕತೊಡಗಿದ. ಯುವ ಲೇಖಕರು ಆತನನ್ನು ಮೆಚ್ಚಿ ಆತನ ಮಾರ್ಗದರ್ಶನಕ್ಕಾಗಿ ಹಾತೊರೆದರು. ಪಾಜ್ ತನ್ನ ಸಂಸ್ಕೃತಿಯ ಮೂಲಕ ಮೆಕ್ಸಿಕನ್ ನಗರದ ಅವಸ್ಥಾಂತರಗಳನ್ನು ತನ್ನ ಕಾವ್ಯದ ಮೂಲಕ ಬರೆಯಲು ತೊಡಗಿದ. ೧೯ನೇ ಶತಮಾನದ ಪೂರ್ವಾರ್ಧದಲ್ಲಿ ಮೆಕ್ಸಿಕೋ ನಗರ ಹೇಗಿತ್ತು ಎಂಬುದನ್ನು ಪಾಜ್ ಚೆನ್ನಾಗಿ ಚಿತ್ರಿಸಿದ್ದಾನೆ. ಕವಿ ಪಾಜ್‌ನ *'A Draft of Shadows'* (ಪಡಿಯಚ್ಚು ನೆರಳುಗಳು) ಎಂಬ ದೀರ್ಘ ಕವಿತೆ ಆತನ ಆತ್ಮಚರಿತೆಯೂ ಆಗಿದೆ. ಅದು ೧೯೭೪ರಲ್ಲಿ ಪ್ರಕಟವಾಯಿತು. ಸಮರ್ಥಭಾಷಾಭಿವ್ಯಕ್ತಿ ಪರಿಪೂರ್ಣ ಪ್ರತಿಮೆಗಳು, ಮತಾಚರಣೆಗಳು, ಇತಿಹಾಸ ಎಲ್ಲವನ್ನೂ ಒಳಗೊಂಡಿದೆ ಈ ಶ್ರೇಷ್ಠ ಕವಿತೆ. ಮೆಕ್ಸಿಕನ್ ನಗರದ ವರ್ಣನೆ, ಕವಿಯ ಬಾಲ್ಯ ಎಲ್ಲವನ್ನೂ ನಿರೂಪಿಸುವ ಈ ಕವಿತೆ ಒಂದು ವೈಶಿಷ್ಟ್ಯಪೂರ್ಣ ಶ್ರೇಷ್ಠ ಕವಿತೆಯಾಗಿದೆ.

ಅಕ್ಟೇವಿಯಾ ಪಾಜ್ ತನ್ನ ಗತ ಜೀವನವನ್ನು ಸ್ಮರಿಸುತ್ತಾ ತನ್ನ ತಾತ, ತಂದೆ, ತಾಯಿ ಬದುಕಿದ್ದ ಹಳೆಯ ದೊಡ್ಡಮನೆಯನ್ನು ಕುರಿತು ಅನುಭವಗಳನ್ನು ಹಂಚಿಕೊಳ್ಳುತ್ತಾನೆ. ಅದೇ ತಾನೆ ಕ್ರಾಂತಿ ಮುಗಿದು ಸ್ವಾತಂತ್ರ್ಯ

ಬಂದಿತ್ತು. ನಾನು ಹುಟ್ಟಿದ್ದು ಮೆಕ್ಸಿಕನ್ ನಗರದ ಬಳಿಯ ಮಿಕ್ಸೊಕಾ ಎಂಬ ಹಳ್ಳಿಯಲ್ಲಿ. ನಾವು ವಾಸಿಸುತ್ತಿದ್ದ ಪುರಾತನ ಪಾಳುಬಿದ್ದ ಗೋಡೆಗಳ ಅವಶೇಷ ಗಳಿದ್ದ ಮನೆ, ಅದರ ಸುತ್ತ ದೊಡ್ಡ ತೋಟ, ಆ ತೋಟವೆಲ್ಲಾ ಕಾಡಾಗಿ, ಅಲ್ಲಿ ಅಗೆದರೆ ಪುರಾತನ ಕಾಲದ ಮಡಕೆ, ಕುಡಿಕೆ ಸಿಕ್ಕುತ್ತಿತ್ತು. ಇಂಥ ಪಳೆಯುಳಿಕೆಯ ಮನೆಯ ಮಧ್ಯೆ ವಹಾಸತುಶಾಹಿ ನಿರ್ಮಿಸಿದ ಕಾಂಕ್ರೀಟಿನ ಬೃಹತ್ ಕಟ್ಟಡಗಳು ಎತ್ತರವಾಗಿ ಅಚಲವಾಗಿ ನಿಂತಿದ್ದವು. ೧೯೮೬ರ ವೇಳೆಗೆ ಆ ಎಲ್ಲಾ ಪುರಾತನ ಅವಶೇಷಗಳೂ, ದೃಶ್ಯಗಳೂ ಮರೆಯಾಗಿ ಎಲ್ಲೆಲ್ಲೂ ಆಧುನಿಕತೆ ವಿಜೃಂಭಿಸಿತು. ಆದರೂ ಪಾಜ್‌ನ ಬಗೆಗಣ್ಣಿನ ಒಳಗೆ ಈ ಎಲ್ಲಾ ನೆನಪುಗಳು ಸ್ಥಿರವಾಗಿ ನಿಂತು ಮೆಕ್ಸಿಕನ್ ಇತಿಹಾಸವನ್ನು ಪದೇ ಪದೇ ಸ್ಮರಿಸಿ ಕೊಳ್ಳಲು ಪ್ರೇರೇಪಿಸುತ್ತಿತ್ತು.

ಪಾಜ್‌ನ ಅಜ್ಜನ ಹೆಸರು ಇರಾನಿಯೋ. ಬಹಳ ದರ್ಪದ ವ್ಯಕ್ತಿ, ಸ್ವಾತಂತ್ರ್ಯಪ್ರೇಮಿ. ಪಾಜ್ ತನ್ನ ಬಾಲ್ಯ ಯೌವನಗಳನ್ನು ಅಜ್ಜನ ಮನೆಯಲ್ಲೇ ಆತನೊಂದಿಗೇ ಕಳೆದ. ಇರಾನಿಯೋ ಫ್ರೆಂಚರ ವಿರುದ್ಧ ನಡೆದ ಝುಪಾತ ಯುದ್ಧದಲ್ಲಿ ಭಾಗವಹಿಸಿದ್ದ, ಹತ್ತಕ್ಕೂ ಮೇಲ್ಪಟ್ಟು ಪುಸ್ತಕಗಳನ್ನು ಬರೆದಿದ್ದ. ಜತೆಗೆ ಮೂವತ್ತೆಂಟು ವರ್ಷಗಳಷ್ಟು ದೀರ್ಘಕಾಲ ಪತ್ರಿಕೆಯ ಪ್ರಧಾನ ಸಂಪಾದಕನಾಗಿ ದುಡಿದ. ಪಾಜ್‌ನ ಕಣ್ಣಿಗೆ ಆತನ ತಾತ ಭೀತಿ ದರ್ಪಗಳ ಪ್ರತಿರೂಪವಾಗಿದ್ದ. ಪಾಜ್‌ನ ತಂದೆಯೂ ತನ್ನ ತಂದೆಯನ್ನು ವಿರೋಧಿ ಸುತ್ತಿದ್ದ. ಝುಪಾತ ಯುದ್ಧ ಮುಗಿದು ಸ್ವಾತಂತ್ರ್ಯ ಬಂದರೂ ಫಲಕಾರಿ ಯಾಗಲಿಲ್ಲ. ಭೂ ಚಳುವಳಿಗಾರರು ಮತ್ತೊಮ್ಮೆ ಚಳುವಳಿ ಆರಂಭಿಸಿದರು. ಜಮೀನು ಹಿಡುವಳಿಯ ವಿಷಯವಾಗಿ ಕಾನೂನಿನ ನಿಯಮಗಳನ್ನು ಒಪ್ಪದ ಅಸಮಾಧಾನದಿಂದ ಹುಟ್ಟಿದ ಅಂತಃಕಲಹಗಳು ಅತಿಹೆಚ್ಚಾಯಿತು. ಈ ಚಳು ವಳಿಯ ಸಂದರ್ಭದಲ್ಲಿ ಪಾಜ್‌ನ ತಂದೆಯನ್ನು ನೋಡಲು ಅನೇಕ ರೈತರು ಬರುತ್ತಿದ್ದರು. ಅವರು ಪುಟ್ಟಬಾಲಕ ಪಾಜ್‌ಗಾಗಿ ವಿವಿಧ ಬಗೆಯ ರುಚಿ ಯಾದ ತಿಂಡಿಗಳನ್ನು ತಂದುಕೊಡುತ್ತಿದ್ದರು. ಹೀಗೆ ಬರುವ ರೈತಾಪಿ ಜನ, ಅವರ ಗೊಂದಲಗಳು ಪಾಜ್‌ಗೆ ಅರ್ಥವಾಗದಿದ್ದರೂ ತನ್ನ ತಂದೆ ಅವರ ಮಾರ್ಗದರ್ಶಿ ಎಂಬುದನ್ನು ಆ ಬಾಲಕ ಅರಿತವನಾಗಿದ್ದ. ಪಾಜ್‌ನ ತಂದೆ ಒಬ್ಬ ಮದ್ಯಪಾನ ವ್ಯಸನಿಯಾಗಿದ್ದ. ೧೯೩೫ರಲ್ಲಿ ಪಾನಮತ್ತನಾಗಿ ಆತನ ತಂದೆ ರೈಲಿನ ಅಡಿಗೆಬಿದ್ದು ದುರಂತಮಯ ಮರಣವನ್ನಪ್ಪಿದ. ಇಪ್ಪತ್ತೊಂದು ವರ್ಷದ ತರುಣ ಪಾಜ್ ಈ ಭೀಕರ ಮರಣವನ್ನು ಕಂಡು ಕಂಗಾಲಾದ.

ಅದು ಆತನ ಜೀವವನ್ನೇ ಅಲ್ಲಾಡಿಸಿತು. ಶೋಕತಪ್ತ ಪಾಜ್ ತನ್ನ ತಂದೆಯ ಮರಣವನ್ನು ಕುರಿತು ತನ್ನ ಕಾವ್ಯದಲ್ಲಿ ಹೀಗೆ ಬರೆಯುತ್ತಾನೆ : *(A Draft of shadows)*

ವಾಂತಿ ಬಾಯಾರಿಕೆಗಳ ನಡುವೆ
ಮದ್ಯಪಾನಕ್ಕಂಟಿ ನನ್ನ ತಂದೆ ಹಾಳಾಗಿ ಸತ್ತ
ಬಂದ ಹಾಗೆಯೆ ಮರಳಿ ಅಗ್ನಿಜ್ವಾಲೆ ಹೊರಟ.
ಒಂದು ಸಂಜೆ, ಗುಂಪು ನೊಣಗಳು ಧೂಳು
ರೈಲು ಬೋಗಿಗಳ ಚಕ್ರಗಳ ನಡುವಿಂದ
ನಾವು ಆಯ್ದುಕೊಂಡೆವು ಅವನ ಅಂಗಾಂಗಗಳನ್ನು
ಆತನೊಡನೆ ಏನೊಂದು ನುಡಿಯಲಾರದ ನಾನು,
ಈಗಲೂ ಕನಸಿನಲಿ ಸಂಧಿಸಿ ಮಾತಾಡುವೆನು.
ಇದು ಸತ್ತ ನಿರ್ಜೀವ ದೇಹ,
ಸದಾ ಪರರ ಬಗ್ಗೆಯೆ ಚಿಂತೆ
ಈ ಮನೆಯ ಶಿಥಿಲಗೋಡೆಯಂತೆ ನಾನು ಬೆಳೆದೆ.

ಕವಿ ವರ್ಡ್ಸ್‌ವರ್ತ್ ತನ್ನ ಆತ್ಮಕಥನವನ್ನು ನಿರೂಪಿಸುತ್ತ *'The Prelude'* ಕವಿತೆಯಲ್ಲಿ ಹೀಗೆ ಹೇಳಿದ್ದಾನೆ :

ಚೆಲುವು ಮೊಳೆತ ಕಾಲವೇ, ನನ್ನ ಆತ್ಮವ ಚಿಗುರಿಸು
ರುದ್ರ ಸೌಂದರ್ಯಗಳ ಬಿತ್ತಿ ರಕ್ಷಿಸಿ ಬೆಳೆಸು.

ರೌದ್ರತೆ ಹಾಗೂ ಸೌಂದರ್ಯ ಎರಡೂ ವಿರುದ್ಧ ದಿಕ್ಕಿನಲ್ಲಿ ಇರುವುದಾದರೂ ಅವು ಜೀವನದ ಎರಡು ಮುಖಗಳು. ಹಾಗೆಯೇ ಇಲ್ಲಿ ಪಾಜ್‌ನ ವೈಯಕ್ತಿಕ ಜೀವನದ ಒಂದು ಮುಖವಿದ್ದು ಮತ್ತೊಂದು ಆತನ ಕಾವ್ಯ ಜೀವನದ ಮುಖವಾಗಿದೆ.

-ಕೆ.ಎನ್.ವಿ.

ಆಕ್ಟೇವಿಯಾ ಪಾಜ್‌ನ ಕಾವ್ಯಕೃತಿಗಳು

೧. Sunstone - 1957, Piedra Desol
೨. Days and Occasions 1958-61-Dias Habiles
೩. Homage and Desecrations 1960-Homenajey Profanaciones
೪. Salamandra - 1961, Salamder
೫. Solo for two voices - 1961, Solo adosvoces
೬. Eastslope 1962-68, Ladera este
೭. Toward the Begininning 1964-68, Hacia, Elcomienzo
೮. Blanco-1966, Blanco
೯. Return 1969-75 Vuelta
೧೦. A Draft of shadows 1974, parado en
೧೧. Air Born 1979, Hifor Del Aire
೧೨. A Tree within 1976-87, Arbor Adentro

೧೯೫೭ ರಿಂದ ೧೯೮೭ರವರೆಗೆ ಈ ಹನ್ನೆರಡು ಕವನ ಸಂಕಲನಗಳನ್ನು ಎಲಿಯಟ್ ವಿನ್‌ಬರ್ಜರ್ ಎಂಬ ವಿದ್ವಾಂಸರು ಸಂಪಾದಿಸಿದ್ದಾರೆ. ಇದರಲ್ಲಿ ಸಮರ್ಥ ಅನುವಾದಕರಾದ ಎಲಿಜಿಬತ್ ಬಿಷಪ್, ಪಾಲ್ ಬ್ಲಾಕ್ ಬರ್ನ್, ಲೆಸಾಡರ್ ಕೆಂಡ್, ಡಿಸ್ಟೆಸ್ ಲೆವಟೂರ್ವ್, ಜಾನ್ ಫೆಡ್ರಿಕ್ ನಿಮ್ಸ್, ಮಾರ್ಕ್ ಸ್ಟ್ರಾಂಡ್ ಹಾಗೂ ಚಾರ್ಲ್ಸ್ ಟಾಮ್‌ಲಿನ್‌ಸನ್ ಇವರ ಇಂಗ್ಲೀಷ್ ಆವೃತ್ತಿಯು ಲಭಿಸುತ್ತದೆ. ಈ ಪುಸ್ತಕದ ಮುಖಪುಟದ ವಿನ್ಯಾಸ ಅರ್ಥಪೂರ್ಣವಾಗಿದೆ. *'Reaching for the moon'* ಚಂದ್ರನನ್ನು ತಲುಪುವ ಬಯಕೆಯ ಆಶಯದ ಚಿತ್ರವನ್ನು ಕಲಾವಿದ ರುಫಿನೋಟಾಮಯೋ ಕೋರ್ಟಸಿ ಮಾಡಿದ್ದಾರೆ.

ನೀಲಗುಚ್ಛ

ನಿದ್ದೆಯಿಂದೆದ್ದಾಗ ನಾನು, ಮೈತುಂಬ ಬೆವರು. ಕೆಂಪು ಹೊಸ ಇಟ್ಟಿಗೆ ಗೋಡೆಯಿಂದೆದ್ದ ಶಾಖದ ಝಳ. ಬೂದಿ ಬಣ್ಣದ ರೆಕ್ಕೆಗಳ ಹೊಳೆವ ಚಿಟ್ಟೆ ಹೊಂಬೆಳಕಿನ ದೀಪದ ಸುತ್ತ ಸುತ್ತುತ್ತಿದೆ. ನಾನು ಬರಿಕಾಲಿನಲ್ಲಿ ನನ್ನ ಕೋಣೆಯ ಮಂಚದಿಂದ ಜಿಗಿದು ಹೊರಬಿದ್ದೆ. ಅಲ್ಲಿ ಅವಿತಿಟ್ಟುಕೊಂಡ ಚೇಳು ಗಾಳಿಗಾಗಿ ಉಸಿರೆಳೆದುಕೊಳ್ಳಲು ಹೊರಬಂದಿರುವುದೋ ಎಂಬ ಸಂಶಯದಿಂದ ಜಾಗ್ರತೆಯಾಗಿ ಹೆಜ್ಜೆ ಇಟ್ಟೆ.... ಪುಟ್ಟ ಕಿಟಕಿಯ ಬಳಿ ನಿಂತು ಈ ನಾಡಗಾಳಿ ಉಸಿರಾಡಿದೆ. ರಾತ್ರಿ ಹೆಣ್ಣಿನ ದೀರ್ಘ ಶ್ವಾಸ ನಿಶ್ವಾಸಗಳ ಉಸಿರಾಟವೂ ಕೇಳಿಸುವಂತಿತ್ತು. ಮತ್ತೆ ಹಿಂದಿರುಗಿ ಬಂದು ಕೋಣೆಯ ಮಧ್ಯ ದಲ್ಲಿ ನಿಂತೆ. ಹೂಜಿಯ ನೀರನ್ನು ಖಾಲಿ ಮಾಡುತ್ತಾ, ಬೇಸನ್ನಿಗೆ ಸುರಿಯುತ್ತಾ ಟವೆಲನ್ನು ಒದ್ದೆ ಮಾಡಿ ನನ್ನ ಕಾಲು, ಎದೆಗಳನ್ನೆಲ್ಲಾ ತಿಕ್ಕಿ ಒಣಗಿಸಿಕೊಂಡೆ. ನನ್ನ ಬಟ್ಟೆಗಳಲ್ಲಿ ತಿಗಣೆಗಳು ಇಲ್ಲವೆಂದು ಖಾತರಿಪಡಿಸಿಕೊಂಡು ಬೇರೆ ಬಟ್ಟೆ ಧರಿಸಿದೆ. ಆತುರದಿಂದ ಓಡುತ್ತಾ ಮೆಟ್ಟಿಲಿಳಿದ ರಭಸಕ್ಕೆ ನನ್ನ ಬೋರ್ಡಿಂಗ್ ಮನೆಯ ಒಕ್ಕಣ್ಣನ ಮಾಲೀಕನಿಗೆ ಢಿಕ್ಕಿ ಕೊಡುವವನಿದ್ದೆ. ಅವನು ಮೂಸಂಡಿ, ಒಂದು ಕಣ್ಣುಮುಚ್ಚಿ ಅಲ್ಲಾಡುವ ಸ್ಟೂಲಿನ ಮೇಲೆ ಕೂತಿದ್ದ. ನಾನು ಬಂದ ಸದ್ದು ಕೇಳಿ ಕುದುರೆಯ ಹೇಷಾರವದಲ್ಲಿ ಕೇಳಿದ:

'ಎಲ್ಲಿಗೆ ಹೊರಟಿರುವಿರಿ?'

'ಬಹಳ ಸೆಕೆ, ಅಡ್ಡಾಡಲು ಹೊರಟಿರುವೆ.'

ಹ್ಞೂ-ಇಷ್ಟಕ್ಕೆ ಮುಗಿಯಿತು. ಬೀದಿ ದೀಪಗಳೂ ಇಲ್ಲ. ನೀವು ಇಲ್ಲೇ ಇರಿ ಎಂದ.

ನಾನು ಏನೋ ಗೊಣಗುತ್ತಾ 'ಬೇಗ ಬರುವೆ' ಎನ್ನುತ್ತ ಕತ್ತಲಲ್ಲಿ ಕರಗಿದೆ. ಮೊದಲಿಗೆ ಕಗ್ಗತ್ತಲು. ಏನೂ ಕಾಣುತ್ತಿರಲಿಲ್ಲ. ಅಡ್ಡಾದಿಡ್ಡಿ ಕಲ್ಲು ಹಾಸಿದ ರಸ್ತೆಯಲ್ಲಿ ತಡವರಿಸುತ್ತಾ ಸಾಗಿ, ಒಂದು ಸಿಗರೇಟು ಹಚ್ಚಿದೆ. ತಕ್ಷಣವೇ ಮೋಡಗಳ ಮರೆಯಿಂದ ಚಂದ್ರ ಇಣುಕಿದ. ಆಗ ಬಿಳಿ ಗೋಡೆಗಳ ಮುರುಕಲು ಅಲ್ಲಲ್ಲಿ ಗೋಚರಿಸಿತು. ಆ ಬೆಳದಿಂಗಳ ತೀಕ್ಷ್ಣ ಪ್ರಖರತೆ ನನ್ನ

ಕಣ್ಣು ಚುಚ್ಚಿತು. ಸುಳಿಗಾಳಿ ಸಿಳ್ಳು ಹೊಡೆಯುತ್ತಿತ್ತು. ರಾತ್ರಿಯ ಎಲೆಗಳ ಮರ್ಮರ ಗಾನ, ಮೀನುಗಳ ಕಟುವಾಸನೆ, ಎತ್ತರದ ಹುಲ್ಲಿನ ನಡುವಿದ್ದ ಮಿಡತೆಗಳ ಜಾಗರಣೆ ಹಾಡು. ನಾನು ತಲೆ ಎತ್ತಿದೆ. ಮೇಲೆ ಅಲ್ಲಿ ನಕ್ಷತ್ರಗಳು ತಂಗಿದ್ದವು. ನಾನು ಯೋಚಿಸಿದೆ: ಈ ವಿಸ್ತಾರ ಸೌರವ್ಯೂಹದ ವ್ಯವಸ್ಥೆಯೇ ಸಂಕೇತಗಳ ಸರಮಾಲೆ. ಈ ಬೃಹತ್ತಿನೊಡನೆ ನಮ್ಮ ಸಂವಾದ. ನನ್ನ ಚಟುವಟಿಕೆಗಳತ್ತ ಈ ಮಿಡತೆ ನೋಡುತ್ತಿದೆ. ಈ ನಕ್ಷತ್ರಗಳು ಕಣ್ಣು ಮಿಟುಕಿಸುತ್ತಿವೆ. ಇಲ್ಲ, ಏನೂ ಇಲ್ಲ. ಮೌನ ಮತ್ತು ಶಬ್ದ. ಚಲಾಪಿಲ್ಲಿ ಶಬ್ದಗಳ ತುಣುಕಿನ ಸಂಭಾಷಣೆ. ಇದು ಯಾವ ಶಬ್ದ? ಇದರಲ್ಲಿ ನಾನು ಯಾವ ಅಕ್ಷರ? ಯಾರು ಮಾತನಾಡುತ್ತಿರುವುದು? ಯಾರೊಂದಿಗೆ? ನಾನು ಸಿಗರೇಟನ್ನು ಬೀದಿ ಬದಿಗೆ ಬಿಸುಟೆ. ಅದು ಒಂದು ಬೆಳ್ಳಿ ವಕ್ರರೇಖೆಯಾಗಿ, ಅದರ ಕಿಡಿಬೆಳಕು ಒಂದು ಪುಟ್ಟ ಧೂಮಕೇತುವಿನಂತೆ ಕಂಡಿತು.

ನಾನು ದೀರ್ಘಕಾಲ ನಿಧಾನವಾಗಿ ನಡೆಯುತ್ತಿದ್ದೆ. ನನ್ನ ತುಟಿಗಳೂ ನನ್ನೊಡನೆ ಆ ನಿಮಿಷ, ಅದೇ ಸಂತೋಷವನ್ನೇ ವ್ಯಕ್ತಪಡಿಸುತ್ತಿತ್ತು. ರಾತ್ರಿಯ ತೋಟದ ಜಾಗೃತ ಕಣ್ಣುಗಳು. ನಾನು ರಸ್ತೆ ದಾಟಿದೆ. ನನ್ನ ಹಿಂದೆ ಯಾರೋ ಕದ ದಾಟಿ ಬಂದಂತಾಯಿತು. ಸುತ್ತುಮುತ್ತ ತಿರುಗಿ ನೋಡಿದೆ. ಯಾರೂ ಕಾಣಲಿಲ್ಲ. ವೇಗವಾಗಿ ಹೆಜ್ಜೆ ಹಾಕಿದೆ. ಕೆಲವೇ ನಿಮಿಷಗಳ ನಂತರ ನನ್ನ ಹಿಂದೆ ಕಾದ ಕಲ್ಲಿನ ಮೇಲೆ ಕಾಲಿಟ್ಟು ಬರುವಂಥ ಕೆರದ ಸದ್ದು. ಈಗ ಹಿಂದಿರುಗಿ ನೋಡಲು ಇಚ್ಛಿಸದಿದ್ದರೂ ನನ್ನ ಹಿಂದಿನ ನೆರಳು ನನ್ನ ಪ್ರತಿ ಹೆಜ್ಜೆಯನ್ನೂ ಹಿಂಬಾಲಿಸಿ ಸಮೀಪಿಸುತ್ತಿರಲು, ನಾನು ಓಡಲೆತ್ನಿಸಿದೆ. ಆದರೆ ಆಗಲಿಲ್ಲ. ತಕ್ಷಣ ತಟ್ಟನೆ ನಿಂತೆ. ನನ್ನ ನಾನು ರಕ್ಷಿಸಿಕೊಳ್ಳುವ ಮುನ್ನವೇ ಒಂದು ಹರಿತವಾದ ಚೂರಿಯ ತುದಿ ನನ್ನ ಹಿಂದಿತ್ತು. ಮೃದುವಾದ ಧ್ವನಿಯೊಂದು-

'ಅಲುಗಾಡದಿರು ಮಿಸ್ಟರ್, ಕದಲಿದರೆ ಇರಿಯುವೆನು.'

ಹಿಂದಿರುಗದೆಯೇ, ನಾನು ಕೇಳಿದೆ.

'ನಿನಗೇನು ಬೇಕು?'

'ನಿನ್ನ ಕಣ್ಣುಗಳು ಮಿಸ್ಟರ್.' - ಅದೇ ಮೃದುವಾದ ನೋವಿನ ಧ್ವನಿ.

'ನನ್ನ ಕಣ್ಣುಗಳು?...... ಅವು ನಿನಗೆ ಏಕೆ ಬೇಕು? ನೋಡು, ನನ್ನ ಹತ್ತಿರ ಸ್ವಲ್ಪ ಹಣವಿದೆ. ಎಲ್ಲವನ್ನೂ ನಿನಗೆ ಕೊಡುತ್ತೇನೆ. ಆದರೆ ನೀನು ಮಾತ್ರ ನನ್ನನ್ನು ಕೊಲ್ಲದೆ ಬಿಟ್ಟುಬಿಡಬೇಕು.'

'ಭಯಪಡಬೇಡ ಮಿಸ್ಟರ್, ನಾನು ನಿನ್ನನ್ನು ಕೊಲ್ಲುವುದಿಲ್ಲ. ನಿನ್ನ ಕಣ್ಣುಗಳನ್ನು ಮಾತ್ರ ತೆಗೆದುಕೊಳ್ಳುವೆ.'

'ನನ್ನ ಕಣ್ಣುಗಳು ನಿನಗೇಕೆ ಬೇಕು?' - ಮತ್ತೆ ಅದನ್ನೇ ಕೇಳಿದೆ.

ನನ್ನ ಪ್ರಿಯ ಗೆಳತಿಗೆ ಒಂದು ಬಯಕೆ ಉಂಟು. ಅವಳಲ್ಲಿ ನೀಲ ಕಣ್ಣುಗಳ ಗುಚ್ಛವನ್ನು ಮಾಡಲು ನಿನ್ನ ಕಣ್ಣುಗಳು ಬೇಕು. ಈ ಸುತ್ತಮುತ್ತ ನೀಲ ಕಣ್ಣುಗಳು ಸಿಗುವುದೇ ದುರ್ಲಭ.

ಹಾಗಾದರೆ ನನ್ನ ಕಣ್ಣಿಂದ ನಿನಗೇನೂ ಉಪಯೋಗವಿಲ್ಲ. ಏಕೆಂದರೆ ನನಗಿರುವುದು ಕಂದುಬಣ್ಣದ ಕಣ್ಣುಗಳೇ ಹೊರತು, ನೀಲವಲ್ಲ.

'ನನಗೆ ಸುಳ್ಳು ಹೇಳಿ ಮೂರ್ಖನಾಗಿಸಬೇಡ. ನನಗೆ ಚೆನ್ನಾಗಿ ಗೊತ್ತು ನಿನಗಿರುವುದೇ ನೀಲಿಯ ಕಣ್ಣು.'

'ಹೀಗೆ ಯಾರಿಗೂ ಕಣ್ಣನ್ನು ಕಳೆಯದಿರು. ನಾನು ಮತ್ತೇನಾದರೂ ನಿನಗೆ ಕೊಡುವೆನು.'

'ವೈರಾಗ್ಯವನ್ನು ನಟಿಸದಿರು' ಎಂದು ಗಡುಸಾಗಿ ಹೇಳಿದ ಅವನು,

'ಎಲ್ಲಿ ನನ್ನತ್ತ ತಿರುಗು' - ಎಂದ.

ನಾನು ಅವನತ್ತ ತಿರುಗಿದೆ. ಅವನೊಬ್ಬ ಸಣಕಲ ದುರ್ಬಲ ವ್ಯಕ್ತಿ. ತನ್ನ ಅಗಲವಾದ ಅಂಗೈಯಿಂದ ಮುಖವನ್ನು ಮುಚ್ಚಿಕೊಂಡು ಮತ್ತೊಂದು ಕೈಯಲ್ಲಿ ಚೂರಿ ಹಿಡಿದಿದ್ದ. ಅದು ಚಂದ್ರ ಬೆಳಕಿಗೆ ಹೊಳೆಯುತ್ತಿತ್ತು.

'ಎಲ್ಲಿ ನಿನ್ನ ಮುಖವನ್ನಷ್ಟು ನೋಡೋಣ.'

-ನಾನು ಬೆಂಕಿಕಡ್ಡಿಯನ್ನು ಹಚ್ಚಿ ನನ್ನ ಮುಖದ ಬಳಿ ಹಿಡಿದೆ. ಅದರ ಬೆಳಕಿಗೆ ನನ್ನ ಕಣ್ಣು ಮುಚ್ಚಿಕೊಂಡವು. ಅವನು ನನ್ನ ಕಣ್ಣರೆಪ್ಪೆಗಳನ್ನು

ಒರಟಾಗಿ ಬಿಡಿಸಿದ. ಆದರೂ ಕಾಣದಿರಲು ತುದಿಗಾಲಿನ ಮೇಲೆ ನಿಂತ ಅವನು ನನ್ನ ಕಣ್ಣನ್ನೇ ತೀಕ್ಷ್ಣವಾಗಿ ದಿಟ್ಟಿಸಿದ. ಬೆಂಕಿಕಡ್ಡಿ ನನ್ನ ಬೆರಳನ್ನು ಸುಡಲು ಅದನ್ನು ಕೆಳಗೆ ಹಾಕಿದ. ನಾನು ಒಂದು ನಿಮಿಷ ಮೌನದ ನಂತರ,

'ಈಗ ಸಮಾಧಾನವಾಯಿತೇ? ಅವು ನೀಲ ಕಣ್ಣುಗಳಲ್ಲ'

'ನೀನು ಬಹಳ ಬುದ್ಧಿವಂತ. ಸರಿ, ಮತ್ತೊಂದು ಕಡ್ಡಿ ಹಚ್ಚು, ನೋಡೋಣ.'

ನಾನು ಮತ್ತೊಂದು ಕಡ್ಡಿ ಗೀರಿದೆ. ನನ್ನ ಕಣ್ಣಿನ ಸಮೀಪ ಹಿಡಿದೆ. ನನ್ನ ತೋಳನ್ನು ಗಟ್ಟಿಯಾಗಿ ಹಿಡಿದು ಅವನು ಗುಡುಗಿದ.

'ಮೊಣಕಾಲನ್ನೂರಿ ಕೂರು.'

ಹಾಗೇ ಮಾಡಿದೆ. ಒಂದು ಕೈಯಲ್ಲಿ ನನ್ನ ತಲೆಗೂದಲನ್ನು ಒರಟಾಗಿ ಎತ್ತಿ ಹಿಡಿದು ಮುಖವನ್ನು ಮೇಲೆತ್ತಿ ನನ್ನ ಹತ್ತಿರ ಬಗ್ಗಿ ಎಚ್ಚರಿಕೆಯಿಂದ ಕಣ್ಣಲ್ಲಿ ಕಣ್ಣಿಟ್ಟು ತಾನೇ ನಿಧಾನವಾಗಿ ಬೆಂಕಿಕಡ್ಡಿ ಗೀರಿ ನನ್ನ ಕಣ್ಣು ಗುಡ್ಡೆಗಳನ್ನೇ ದಿಟ್ಟಿಸುತ್ತಾ ಬೆಂಕಿಕಡ್ಡಿಯನ್ನು ಕೆಳಕ್ಕೆ ಹಾಕಿದ. ಆಗ ನಾನು ಕಣ್ಣು ಮುಚ್ಚಿದ್ದೆ.

'ಕಣ್ಣನ್ನು ಅಗಲವಾಗಿ ತೆರೆ' - ಎಂದು ಕೂಗಿದ.

ಕಣ್ಣನ್ನು ತೆರೆದೆ. ಮತ್ತೊಂದು ಬೆಂಕಿಕಡ್ಡಿಯನ್ನು ಹಚ್ಚಿ ನನ್ನ ಕಣ್ಣ ಬಳಿ ಹಿಡಿದ. ಅದು ನನ್ನ ಕಣ್ಣೆವೆಯ ಕೂದಲನ್ನು ಸುಟ್ಟಿತ್ತು. ತಕ್ಷಣವೇ ನನ್ನನ್ನು ಅಲ್ಲಿಂದ ಹೋಗಲು ಹೇಳಿದ.

'ನೀನು ಹೇಳಿದ್ದು ಸರಿ. ನಿನ್ನ ಕಣ್ಣು ನೀಲವಲ್ಲ....'

ತಕ್ಷಣವೇ ಅವನು ಮಾಯವಾದ. ನಾನು ಬಾಗಿ ಗೋಡೆಗೊರಗಿ ಕೈಗಳಿಂದ ತಲೆಯನ್ನು ಹಿಡಿದುಕೊಂಡು ಏಳುತ್ತಾ, ಬೀಳುತ್ತಾ ಓಡಲು ತೊಡಗಿದೆ. ಹೀಗೆ ಒಂದು ಗಂಟೆಯ ಕಾಲ ಆ ನಿರ್ಜನ ನಗರದಲ್ಲಿ ಓಡಿ ಕೊನೆಗೆ ತೆರಪಾಗಿರುವ ಪೇಟೆಯ ಚೌಕ ತಲುಪಿ, ಮನೆಯ ಬಳಿ ಬಂದೆ. ಮನೆಯ ಮಾಲೀಕ ಅದೇ ರೀತಿ ಬಾಗಿಲ ಮುಂದೆ ಕುಳಿತಿದ್ದ. ಆತನೊಂದಿಗೇನೂ ಮಾತನಾಡದೆ ನಾನು ಒಳಹೊಕ್ಕೆ. ಅಂದು ಕಳೆದು ಮರುದಿನ ನಾನು ಆ ಊರನ್ನೇ ಬಿಟ್ಟೆ.

ತೋಟ ಮತ್ತು ಮಗು

ಹೋಟಲಿನ ಪಡಸಾಲೆಯಲ್ಲಿ ನಾನು ಅನ್ಯಮನಸ್ಕನಾಗಿ ಪ್ರವೇಶಿಸುತ್ತಿರಲು, ಅಲ್ಲಿನ ತೆರದ ಬಾಗಿಲುಗಳ ಚೀತ್ಕಾರ, ಬಂಜರು ಶುಷ್ಕ ನಗರದಲ್ಲಿ ನೀರಸವಾದ ಆಕಳಿಕೆಯ ನಡುವೆಯೂ ನಳನಳಿಸುವ ಮರದ ಎಲೆಗಳ ಮರ್ಮರನಾದ, ಇರುಳು ಆ ತೋಟವು ಸಾವು ಸಮೀಪಿಸುವಂತೆ ಭೀಕರವಾಗಿ ಕಾಣುತ್ತಿರಲು ನನಗೆ ಹುಚ್ಚು ಕನಸುಗಳು, ಅಸಂಬಂಧ ರೇಖಾಚಿತ್ರಗಳು, ಎತ್ತರದ ಶಿಥಿಲವಾಗಿ ನಿಂತ ಹಸಿಗೋಡೆ ಇಟ್ಟಿಗೆ, ಅದರ ನಡುವೆಯೆ ನಿಶ್ಚಲವಾಗಿ ನಿಂತಿವೆ. ಹಚ್ಚಹಸುರಾದ ಎಂಟು ಅಂಜೂರದ ಮರಗಳು ನನ್ನ ಬಾಲ್ಯಕ್ಕೆ ಸಾಕ್ಷಿಯಾಗಿ, ಅದೇ ಹಸಿರು ಬಣ್ಣ ಅದೇ ನಿರಂತರ ಘನ ಮೌನ, ಹತ್ತಿರದಲ್ಲೇ ಮುಗಿಯದ ಒಳಯುದ್ಧಕ್ಕಾಗಿ ಪೇರಿಸಿಟ್ಟಂತೆ ಕಾಣುವ ಎತ್ತರದ ಕಲ್ಲುಗಳ ರಾಶಿ, ಬಳಿಯಲ್ಲೆ ತನ್ನ ಗರ್ಭದಲ್ಲಿ ಗುಟ್ಟುಗಳ ಅಡಗಿಸಿಟ್ಟುಕೊಂಡು ತಲೆದೂಗುತ್ತಿರುವ ಹಚ್ಚಹಸುರಾದ ಮೃದುವಾದ ಹುಲ್ಲು ಬಾಗಿ ನಿಲ್ಲುತ್ತಿದೆ. ಭೀಕರ ಕೀಟಗಳಿಗೆ ಹೆದರಿ, ಅಲ್ಲೆ ವಿಷಾದದಿಂದ ಲೊಚಗುಟ್ಟುತ್ತಿರುವ ಹಲ್ಲಿಗಳು ಪುರಾಣಕತೆಗಳ ನಿಗೂಢ ರಹಸ್ಯಗಳನ್ನು ಅಡಗಿಸಿಟ್ಟ ಅಂಜೂರದ ಮರಗಳು, ಮಂಗೋಲಿಯನ್ ಹಳದಿ, ಶತೃಗಳಂತೆ ಕಾಣುವ ಸಂಪಿಗೆ ಮರಗಳ ಮಧ್ಯೆ ಮಾಸಲು ಬಿಳುಪಿನ ದೀಪ ಹೊತ್ತಿಸಿಟ್ಟಂತೆ ಹೂವು, ಕವಲೊಡೆದ ದಾಳಿಂಬೆ ಗಿಡದಲ್ಲಿ ಬಿರಿದ ಹಣ್ಣುಗಳಿಂದ ಕೆಂಪುಮಾಣಿಕ್ಯದ ಪ್ರಜ್ವಲಿಸುವ ಹರಳುಗಳು ಉರಿವ ಸೂರ್ಯನ ಬೆಳಕಿಗೆ ತಳತಳನೆ ಹೊಳೆಯುತ್ತಿವೆ. ಮುಂಜಾವಿನ ತಂಗಾಳಿಗೆ ತೂಗಾಡುತ್ತಿರುವ ಮರದ ರೆಂಬೆಗಳ, ನಿಡುಸುಯ್ಲು, ಬೋಗನ್‌ವಿಲ್ಲ ಗಿಡದ ಪೊದೆಗಳಲ್ಲಿ ನೇರಳೆ ಚುಕ್ಕಿಗಳಂತ ಹೂವು, ಅದರ ಹಿನ್ನೆಲೆಯಲ್ಲಿ ಅಚ್ಚಬಿಳುಪಿನ ಗೋಡೆ ಅನಾಥ ಮೂಲೆಗಳ ಸ್ವಗತ ಸಂಭಾಷಣೆಗಳು, ಅನಾಥ ನಡುಹಗಲು, ಆದರೂ ಅದು ಪವಿತ್ರ ಸ್ಥಳ. ಮುಂದೆ ಮುಂಜಾವಿನ ಮೌನದಲ್ಲೇ ಅಡಗಿರುವ ಮೌನಗಾನ ನಂದನವನವನ್ನೆ ಸೃಷ್ಟಿಸಿದೆ.

ಕೊಂಬೆಗಳ ದಟ್ಟ ಎಲೆಗಳ ನಡುವೆ ಖಾಲಿ ಜಾಗಗಳಿಂದ ತೂರಿ ಬರುವ ಮುಗಿಲಬೆಳಕು ಹಸಿರು ಹಚ್ಚಿದ ಸೀಳುದಾರಿಗಳಲ್ಲೆ ನಡುಹಗಲು

ಪಾರದರ್ಶಕ ಖಡ್ಗಗಳ ಮೂಲಕ ಕಾದಾಡುತ್ತಿರುವುದೊ ಎಂಬಂತ ಬಿಸಿಲ ಝಳ ಅದೇ ತಾನೆ ಮೊದಲ ಮಳೆಬಿತ್ತು. ಮಣ್ಣಿನ ಕಂಪು ಘಮ್ಮೆನಲು ತೀಕ್ಷ್ಣವಾಗಿ ಆಘ್ರಾಣಿಸುತ್ತ ಒದ್ದೆ ಹುಲ್ಲಿನ ಮೇಲೆ ಹೆಜ್ಜೆ ಇಟ್ಟೆ. ನೆಟ್ಟಗೆ ನಿಗುರಿ ನಿಂತ ಮೌನ ನನ್ನ ಪ್ರಶ್ನಿಸಿತ್ತು. ನಾನು ಸ್ವಲ್ಪ ಚಲಿಸಿ ಅಲ್ಲೆ, ಸ್ಥಿರ ನಿಂತು ಎಲ್ಲ ಸ್ಮರಣೆಗಳ ಕೇಂದ್ರ ಬಿಂದುವೆ ಆದೆ. ಗಾಳಿಯನ್ನು ದೀರ್ಘವಾಗಿ ಎಳೆದುಕೊಂಡೆ. ವರ್ತಮಾನದ ಉತ್ಸಾಹ ಗೆಲುವುಗಳು ಉಬ್ಬೇರಿ ಕುಣಿದಾಗ ಗುಲ್ಲೆದ್ದ ವದಂತಿ ಹಬ್ಬಿತ್ತು.

ಶೂನ್ಯವು ತನ್ನನ್ನೆ ತಾನು ಸಂಶೋಧಿಸುತ್ತಿತ್ತು. ಹಲ್ಲುಗಳ ಸಂದಿನಿಂದ ನಾನು ಸಿಳ್ಳೆ ಹೊಡೆದಾಗ ಕಾಲಪಕ್ಷಿಯು ಹರ್ಷದಿಂದ ತನ್ನ ರೆಕ್ಕೆ ಬಿಚ್ಚಿ ದೂರ ಶೂನ್ಯದತ್ತ ಹಾರುತ್ತಾ ಹಾರುತ್ತಾ ಯಾವುದೋ ಮತ್ತೊಂದು ಗೊತ್ತಿರದ ನಿಗೂಢ ತುದಿ ಮುಟ್ಟಿದ್ದನ್ನು ತದೇಕ ಚಿತ್ತದಿಂದ ನೋಡುತ್ತೇನೆ. ಆ ನಿಗೂಢ ತುದಿ ಮೂಲೆಯಲ್ಲಿ ಒಬ್ಬ ಗೂನುಬೆನ್ನಿನ ಮನುಷ್ಯ ಶರಟಿನ ತೋಳು ಅಡ್ಡಿಯಾದರೂ ಶ್ರಮದಿಂದ ತಿಣುಕುತ್ತಾ ಏನೋ ಬರೆಯುತ್ತಿರುವನು. ಈ ಎಲ್ಲದರ ನಡುವೆಯೂ ಹುಚ್ಚೇರಿ ಕೆರಳಿದ್ದ ವಿರಾಮಗಳು ಆಳ ಕಂದಕಗಳಲ್ಲಿ ಬಿದ್ದು ನಿಖರ ಗಳಿಗೆಗಳ ಕಾಲನಿಗೆ ವಿದಾಯ ಹೇಳುತ್ತಿತ್ತು.

ಟಿಪ್ಪಣಿ:-

ಅಂಜೂರದ ಮರ-ಪಾಶ್ಚಾತ್ಯ ದೇಶಗಳಲ್ಲಿ ಅಂಜೂರದ ಮರವನ್ನು ಬಹಳ ಪವಿತ್ರ ಮರವೆಂದು ಪರಿಗಣಿಸುವರು, ನಮ್ಮಲ್ಲಿ ಆಲ, ಅರಳಿ/ಬೋಧಿ ಪವಿತ್ರ ವೃಕ್ಷಗಳಂತೆ ಈ ಅಂಜೂರದ ಮರ ಈ ಕವಿಯ ಅನೇಕ ಕವನ, ಗದ್ಯದಲ್ಲೂ ಕಾಣಿಸಿಕೊಳ್ಳುತ್ತದೆ. ಈ ಮರವು ಬಾಲ್ಯಕ್ಕೂ ಸಂಕೇತವಾಗಿ ನಿಲ್ಲುತ್ತದೆ. ಇದರ ಬೆಳವಣಿಗೆಯೂ ಸೋಜಿಗ. ಎಲ್ಲ ಮರಗಳೂ ಎತ್ತರಕ್ಕೆ ಮಾತ್ರ ಬೆಳೆಯುತ್ತಾ ಹೋದರೆ ಈ ಅಂಜೂರದ ಮರ ಎತ್ತರ ಮಾತ್ರವಲ್ಲ, ಕೆಳಭಾಗದಲ್ಲೂ ಭೂಗರ್ಭದಾಳಕ್ಕು ಬೇರು ಚಾಚುತ್ತಾ ಬೆಳೆದು ಭೂಮಿಯ ಹಾಗೂ ಇತರ ಮರಗಳ ಸಾರಸತ್ವವನ್ನೆಲ್ಲ ಹೀರಿ ಬಹಳ ಬಲಿಷ್ಠವಾಗಿ ಬೆಳೆಯುತ್ತದೆ. ಬಾಲ್ಯದ ನೆನಪುಗಳು ಇದರ ಆಳವಾದ ಬೇರಿನಂತೆ. ಈ ಸ್ಮೃತಿಗಳಿಂದ ಹೊರಬರಲು ಸಾಧ್ಯವಿಲ್ಲ ನೂರಾರು ವರ್ಷ ಆಯುಸ್ಸಿರುವ ಈ ಮರ ಸರ್ವರುಜಾಪಹಾರಿ ಮರವೂ ಆಗಿದೆ.

('ಗರುಡ ಮತ್ತು ಸೂರ್ಯ' ಸಂಕಲನದಿಂದ)

ಬಯಲು

ಇರುವೆಯ ಗೂಡು ಕೆದರಿ ಹಸಿಹುಣ್ಣನಂತಿದೆ. ಅದರಿಂದ ಕೆಂಪು ಇರುವೆಗಳು ಹೊರಗೆ ನುಗ್ಗಿ ಹರಿಯುತ್ತಿವೆ. ಅಲೆಗಳು ಹಿಗ್ಗಿ ಕುಗ್ಗಿ ನುಗ್ಗುತ್ತಿದೆ. ಸೂರ್ಯ ರಕ್ತವನ್ನು ಸತತವಾಗಿ ಪಂಪ್ ಹೊಡೆದಂತೆ ದೇವಾಲಯದ ಮುಖ ವೆಲ್ಲ ಊದಿ ಕೆಂಪಗಾಗಿದೆ. ಆ ಹುಡುಗನಿಗೆ ಬಿಸಿಲಿನ ಪರಿವೆ ಇಲ್ಲ. ಅವನ ದೇಹದ ಮೂಲೆಮೂಲೆಯಲ್ಲೂ ಬೆದೆ ಹತ್ತಿ ಯೌವ್ವನದ ಜ್ವರ ಬಂದರೂ ಅವನು ಜಾಗರೂಕತೆಯಿಂದ ಹುತ್ತದ ಮೇಲೊಂದು ಕಲ್ಲು ಇಟ್ಟು ಮುಚ್ಚುತ್ತಿದ್ದಾನೆ. ನಿರ್ದಯ ಸೂರ್ಯ, ಬಯಲನ್ನು ಸುಡುತ್ತಿದ್ದಾನೆ. ಹಳ್ಳ, ದಿಣ್ಣೆಗಳೆನ್ನದೆ ಪ್ರತಿ ಮೂಲೆ ಮೂಲೆಗಳಲ್ಲೂ ಬಿಸಿಲು ಹೊಡೆದು ಸೂರ್ಯನ ನೇರ ವಕ್ರ ರೇಖೆಗಳು ಹೊಳೆವ ಕಿರಣಗಳು ತೀಕ್ಷ್ಣ ತ್ರಿಕೋನಾಕೃತಿಯಲ್ಲಿ ಹೊಮ್ಮಿ ಶೂನ್ಯವನ್ನು ಚುಚ್ಚಿ ಇರಿಯುತ್ತಿವೆ. ಗುಪ್ತನಿಧಿಯನ್ನು ಅರಸುವ ಮಕ್ಕಳು, ಬೀದಿನಾಯಿಗಳಿಗೂ ಈ ಹಳದಿ ಬಿಸುಪು ಕಿರಣಗಳು ತಟ್ಟಿ ಬಳಲಿಸುತ್ತಿವೆ. ಸಾವಿರ ಅಡಿಗಳ ಮುಂದೆ ಸನ್‌ಲಾರಂಸೂ ಚರ್ಚ್ ಗಂಟೆ ಹನ್ನೆರಡು ಹೊಡೆಯಿತು. ಚರ್ಚಿನ ಪವಿತ್ರ ಪೀಠದ ಮೇಲೆ ಪಾದ್ರಿ ಕುಳಿತಿದ್ದಾನೆ. ಅವ ನೀಲಿ ಗುಲಾಬಿ ಬಣ್ಣಗಳ ಪಟ್ಟಿಗಳನ್ನು ಮುಖಕ್ಕೆ ಎಳೆದುಕೊಂಡಿದ್ದಾನೆ. ಅವನ ಎಡಗಣ್ಣಿನ ಬಳಿ ಬಿಳಿಯ ರೆಕ್ಕೆಯ ಕೀಟವೊಂದು ಹಾರಿ ಗೋಳಗಾಜಿನ ದೀಪಕ್ಕೆ ಡಿಕ್ಕಿ ಹೊಡೆದು ಹುಡಿಯಾಗಿ ಬಿದ್ದಿತು. ಪ್ರಕೃತಿ ಮೌನಕವನ ಸೂರ್ಯನ ಕೈ ಸ್ಪರ್ಶಕ್ಕಾಗಿ ಕಾತರಿಸಿದೆ.

ಕಾರ್ಖಾನೆಗಳಿಂದ ಹೊರಟ ಸಿಳ್ಳಿನ ದನಿ ಮರ್ಮಭೇದಕ, ಮೌನಸೀಳಿ ಹೊಮ್ಮುತ್ತಿದೆ. ಕಪ್ಪು ವೇಷ ತೊಟ್ಟ ಹಕ್ಕಿ ಆ ಬಯಲಲ್ಲಿ ಇದ್ದ ಒಂದೇ ನಳನಳಿಸುವ ಮರದ ಮೇಲೆ ಗಿರಿಕಿಹೊಡೆದು ವಿಶ್ರಾಂತಿ ಪಡೆಯುತ್ತಿದೆ. ಆಮೇಲೆ.. ಏನೂ ಇಲ್ಲ.

ಮುಂದೆ ಚಲಿಸುವ ವರ್ಷಾಂತರಗಳಿಂದ ಅಗಾಧ ಬಂಡೆಯನ್ನು, ಕೊರೆದು ತೂತು ಮಾಡಿದ ಕಿಂಡಿಯಿಂದ ಭವ್ಯ ಬೆಳಕಿನ ಕಿರಣ ತೂರಿ ಮರಳಿನ ಗಣೆಗಳ ಮರಳಿನತ್ತ ಸಾಗುತ್ತಾ ಮೂಲೆಮೂಲೆಗಳನ್ನೂ ಮುಟ್ಟಿ

ತಟ್ಟುತ್ತಾ ಗ್ರಾನೇಟಿನ ಕಲ್ಲುಬಂಡೆಗಳು ಬಿರುಕು ಬಿಟ್ಟು ತಮ್ಮಂತೆ ತಾವೇ ಆ ತುಟಿಗಳ ತೆರೆದುಕೊಂಡಂತೆ ಕಾಣುತ್ತದೆ. ನಾನು ಮರಳಿ ಬಯಲಿಗೇ ಬರುವೆ. ಈ ಬಯಲಲ್ಲಿ ಸದಾ ಅಪರಾಹ್ನವೇ. ಉರಿಉರಿ ಬಿಸಿಲು. ನಿರಂತರ ಸ್ಥಿರ ಚಿತ್ರ ಬಯಲು. ಹನ್ನೆರಡು ಹೊಡೆಯಿತು. ಹಾರಾಡುವ ಕೀಟಗಳ ಗುಂಯ್ ಗುಡುವ ಸದ್ದು. ಇಂಥ ಅಲ್ಪ ಸಪ್ಪಳ ನಿರಂತರ. ಈ ಬಿಸಿಲುರಿಯು ನಿರಂತರ.

ಕವಿಕೃತಿಯಿಂದ

ಮುಂಜಾವಿನ ನಸುಬೆಳಕಿನಲ್ಲಿ ಮೇಜಿನ ಮೇಲೆ ನಾನು ಬರೆಯುತ್ತಿದ್ದೆ. ನನ್ನ ಲೇಖನಿ, ಆ ಮೇಜಿನ ಎದೆಯ ಮೇಲೊರಗಿತ್ತು. ಆ ಮೇಜು ತಾನು ಯಾವ ಕಾಡಿನ ಮರವೋ ಎಂಬುದನ್ನು ಪಿಸುಗುಟ್ಟಿದಂತೆ ಕೇಳಿಸಿತು. ನನ್ನ ಕಪ್ಪುಶಾಯಿಯ ಲೇಖನಿ ತನ್ನ ವಿಸ್ತಾರವಾದ ಕಪ್ಪು ರೆಕ್ಕೆಗಳನ್ನು ಬಿಚ್ಚಿ ಹಾರಲು ಉದ್ಯುಕ್ತವಾಗಿತ್ತು. ಲ್ಯಾಂಪಿನಿಂದ ಸ್ಫೋಟಿಸಿದ ಬೆಳಕು ನನ್ನ ಅಕ್ಷರಗಳ ಮೇಲೆ ಬಿದ್ದು ಅದರ ಬೆಳಕಿನೊಂದು ಗೆರ ನನ್ನ ಬಲಗೈ ಮೇಲೂ ಹಾದು ಹೋಗುತ್ತಿತ್ತು. ನಾನು ಈ ನೆರಳು ಬೆಳಕುಗಳ ನಡುವೆ ಬರೆಯತೊಡಗುವೆ. ರಾತ್ರಿ ಕತ್ತಲು ಕೋಣೆಯಲ್ಲಿ ಕಾಲಿಟ್ಟಿತು. ಎದುರು ಗೋಡೆ ತನ್ನ ಬಿರುಕು ಕಲ್ಲುತುಟಿಗಳನ್ನು ಬಿಚ್ಚಿತು. ಶೂನ್ಯತೆ ನನ್ನ ಲೇಖನಿ ಹಾಗೂ ಪುಟಗಳ ನಡುವೆ ಆವರಿಸಿದ ಒಂದು ಸರಳ ಅಕ್ಷರವೇ ಸಾಕು ಈ ಜಗತ್ತನ್ನು ಸ್ಫೋಟಿಸಬಲ್ಲದು. ಆದರೆ ಈ ರಾತ್ರಿ ಒಂದು ಅಕ್ಷರವನ್ನು ಬರೆಯಲು ಅವಕಾಶವಿಲ್ಲ.

೧

ಅನೇಕ ವರ್ಷಗಳ ಹಿಂದೆ ನುಣುಪಾದ ನೂರಜುಗಲ್ಲು ಹುಲ್ಲುಕಡ್ಡಿಗಳಿಂದ ಕಟ್ಟಿದ ನಗರ ತಿಲಾಂತನ. ಅದರ ಹಳದಿ ಬಾಗಿಲುಗಳು ಗೋಡೆಗಳು ಇನ್ನೂ ನನಗೆ ನೆನಪಿದೆ. ಗಬ್ಬುವಾಸನೆ ಹೊಡೆವ ಸಣ್ಣಗಲ್ಲಿಗಳು ಗುಜುಗುಟ್ಟುವ ಜನ, ಹಸಿರು ಸರ್ಕಾರಿ ಭವನ ಮತ್ತು ಕೆಂಪುದೇಗುಲಗಳು ಬಲಿ ಸ್ವೀಕರಿಸಲು ತನ್ನ ಐದು ಬೆರಳುಗಳನ್ನು ಚಾಚಿದಂತೆ ಕಾಣುವ ಐದು ಮಹಾದೇಗುಲಗಳು. ಅದರೊಳಗೆ ಅಸಂಖ್ಯಾತ ದಾರಿಗಳು. ತಿಲಾಂತನವು ಎತ್ತರವಾದ ಬಿಳಿಯ ಹೆಬ್ಬಂಡೆಯ ಕಾಲ ಬುಡದಲ್ಲಿದೆ. ಆ ಬಂಡೆಯ ಹಲ್ಲು ಉಗುರುಗಳ ಬಿಗಿ ಮುಷ್ಠಿಯಲ್ಲಿ ಸಿಕ್ಕಿಬಿದ್ದಿರುವಂತೆ ಕಾಣುವ ಈ ನಗರದ ತುಂಬೆಲ್ಲ ಬರೀ ಧೂಳು. ಪ್ರಾರ್ಥನೆಗಳು, ಇಲ್ಲಿಯ ಜನ ನಡೆಸುವ ಪೂಜಾವಿಧಿ ನಿಯಮಗಳು ಅತಿರೇಕ. ಅವರು ಹರಸುವಂತಿದ್ದ ಹಸ್ತಗಳಿಗೆ ಮಾತ್ರ ಪೂಜೆ ಸಲ್ಲಿಸುತ್ತಾ ಪಾದಗಳನ್ನು ಕಂಡು ಬೆದರುತ್ತಿದ್ದರು. ಆ ಪಾದಗಳು ತಮ್ಮನ್ನು ನಾಶಗೊಳಿಸುವುದೆಂದು ನಂಬಿದ್ದ ಅವರು ಧರ್ಮಾಭಿಮಾನಿಗಳಾಗಿ ಬಲಿಕೊಡುವುದರ

ಮೂಲಕ ದೇವನನ್ನ ಸುಪ್ರೀತನಾಗಿಸಿ ಒಲಿಸಿಕೊಂಡು ವರಗಳನ್ನು ಬೇಡುತ್ತಿದ್ದರು. ಒಂದು ಹಿಗ್ಗಿನ ಮುಂಜಾನೆ ನನ್ನ ಬಲಗಾಲನ್ನು ಅವರ ನಂಬಿಕೆಗಳ ಮೇಲಿಟ್ಟು ಮೆಟ್ಟಹಾಕಿದೆನು. ಅವರ ಪೂರ್ವದ ನಂಬಿಕೆ ಶ್ರದ್ಧೆ ಶ್ರೀಮಂತಿಕೆಯ ಕ್ರೌರ್ಯ, ಡಾಂಭಿಕತೆ, ಬಂಡಾಯ ಪ್ರವೃತ್ತಿ, ಪವಿತ್ರ ಭಾಷೆ, ಜನಪದಗೀತೆ ಪೂಜಾವಿಧಿಗಳು, ಪೂಜಾರಿ, ಅವನ ಅಜ್ಜನ ಆ ದೇವನ ಹಸ್ತಪಾದಗಳೆರಡೂ ಒಂದೇ ಎಂಬ ಅರಿವಿಲ್ಲದ ಮೌಢ್ಯ ಎಲ್ಲಕ್ಕೂ ಕೊನೆ ಹಾಡಿದೆ.

೩

ಮಿಲಿಗಯಗಟ್ಟಲೆ ವರ್ಷಗಳು ಶ್ರಮಿಸಿ ನಾನು ಬಂಡೆಗಳ ಒಳಗೆ ದಾರಿ ಕೊರೆದೆ. ಹೀಗೆ ಎಷ್ಟೋ ವರ್ಷಗಳ ಪರಿಶ್ರಮದಿಂದ ನನ್ನ ಹಲ್ಲು ಉಗುರುಗಳು ಮುರಿದುಬಿತ್ತು. ಮತ್ತೊಂದು ಮಗ್ಗುಲಲ್ಲೆ ತೆರೆದ ಕಿಂಡಿಯ ಬೆಳಕು, ಗಾಳಿ. ನನ್ನ ಕೈಯಲ್ಲಿ ರಕ್ತ ಒಸರುತ್ತಿದೆ, ಹಲ್ಲುಗಳು ಗದಗುಟ್ಟಿ ನಡುಗುತ್ತ ಬಿರುಕು ಬಿಡುತ್ತಿದೆ. ದಾಹ ಧೂಳು ಆವರಿಸಿ ನಾನು ವಿಶ್ರಾಂತಿಗಾಗಿ ಹಾತೊರೆದೆ. ನನ್ನ ಜೀವನದ ಉತ್ತರಾರ್ಧವೆಲ್ಲಾ ಕಲ್ಲು ಒಡೆಯುವುದು, ಕೊರೆಯುವುದು ಇಂಥ ಅಡೆತಡೆಗಳನ್ನು ನಿವಾರಿಸಿಕೊಂಡ ನಾನು, ನನ್ನ ಜೀವನದ ಮೊದಲ ಭಾಗದಲ್ಲಿ ನನ್ನನ್ನೂ ನಾನು ಬೆಳಕಿಗೆ ಒಡ್ಡಿಕೊಂಡು ನನ್ನತನವನ್ನ ನಾನು ಕಂಡುಕೊಂಡೆ.

೪

ನರಗಳಲ್ಲೆಲ್ಲಾ ನೋವು ಚಲಿಸುತ್ತ ಬಿಗಿದು ಆ ನರಗಳು ನಮ್ಮ ಜೀವನವನ್ನ ಕಟ್ಟಿಹಾಕಿದಂತಿದೆ ಆದರೂ ಹೌದು, ಇದ್ದಕ್ಕಿದ್ದಂತೆ ಹರ್ಷದ ಬುಗ್ಗೆ! ಸಮುದ್ರಕ್ಕೆ ತೆರೆದಿಟ್ಟ ಬಾಗಿಲಂತೆ, ಅಗಾಧ ಕೂಪದತ್ತ ಬಾಗಿ ನೋಡಿದಂತೆ, ಶಿಖರದ ತುತ್ತತುದಿ ಏರಿದಂತೆ, ವಜ್ರಗಳ ನದಿಯು ಶಿಲೆಯ ಕವಚತೊಟ್ಟಂತೆ ನೀಲಜಲಪಾತ ರಭಸದಿಂದ ಪ್ರತಿಮೆಗಳ ಮೇಲೆ ಸುರಿದಂತೆ ಬಿಳಿಯ ಸ್ಫಟಿಕ ಶಿಲೆಯ ದೇವಾಲಯದಂತೆ, ಹಕ್ಕಿಯೊಂದು ದೂರ ಗಗನದಲ್ಲಿ ಹಾರುತ್ತಿರಲು ಅದರ ರೆಕ್ಕೆಗಳ ಮೇಲೆ ಮಿಂಚು ಪ್ರತಿಫಲಿಸಿ ಹೊಳೆದಂತೆ, ಕೂಕ್ಕು ಹಣ್ಣನ್ನು ಕುಕ್ಕಿ ಬಿರುಕು ಬಿಟ್ಟಂತೆ! ನನ್ನ ಅಳು ಆಕ್ರಂದನಗಳು ಉರಿಯುತ್ತಿರುವ ಬೆಂಕಿ

ರೆಕ್ಕೆಪುಕ್ಕಗಳಂತೆ ಸಿಪ್ಪೆ ಸುಲಿದ ಕೆಂಪು ಹಣ್ಣನಂತೆ ಕಾಣುವ ಗ್ರಹಗಳು, ನಕ್ಷತ್ರ ಕಾಯಗಳು ಕಳಚಿ ಕೆಳಕ್ಕೆ ಉದುರುತ್ತಿರುವಂತೆ , ಅಸಂಖ್ಯಾತ ಪ್ರತಿಧ್ವನಿಗಳು ಆಕಾಶದಿಂದ ನೆಲಕ್ಕೆ ಅಪ್ಪಳಿಸುವಂತೆ, ಆಕಾಶದರ್ಪಣದಲ್ಲಿ ಬಿಂಬಿಸುವ ನನ್ನ ಪ್ರತಿಬಿಂಬ ಮತ್ತೆ ಮತ್ತೆ ಪ್ರತಿಫಲಿಸುತ್ತಾ ಅಳಿಯುತ್ತ ನನ್ನ ಅಸಂಖ್ಯಾತ ಚಿತ್ರ ಗಳನ್ನು ಸೃಷ್ಟಿಸುತ್ತಿದೆ.

ದುರ್ಗದ ಗಾಳಿಗೋಪುರ

ಕೆಲವು ಮಧ್ಯಾಹ್ನಗಳಲ್ಲಿ ನನ್ನಲ್ಲಿ ಏನೋ ಅಗೋಚರ, ಅದ್ಭುತ ಘಟನೆಗಳು ಸಂಭವಿಸುವವು. ಆಗ ನಾನು ನನ್ನ ಮುಖಚಹರೆಗಳನ್ನೂ ಮೂಲಪ್ರವೃತ್ತಿಗಳನ್ನು ಬದಲಿಸಿ ಅತಿ ದುರ್ಗಮವಾದ ಹಾದಿಗಳಲ್ಲಿ ಅಲೆದಾಡುತ್ತೇನೆ. ನನ್ನ ಬಲಭಾಗದಲ್ಲಿ ಆಳ ಕಣಿವೆ, ಎಡಕ್ಕೆ ಎತ್ತರದ ಬಂಡೆಗಳ ರಾಶಿ, ಮುಂದೆ ಜಲಸಂಧಿ ಇರುವ ಇಕ್ಕಟ್ಟು ಹಾದಿ, ಬಾಲ್ಯದಿಂದಲೂ ಆ ದುರ್ಗ ಹತ್ತಬೇಕೆಂಬ ಬಯಕೆ ನನಗೆ. ಆದರೂ ಭೀತಿ ಒಂದಲ್ಲ ಒಂದು ದಿನ ಆ ದುರ್ಗ ಏರಿಯೇ ತೀರಬೇಕೆಂಬ ಹಠ. ಆ ಶಿಖರದತ್ತ ಕೋಲ್ಮಿಂಚಿನ ಕಿರೀಟದ ಹೊಳಪಿನಿಂದ ಝಗಝಗಿಸುತ್ತಿದೆ. ಆ ಬೆಳಕು ಕಣಿವೆಯನ್ನು ಸೀಳಿ ಇಬ್ಭಾಗವಾಗಿಸಿದೆ. ಆ ಅಗಾಧವಾದ ದುರ್ಗ ಅದರ ಒಳಗೇ ಹರಿಯುತ್ತಿರುವ ಲಾವಾರಸ ಅದು ಹಾಡುವುದೋ ಪ್ರೀತಿಸುವುದೋ, ಕ್ರೌರ್ಯ ತೋರುವುದೋ? ತೀಕ್ಷ್ಣಗಾಳಿ ಚೀರುತ್ತಾ ನನ್ನ ತಲೆಗೂದಲನ್ನು ಕೆದರಿ ಹಾರಿಸುತ್ತಿದೆ. ಸಿಡಿಲು ನನ್ನ ಕಿವಿಯಲ್ಲಿ ಮೊಳಗಿ ಮೊರೆಯುತ್ತಿದೆ. ನಾನು ಮನೆಗೆ ಹೋಗುವ ಮುನ್ನ ಬಂಡೆಸೀಳಿನಲ್ಲಿ ಬೆಳೆದ ಪುಟ್ಟ ಹೂವನ್ನು ಕಿತ್ತುಕೊಳ್ಳುವೆ. ಆ ಹೂವು ಸೂರ್ಯನ ಕಿರಣಕ್ಕೆ ಸುಟ್ಟು ಕರಕಾದ ಕಪ್ಪು ಹೂವಾಗಿದೆ.

ಮೆಕ್ಸಿಕೋ ಕಣಿವೆ

ಸೂರ್ಯನ ಬೆಳಗು, ತನ್ನ ಪಾರದರ್ಶಕತೆಯನ್ನು ಬಿಚ್ಚಿಕೊಳ್ಳುತ್ತಿದೆ. ಬೆಳಕು ಸಾವಿರ ಸುತ್ತಿಗೆಗಳಿಂದ ನನ್ನನ್ನು ಕುಟ್ಟಿ ಕೆಡುವುತ್ತಿದೆ. ನಾನು ಒಂದು ಕಂಪನಕ್ಕೂ ಮತ್ತೊಂದು ಕಂಪನಕ್ಕೂ ನಡುವಿನ ವಿರಾಮ. ಒಂದು ತೀವ್ರ ತೀಕ್ಷ್ಣ ಕ್ಷಣ ನನ್ನ ದೃಷ್ಟಿಗಳೆರಡೂ ಸಂಧಿಸಿ ಅಲಕ್ಷಿಸಿ ಮತ್ತೆ ನನ್ನಲ್ಲೆ ಒಂದಾಯಿತು. ಅವು ಒಪ್ಪಂದ ಮಾಡಿಕೊಂಡವೇ? ನಾನು ಬರಿಯ ಆಕಾಶ ರಣರಂಗ. ನನ್ನ ಕಾಯದ ಒಳಗೆ ಮತ್ತೊಂದು ಕಾಯವ ನಾನು ಕಂಡೆ. ಕಲ್ಲುಗಳು ಹೊಳೆಯುತ್ತಿವೆ. ಸೂರ್ಯನು ನನ್ನ ಕಣ್ಣಿಂದ ಕಳಚಿ ಬಿದ್ದ. ಎರಡು ನಕ್ಷತ್ರಗಳು ತನ್ನ ಕೆಂಗರಿಗಳನ್ನು ಬಿಚ್ಚಿತು. ನನ್ನ ಕಣ್ಣಾಗುಳಿಯೊಳಗೆ ಅವುಗಳ ಭವ್ಯ ಗರಿಗಳ ಜಾಗರ, ಕಾಮ, ಕ್ರೂರ ಕೂಕ್ಕು. ಈಗ ನನ್ನ ಕಣ್ಣು ಹಾಡುತ್ತಿದೆ. ಆ ಹಾಡನ್ನು ಭೇಧಿಸಿ ಹೊರಟ ನಾನು ಬೆಂಕಿಯಲ್ಲಿ ಬಿದ್ದೆ.

ದಿಟ್ಟಧ್ವನಿ

ದಿಟ್ಟವಿಶಿಷ್ಟ ನಿನ್ನ ಧ್ವನಿ, ನೀನು ಮಂಜಿನ ಮತ್ತು ರೆಕ್ಕೆಗಳ ದೇಶಃ ಕಾಲಿಟ್ಟೆ. ಪ್ರಪಾತಕ್ಕೂ ಪರ್ವತಕ್ಕೂ ನಡುವೆ ನಕ್ಷತ್ರಗಳು ತಮ್ಮನ್ನು ತಾ ಹೆರೆದು ಹರಿತಗೊಳಿಸಿಕೊಳ್ಳುತ್ತಿವೆ. ಅದರೊಂದಿಗೆ ನಿನ್ನ ನೇರಳೆಯ ಭಾರವಾ ಬಾಲದ ಪರಪರ ಸದ್ದು.. ಎತ್ತ ಹೊರಟಿರುವಿ? ಕಪ್ಪುಹಕ್ಕಿಯೆ, ನಿನ್ನ ಕೂ ಹೆಬ್ಬಂಡೆಗಳನ್ನು ಸ್ಫೋಟಿಸಬಲ್ಲದು. ನಿನ್ನ ಸಾಮ್ರಾಜ್ಯವೆಂಬ ಮುಖವಾ ಮುಸುಕು ಕಬ್ಬಿಣದ ಹಾಗೂ ಸೂರ್ಯಕಾಂತಿಯ ಹೂ, ಹೆಬ್ಬಂಡೆ ಬೆಂಕಿ ಹಾಗೂ ಪಾಚಿಯ ನಡುವೆ, ಭ್ರಮಾತ್ಮಕ ಹಾಗೂ ಎಚ್ಚರದ ನಡು ಎಳೆದ ಗೆರೆಯಂತೆ. ನಿನ್ನ ಅಗಾಧ ರೆಕ್ಕೆಗಳ ಕಲ್ಪನಾ ಸಾಮ್ರಾಜ್ಯದ ಹಾದ ನಿನ್ನ ಕುದಿವ ಕಣ್ಣೀರಿನ ಉತ್ತರಗಳು ಅಗಾಧ ಎತ್ತರದಿಂದ ಹೊಮ್ಮಿ ಯುತ್ತಿದೆ. ಗಾಜಿನ ಕೊರಳನ್ನು ಬೆಳಕು ಇಬ್ಭಾಗ ಸೀಳಿದಾಗ ಚಿಮ್ ಪ್ರಕಾಶಮಯ ಕಪ್ಪು ಕವಚದಿಂದ ಹೊರಟ ಕಾಂತಿಯೇ ಅತಿ ಚಳಿ. ನಿ ಪ್ರತಿಫಲಿಸುವ ಪಾರದರ್ಶಕ, ನಿನ್ನ ಉನ್ನತ ಬಿಳಿಯ ಕಿರೀಟ ಶಿಖ ಜಗತ್ತನ್ನು ಕೈಬೀಸಿ ಕರೆಯುತ್ತಿದೆ. ಹಂಸಗಳು ತಮ್ಮ ಬಿಳುಪಿನಲ್ಲೇ ಮು ಎದ್ದಂತೆ ಪರಿಶುದ್ಧ ಬಿಳುಪಿನ ತುತ್ತತುದಿಯಲ್ಲಿ ಮಿಂಚು ಬೆಳಕು ಎಲ್ಲೆಡೆ ವ್ಯಾಪಿಸಿದೆ. ನಿನ್ನ ಹೆಪ್ಪುಗಟ್ಟಿದ ತುಟಿಗಳು ಈ ಸೃಷ್ಟಿಕರ್ತನನ್ನು ಚುಂಬಿ ಕಾತರಿಸುತ್ತಿದೆ. ಸ್ಫೋಟಿಸಲು ಕಾದಿರುವ ನೀನು ಸಮಯ ಸಿಕ್ಕ ಕ್ಷಣ ಸ್ಫೋಟಗೊಂಡು ಭೂಮಿ ಆಗಸಗಳ ನಡುವೆ ದೀರ್ಘ ಕಪ್ಪುಕಲೆಯನ್ನು ಉಳಿಸಿ ಗಾನಸ್ವರ ಮೇಳವಾಗಿ ಮೂಲೆಮೂಲೆಯನ್ನೂ ಮುಟ್ಟಿ ಕೋಡುಗ ತುತ್ತತುದಿಯನ್ನು ತಟ್ಟಿ ಕೊನೆಗೆ ಮಾಯವಾಗುವೆ.

ಪಡಿಯಚ್ಚು ನೆರಳುಗಳು

ಆತ್ಮದಲ್ಲಿ ಕೇಳಿದ ಹೆಜ್ಜೆ ಸಪ್ಪಳ
ಮನದಲ್ಲಿ ನೆರಳುಗಳಿಗಿಂತ ಹೆಚ್ಚು
ನೆರಳುಗಳ ಚಿಂತೆ ಹೆಜ್ಜೆ ಸಪ್ಪಳಕ್ಕಿಂತ
ಪ್ರತಿಧ್ವನಿಗಳ ಹಾದಿ ಆ ಒಳ ಹಾದಿಯಿಂದ
ನೆನಪುಗಳು ಅಳಿಯುತ್ತ ಅರಳುತ್ತ
ನಡೆಯದೇ ನಡೆಯುತ್ತ,
ಈ ಗಳಿಗೆಯಲ್ಲಿ ಇದೇ ಸೇತುವೆ ಮೇಲೆ
ಒಂದು ಅಕ್ಷರದಿಂದ ಮತ್ತೊಂದಕ್ಕೆ ಜಿಗಿದು
ಬೆಂಕಿಯ ಮಳೆ ಸುರಿಸುತ್ತಿದೆ, ಅದರ
ಹೆಜ್ಜೆಗಳು ನನ್ನ ಹೆಜ್ಜೆಯೊಳಗೆ.

ಹೆಜ್ಜೆ ಇಟ್ಟಲ್ಲೆಲ್ಲಾ ಶೂನ್ಯ ಆವರಿಸಿ
ಹೆಸರುಗಳೆಲ್ಲವೂ ಅಳಿದು ಹೋಗಿ
ಎರಡು ಪದಗಳ ನಡುವೆ ವಿರಾಮ;
ಸೂರ್ಯ ನುಣುಪು ಬಂಡೆಯ ಮೇಲೆ,
ನಾನು ಹೇಳಿದ್ದು ಏನು? ಈ ಸೂರ್ಯ
ಅಳಿಸಿಹಾಕುತ್ತಾನೆ ಎಲ್ಲೆಲ್ಲಾ ಮೂಡಿ
ಆತುರದಿಂದ ಈ ಹಾಳೆಯ ಮೇಲೂ ಬಿದ್ದು
ನನ್ನ ಮುಂದಲೆ ತೆರೆಯುತ್ತಾನೆ.
ಮಹಡಿಯ ಮೇಲೆ
ನನ್ನೊಳ ಹೊಕ್ಕಾಗ
ನನ್ನಿಂದ ನಾನೆ ದೂರ ಉಳಿವೆ
ಇದರೊಂದಿಗೆ ನದಿತಿರುವುಗಳ
ಅಂಕುಡೊಂಕಿನ ಹಾದಿ ಹೆಬ್ಬಂಡೆ, ಆಡುಗಳು
ಪದಗಳು ಥಳಥಳನೆ ಹೊಳೆಯುತ್ತಿವೆ ನೆರಳಿನಲ್ಲಿ
ಕಪ್ಪು ಅಲೆ ಅಲೆ ಅಕ್ಷರಗಳು

ತುಂಬಿ ತುಳುಕುತ್ತಿವೆ ಈ ಹಾಳೆಯಲ್ಲಿ
ಇಂಕು ಮೂಲನದಿ
ಹಸಿ ಮಣ್ಣಿನ ಭಾಷೆ,
ನನ್ನ ಮುಂದಲೆಯಿಂದ ಹೊರಗೆ ಅಟ್ಟುತ್ತೇನೆ.
ನಡುಹಗಲಿನಾಕೃತಿಯ ಕಾಲ
ಶತಶತಮಾನಗಳ ಆಲದಮರದ ಅಪಮಾನಿತ ನೆರಳು
ತಾಳ್ಮೆಗೆಡದೆ ಗೋಡೆಗಳ ಮೇಲೆ
ಹಾಗೆ ಅಚಲವಾಗಿ ನಿಂತಿದೆ
ಆಲೋಚನೆಗಳು ಇಬ್ಭಾಗವಾಗಿ
ಕಂಡೂ ಕಾಣದಂತೆ ಅಲುಗಾಡುತ್ತಿವೆ
ನೋಡಿದರೆ ಇದ್ದೂ ಇಲ್ಲದಂತೆ
ಸಂಶಯದ ಗಡಿ ದಾಟಿ ನಿಂತಿದೆ
ಬಿಸಿಲ್ಗುದುರೆಯ ಬೇಟೆ, ಮರುಭೂಮಿಯಲ್ಲಿ
ಭಾಷೆ ಶರಣಾಗಿ ತಲೆಬಾಗಲು
ನನ್ನೊಳಗೆ ನಾನು ಸಂಚರಿಸುವೆ.

ಗಳಿಗೆ, ಸ್ಫಟಿಕ ಶಿಲೆಯ ಗೋಳ
ಅಪಾರ ಶೂನ್ಯದಲ್ಲಿ ಹೊಕ್ಕ ನಾನು
ಬೃಹತ್ತಾದ ಬೂದಿಮರ, ಭೂತ
ಹಸಿರು ಅಚ್ಚರಿಯ ಉದ್ಗಾರ!
ಗಾಳಿಗೆ ತೇಲಾಡುವ ಕೊಂಬೆರೆಂಬೆಗಳು
ಮತ್ತೊಂದು ಮಗ್ಗುಲಲ್ಲಿ ಎಲ್ಲ ಖಾಲಿ
ಭೀತಿಯ ತೀವ್ರ ಅನಿಶ್ಚಿತವನ್ನು
ಅಕ್ಷರಗಳಲ್ಲಿ ಮೂಡಿಸುತ್ತಿದೆ
ನೆನಪುಗಳ ಕಣ್ಣು ಕಳೆದುಕೊಂಡ
ಕುರುಡು ಪ್ರತಿಮೆಗಳೊಡನೆ ನನ್ನ ಹೆಜ್ಜೆ
ನಾನೊಂದು ಕುರುಡು ಪ್ರತಿಮೆ
ಬೂದಿಮರ ಅಗ್ನಿರಸವನ್ನು ಉಗುಳಲು

ಆದರ ಸರಬರ ಶಬ್ದಾಲಾಪ ಏರುತ್ತ ಏರುತ್ತ
ನುಡಿ ಶಿಖರವಾಯಿತ್ತು.
ತೋಟ ಕುತ್ತುಳಲು ಪೊದೆಯಾಗಿ ಆ
ಕಾವಿಗೆ ಜೀವಜಾಲವು ಹುಟ್ಟಿ ಆ
ಪುರಾಣಗಳು ಇದನ್ನೆ ಪ್ರತಿರೂಪಿಸಲು
ಹಸಿ ಇಟ್ಟಿಗೆಯ ಆ ಹಳದಿ -ಆ ಕಾಲ
ಕಂಡೂಕಾಣದ ಕತ್ತಲಿನ ಗೋಡೆಗಳು
ಅದ್ಭುತ, ಸೂಕ್ಷ್ಮ ಬಿಡುಕು ತುಂಬಿದ ಗೋಡೆ
ದೈತ್ಯ ನಾಯಿಕೊಡೆ ವಿಷದ ಸಸ್ಯ
ಕೊಳೆತ ನೀರು ಬಾಲದ ಹುಳು ವಿಷದುಸಿರು
ನನ್ನೊಳಗಿನ ಕಣ್ಣು, ಅದರೊಳಗೆ ನಾನು.

ಬಾಲಕನು ಬಿದ್ದ ಬಾವಿ ತುದಿಯಿಂದ
ಆ ಬಾವಿ ನನ್ನ ಕಾಲ ಪ್ರಮಾಣ
ಆದರಲ್ಲಿ ಮತ್ತೆ ಮತ್ತೆ ಬಿದ್ದೇಳುತ್ತ
ನನ್ನ ಅರಿವಿನಂತೆ ಈ ಬಾವಿಯ ನೀರು
ಏರುತ್ತ ಮೇಲೆ ಬರುತ್ತಿದ್ದಂತೆ ನನ್ನ ನೆರಳು ಮುಳುಗುವುದು

ಆ ಶೂನ್ಯ; ಆಗೋಡೆ, ಆ ಬೂದಿಮರ, ಆ ಬಾವಿ

ಕೊಳದ ಆಕಾರ ತಾಳಿ ಹೊಳೆದು ತೋರಿ
ಪಾರದರ್ಶಕ ಎಲೆಗಳು ಅದರ ತೀರದಲ್ಲಿ
ಲಯದ ಕೀರ್ತಿಶಿಖರಗಳು ಪಿರಮಿಡ್ಡುಗಳು
ಪ್ರಕೃತಿ ಸಿರಿಚಿತ್ರ ಹಿಡಿದಿಟ್ಟ ಅಸ್ಪಷ್ಟ
ಕನ್ನಡಿಗಳ ಕಲಾಕುಂಚ ಎಳೆದ
ತೆಳು ರೇಖೆಗಳು, ವಿರಾಮ ಚಿನ್ಹೆಯ ಹಾಗೆ ಕಂಡು
ಭೂಮಿ ಆಕಾಶಗಳ ಮಧ್ಯೆ ನಿಂತಿದೆ, ಶಂಕುವಿನಾಕೃತಿ ತಾಳಿ,
ನಿರ್ಜನ ಸ್ಥಳದಲ್ಲಿ ಪೂರ್ವಜರ ಭಾಷೆ
ಅಲೆಗಳು ಆಡುತ್ತಿವೆ ಆದರ ಸಂಜ್ಞೆಗಳು

ಆಕಾಶದೆತ್ತರಕ್ಕೆ ಹಾರುತ್ತಿವೆ
ಬಹುಶಃ ಇದೇ ದಿನವಿರಬೇಕು ದಾರಿಗಳಲ್ಲಿ ಕೊನೆಮುಟ್ಟಿ
ಬೊಂಬುಗಳ ಮಧ್ಯೆ ಹೆಣದ ಚಿತೆ
ಚಕಮಕಿಕಲ್ಲಿನ ತಿರುವು, ರಕ್ತ ನದಿಯ ಮೂಲ
ಸಾವಿನ ಬಾಗಿಲನ್ನಿನ್ನೂ ತೆರೆದಿಲ್ಲವೇ? ಎಂದು ಕೇಳುತ್ತಿದೆ.

ಪಶ್ಚಿಮದ ಬೆಳಕು ಮುಲುಕಿ ನಂದಿಹೋಗಿ
ಕ್ರಮಬದ್ಧ ಅಗ್ನಿಜ್ವಾಲೆ
ಬುವಿಯ ರತ್ನಕಂಬಳಿ ಮೇಲೆ
ರಙುರಂಗಿನ ಪುಸ್ತಕಗಳು
ಕೆತ್ತನೆಯ ಕಲೆ, ಅಗ್ನಿಪರ್ವತ, ಗುಡಿಗೋಪುರಗಳು
ನೆನೆದು ಸೆಟೆದು ನಿಂತ ಉಣ್ಣೆಯ ಅಂಗಿ
ಮೆಕ್ಸಿಕೋ ಮೂಲನಿವಾಸಿಗಳ ರಕ್ತದಲ್ಲಿ
ನೆನಸಿಟ್ಟ ಅಂಗಿ,
ಗೊಡ್ಡು ಬೆದರಿಕೆಗಳ ಬೆಂಕಿಯಲಿ ಸುಟ್ಟು
ಕಪಾಟಿನ ಪುಸ್ತಕಗಳು ಕಪ್ಪು ಕೆಂಡದುಂಡೆಗಳಾಗಿ
ಸೂರ್ಯ ತನ್ನ ಉರಿಗೈಯಿಂದ ಉಜ್ಜಿ ಆರಿಸಿದ.
ಏಕೆ ನನ್ನ ಈ ಲೇಖನಿ ಬಂಡೇಳುತ್ತಿದೆ?
ಬರಹ ನಾಮಸೂಚಿಯಾಗಿ
ಗ್ರಹಣ ಹಿಡಿದ ಕೊಳವಾಯಿತು
ನಾನೊಂದು ಪುಟ ಮಗುಚಲು ಅದು
ಪಿಸುಗುಟ್ಟಿ ನುಡಿಯುತ್ತದೆ
ಎಚ್ಚರದಿಂದ ನೋಡುತ್ತದೆ,
ಅಕ್ಷರಗಳ ನಿಬಿಡ ಸಂದಣಿ ನೋಟ
ನನ್ನ ನೆನಪುಗಳ ಕೆಸರು ರಾಡಿ-
ರಾಡಿ ಮಣ್ಣಿನ ಕನ್ನಡಿ, ಎಲ್ಲ ನನ್ನ ಪ್ರತಿಬಿಂಬ?
ನನ್ನ ಕಣ್ಣು ದಯೆ ಕ್ರೋಧಗಳಿದ್ದ ಕಣ್ಣು
ಕದಡಿದ ನೀರಕಣ್ಣಿಂದ ನೋಡುತ್ತಿದೆ

ಕೆಸರಿಂದ ಮೇಲೆದ್ದ ಪದಗಳತ್ತ ದಿಟ್ಟಿಸುತ್ತಿದೆ.
ನನ್ನ ಕಣ್ಣಿನಿಂದ ನಾನು ನೋಡುತ್ತಿಲ್ಲ
ಪದಗಳೇ ಆ ನನ್ನ ಕಣ್ಣುಗಳು
ನಮಗೆ ಹಲವು ಹೆಸರುಗಳು
ಹೆಸರ ಇಲ್ಲವೆಂಬುದು
ಈ ಜಗತ್ತಿನಲ್ಲಿ ಇಲ್ಲ
ಮಣ್ಣಿನ ಮಗ ಆ್ಯಡಂ
ಮಣ್ಣಿನ ಬೊಂಬೆಯಲ್ಲ ಒಂದು ಹೋಲಿಕೆ ಅಷ್ಟೆ,
ಈ ಜಗತ್ತನ್ನು ನೋಡುವುದು ಎಂದರೆ
ಅದರೊಡನೆ ಮಾತನಾಡುವುದು, ಪದದ ಕನ್ನಡಿಗಳು
ಆ ನನ್ನ ಪ್ರತಿಬಿಂಬವೆಲ್ಲ?
ಕೆಸರು ಮಣ್ಣಿಂದ ಎದ್ದ ಪದಗಳು
ನನ್ನ ನೆನಪಿನ ಮೂಲ ಕೆದಕುತ್ತಿವೆ, ನೀರ ನುಡಿಗಳ
ಪ್ರತಿಬಿಂಬಗಳ ಹೊಳಪು-ತೋಪುಗಳಲ್ಲಿ
ತೋಡುಗಳ ಅಂಚಲ್ಲಿ ನೀರ ಗುಳ್ಳೆಗಳ ತಳದಲ್ಲಿ
ಹೊನ್ನು ಕೆಂಬಣ್ಣಕ್ಕೆ ತಿರುಗುತ್ತಿದೆ.
ನೆರಳುಗಳ ನಿರಿಗೆ ತರಂಗ ಹೊಳಪು ಪ್ರತಿಧ್ವನಿ
ಬಿರಿತಹ ಸಂಜ್ಞೆಗಳ ಜುಳುಜುಳು ನಾದ
ನನ್ನ ಕಣ್ಣುಗಳು ಬಾಯಾರಿವೆ, ಅಪಾರ ತಾಳ್ಮೆಯ ಮಣ್ಣು
ಕುಡಿಯಲೆಂದಲ್ಲ ನೀರು ಇರುವುದು, ತಿಳಿಯುವುದಕ್ಕೆ.

ಎತ್ತರದ ಬಯಲ ಕೆಸರು ಸೂರ್ಯತಾಪಕ್ಕೆ ಆವಿಯಾಗಿ
ಅಪ್ರಯೋಜಕ ಧೂಳಷ್ಟೆ ಈಗ ಉಳಿದಿದೆ
ವಾರಸುದಾರರಿಲ್ಲದ ಅನಾಥ ವಸ್ತುಗಳಂತೆ
ಈಗ ನಾನೆಲ್ಲಿದ್ದೇನೆ?
ನಾನು ಇದ್ದಲ್ಲಿಯೇ ಇದ್ದೇನೆ.
ಕುಸಿಯುತ್ತಿರುವ ಗೋಡೆಗಳಲ್ಲಿ
ಶಬ್ದಶೂನ್ಯ ಆವರಿಸಿದ ತಾಣದಲ್ಲಿ

ಅಬ್ದುಲ್ ಅಲ್ ರೆಹಮಾನ್, ಪಾಂಪೆ ಹೂಡಿದ
ಯುದ್ಧಗಳು ಆ ಗೋಡೆಗಳ ಮೂಲೆ ಮೊಡಕುಗಳಲ್ಲಿ
ಅರ್ನೆಸ್ಟೊ, ಗುಲರೆಮೊಗಳೊಡನೆ
ಕಡುಹಸಿರಿನ ಎಲೆಗಳ ಸುಂದರ ಪಿಸುಮಾತು,
ಸೂರ್ಯ ಪಂಜರ, ಹಮ್ಮಿಂಗ್ ಬರ್ಡ್‌ನ ಹೊಳಪು
ಅನಾದಿಯ ಅಂಜೂರದ ಮರದ
ಬಹುರೂಪಿ ಭೂತದೆಲೆಗಳು
ಆಚರಣೆಗಳೆಲ್ಲ ತಿರುಗುಮುರುಗು
ಅದರ ವಿಕಾರ ದಿವ್ಯದರ್ಶನಗಳು, ತನ್ನ
ಒಡಲಿನಿಂದ ನೇಯುವ ಭಾಷೆಗಳು
ಭೂತದ ಕಗ್ಗಂಟು ಬಿಡಿಸುವ ಚಿಂತೆ, ತವಕ.
ಸ್ಪರ್ಶಮಾತ್ರದಿಂದಲೆ ಹಾಗೆ ಮಾಯವಾಗುವುದು
ಅಪಹಾಸ್ಯಕ್ಕೀಡಾದವನ ರಕ್ತ, ನಿಶ್ಚಿತ ಯೋಚನೆ
ನನ್ನ ಮುಂದಲೆಯಲ್ಲಿ ನಿಂತು ನ್ನೋಡುವ
ಹೆಬ್ಬಯಕೆಯ ಒಡೆಯರು *ದೆವ್ವಭೂತಗಳು.
ನಮ್ಮ ಆಸೆಗಳು ಭೂತಗಳಾಗಿ
ಗಾಳಿಗೆ ಅಲುಗುವ ಮರಗಳ ನರನಾಡಿ ನಾವಾಗಿ
ಆಸೆ ಅಗ್ನಿ ಚಾಚಿದ ನಾಲಗೆಗಳು, ತಮ್ಮನ್ನು -
ತಾವೇ ನುಂಗಿ ನೊಣೆಯುತ್ತಿವೆ.

ಮರದ ಬೊಡ್ಡೆಯ ಅಗಲ ಬಿರುಕು
ಲೈಂಗಿಕ ಮುದ್ರೆ, ಸರ್ಪಸುತ್ತಿನ ಸಂದು
ಸೂರ್ಯನ ದೃಷ್ಟಿಗೂ ನನ್ನ ದೃಷ್ಟಿಗೂ ಸಮೀಪ
ಆ ಬಿರುಕಿನ ತುಂಬೆಲ್ಲ ಇರುವೆ ಸಾಲು
ಯೋಚನೆಗೂ ನೋಟಕ್ಕೂ ನಡುವೆ ದೊಡ್ಡ
ಬಿರುಕು, ತಲುಪಲಾಗದ ಪೋರ್ಟಿಕೋಗಳ ತಲುಪುವ ಸಾಹಸ.

ಅಂತರಾಳದ ಹಸಿರು ಅಲೆ
ಹಸಿರು ರಕ್ತ, ಹಸಿರು ಬೆಂಕಿ
ಹಸಿರು ನಕ್ಷತ್ರ ಉರಿಯುತ್ತಿವೆ ಕಪ್ಪು ಹುಲ್ಲಿನ ನಡುವೆ-ಆ
ಹಸಿರ ಸ್ವರ್ಗೀಯ ನಾದಸ್ವರ
ಅಂಜೂರದ ಮರದ ಅನಾದಿಕಾಲದ ರಾತ್ರಿ
ಬೆರಳ ತುದಿಗಣ್ಣ ಅಂತರಾಳ
ಸ್ಪರ್ಶವೆಂದರೆ ನೋಟ, ನೋಟವೇ ಸ್ಪರ್ಶ
ಕಣ್ಣುಗಳು ಕೇಳುತ್ತಿವೆ, ಕಿವಿ ಮೂಸುತ್ತಿದೆ
ಇದ್ದಂತೆಯೂ ಇಲ್ಲದೆ, ಇಲ್ಲದೆಯೂ ಇದ್ದು
ವಸ್ತು ವಿಷಯಗಳು ತಮ್ಮಂತೆ ತಾವೆ
ಬಂಧಿಸಿಟ್ಟ ಇಪ್ಪತ್ತು ಸಮಾನಾಂತರ ಮುಖಗಳು
ಜೇರುಂಡೆ ಸೌದಗಳ ನೇಯುತ್ತಿವೆ
ನೇಯದ ಒಂದು ಕೀಟ
ಜೇಡಬಿಟ್ಟ ಶಬ್ದಜಾಲವನ್ನು ನೇಯುತ್ತಿದೆ.
ಚಂದ್ರನಿಂದಲೆ ನೇರ ಇಳಿಬಿದ್ದ ನೂಲು
ಒಳಗೆ ಬರಿಶೂನ್ಯ
ತೆರೆದ ಅಂಗೈ ತೆರೆದ ಮನ
ಆಕಾರಗಳ ಕುರಿತು ಆಲೋಚಿಸಿದಾಗ
ಅವು ಉಸಿರಾಟ, ಮಾತಾಡಿ, ಓಡಾಡಿ
ಮೌನದಲ್ಲೇ ಕರಗಿ ಲೀನವಾಗಿ
ಆಳದಲ್ಲಿ ಪ್ರತಿಧ್ವನಿಗಳ ನೇಯುವ ತಾಣದಲ್ಲಿ
ಬೆಳಕ ಜಲಪಾತ ಬೀಳುತ್ತಿದೆ
ತುಟಿ-ತುಟಿಯ ನಡುವೆ ಬಿರುಕು
ಬೆಳಕುನೀರು, ನೀರಿನ ಪಾರದರ್ಶಕ ಕಾಲ
ಅಲ್ಲಿ ಕಣ್ಣುಗಳು ಬಿಂಬ ತೊಳೆಯುವುವು
ಅದರಾಳದಲ್ಲಿ ಆಸೆಯ ತಂತುಗಳು
ಕ್ಷಣದ ಅನುರಣನ ಅನಂತಕಾಲ
ಮನದ ವಿದ್ಯುತ್‌ವೇಗ ತಿರುಗುತ್ತ
ಮತ್ತೆ ಮತ್ತೆ ತಿರುಗುತ್ತ

ಹೊಳೆದು ಹೊಸ ಹುಟ್ಟು ಪಡೆದು
ಕಪ್ಪು ಕಪ್ಪಾದ ಅಕ್ಷರಗಳು,
ಅದಕ್ಕೆ ಇಂಥ ನೆಲೆ ಎಂಬುದಿಲ್ಲ, ಯಾವಾಗಲೂ
ಅದೇ ದಿನ, ಅದೇ ರಾತ್ರಿ
ಕಂಡುಹಿಡಿಯಲಾಗದ ಕಾಲಕ್ರೀಡೆ.

ಸೂರ್ಯ-ಚಿರಯೌವ್ವನಿಗ
ಮಂಜು ಹುಲ್ಲು ಒಂದೇ ಆಗಿ
ಹಾಗೆ ಹೀಗೆಂದು ಹೇಳಲಾಗದಂತೆ
ಮಳೆ ಬರದಿದ್ದರೂ ಬಂದ ಹಾಗೆ
ಎಲ್ಲ ಇಲ್ಲದಿದ್ದರೂ ಇರುವ ಹಾಗೆ
ಅನಾಮಿಕ ಜನರ ಸೂಕ್ಷ್ಮಾತಿಸೂಕ್ಷ್ಮ ಭಾವಗಳು
ಹೆಸರೇ ಶರೀರವನ್ನು ಹುಡುಕಿ ಹೋಗುವುದು.

ನಿರ್ದಯ ಪಾರದರ್ಶಕ ಶುದ್ಧ ಪಂಜರ, ತನಗೆ
ಬೇಕಾದಂತೆ ಗುರುತುಗಳ ಕಳಚುತ್ತ ಬದಲಾಗಿ
ಹೊಚ್ಚ ಹೊಸರೂಪಗಳ ಧರಿಸುತ್ತ
ಅಂಜೂರದ ಮರ ಯೋಗಿಯಂತೆ ನಿಂತು ಆ ಅದ್ಭುತ
ಅಂಜೂರದ ಮರದ ವಿವೇಕ-
ವಾಗ್ವಾದಗಳು ಭೂತ ಪ್ರೇತಗಳೊಡನೆ
ಮೃತಾತ್ಮಗಳೊಡನೆ ಜೀವಿಗಳೊಡನೆ
ಕೊನೆಗೆ ನನ್ನೊಡನೆ
ಅನಂತಕಾಲದ ಮೆರವಣಿಗೆ.

ಮತ್ತೆ ಮತ್ತೆ ಅದೇ ಆವರ್ತನೆ
ಕಾಲದ ದಾರಿ ಕಾಲದ ತೂಕ
ನಸುಕು ಬೆಳಕಾಗಿ ಆ ಬೆಳಕು
ಶುದ್ಧ ಆವಿಯಾಗಿ ಆವಿ ಮತ್ತೆ ಹನಿಯಾಗಿ
ಅದರ ಗೂಢಾಂತರಾಳದಿಂದ ತೊಟ್ಟಿಕ್ಕುತ್ತಿದೆ
ಕಿಟಕಿ ಕನ್ನಡಿಗಳ ಮೇಲೆ, ಎಲೆಗಳ ಮೇಲೆ.

ರೇಖಾತರಂಗಗಳ ಮಧ್ಯೆ ಈ ಜಗತ್ತು ಕಿರಿದಾಗಿ
ಆದರ ತುತ್ತ ತುದಿಯಲ್ಲಿ ನಿಂತ ಪ್ರತಿಬಿಂಬ;
ಎಲೆಗಳ ಮಧ್ಯೆ ಬೆಳಕು ಮೊಗ್ಗಾಗಿ ಅರಳಿ-ತನ್ನೊಡಲ
ತಾನೇ ನೇಯ್ದು ಸುತ್ತುತ್ತಿದೆ ಮತ್ತೆ
ಮರುಹುಟ್ಟು ಪಡೆಯುತ್ತ ಅಳಿಯುತ್ತ ವಿಸ್ತಾರ
ಶೂನ್ಯ ಪ್ರಪಾತಕ್ಕೆ ಬೀಳುತ್ತಿದೆ.

ಕಾಲ; ಅದು ಸೋಸಿದ ಬೆಳಕು-
ಕಪ್ಪು ಹಣ್ಣು ಬಿರಿದು ಸ್ಫೋಟಿಸಿದಾಗ
ನವವರ್ಣಮಾಲೆ ಅರಳಿದಂತೆ
ಮುರಿದ ಕೊಂಬೆಯ ಒಗರು ಹಾಲಿನ ದ್ರವದ
ಅಂಜೂರ ಮರ ಹೊಸರೂಪು ಪಡೆದಿತ್ತು
ಬೇಸಿಗೆಗೆ ಬೆಂದು ಚಳಿಗೆ ಮಾಗಿ ಬೋಳಾಗಿ
ಪಾರದರ್ಶಕ ಗಗನಕ್ಕೆ ಏರಿಬೆಳೆದ
ನಗ್ನ ಕಪ್ಪು ಕನ್ಯೆ.

ಆಕಾಶ ಹೊಳೆಯುವ ಶಿಲಾಸ್ಫಟಿಕ
ಸುತ್ತುತಿರುವ ಚಕ್ರ, ಹೊಂಬಣ್ಣದ ಖಂಡ
ಶೂನ್ಯ ಭೂಗೋಳ
ಹಿಮದ ಹೊಗೆಯಲ್ಲಿ ಅಗ್ನಿಜ್ವಾಲೆ
ಮಧ್ಯಾಹ್ನ ತಟ್ಟನೆ ಸೀದ ಜೇನಿನಂತಾಗಿ
ಭೂಮಿ ಆಕಾಶಗಳು ಒಂದಾದ ಕ್ಷಿತಿಜ -
ಶಿಖರಗಳಿಂದ ಧುಮಿಕಿದ ಬೆಳಕು ಹರಡಿದ
ಬಯಲಲ್ಲಿ ನೆರಳುಗಳ ಹೊನಲು.

ಲ್ಯಾಂಪಿನ ಬೆಳಕು, ರಾತ್ರಿ
ಮನೆಯ ಯಜಮಾನಿ
ನನ್ನ ಅಜ್ಜನ ಭೂತ

ಆ ರಾತ್ರಿಯ ಯಜಮಾನ
ನಾನು ಮೌನ ಒಡೆಯಬಲ್ಲೆ
ದೇಹವಲ್ಲದ ದೇಹ, ಕಾಲ
ಘಳಿಗೆರಹಿತಕಾಲ, ರಾತ್ರಿ
ಪಾರದರ್ಶಕ ತಾಪ, ಯಂತ್ರ ಈ ದೇಹ
ಕಲ್ಪನೆಯ ಸೌಧಗಳ ನಿರ್ಮಾಣ ಶೂನ್ಯದಲ್ಲಿ
ಆತ್ಮದ ಉಸಿರು ಸೃಷ್ಟಿಸಿತು ನನ್ನ
ರೆಪ್ಪೆ ಮಿಟುಕಿಸಲು ಹನಿದ ಕಣ್ಣೀರು
ನಾನು ಒಣಉರುವಲು ಕೇಳಿಪಡೆದೆ
ಹೊಗೆಯ ನಡುವೆಯೇ ಅತ್ತು ಕರೆದೆ
ಕುದುರೆ ಪಳಗಿಸುವವನ ಹೆಣದ ಚಿತೆ
ತೋಟದಲ್ಲಿ ತೇಲಾಡಿ ಅಲೆಯುತ್ತಿದೆ
ಚಡಪಡಿಸುವ ಹಸಿರು ಪೊದೆ ಎಳೆತಂದಿತು
ಏನೋ ಸುವಾಸನೆಯ ರಸ ಒಸರುವ ಸಸ್ಯ
ನನ್ನ ಹಿಂದೆ ನೆರಳು ಗೊಂಬೆಗಳಾಟ
ದ್ರಾಕ್ಷಿಗೊಂಚಲು ನೆರಳು
ಕುಣಿಯಲ್ಲಿ ರಕ್ತ ಕುಡಿಯುವುದಕ್ಕಿಂತ
ರೈತನಾಗಿ ಬದುಕುವುದೇ ಲೇಸು
ಸತ್ತ ರಾಜ್ಯ ಆಳುವುದಕ್ಕಿಂತಲೂ
ಉತ್ತು ನಾಯಿಗಳಿಗೆ ಉಣಿಸುವುದೇ ಲೇಸು
ಬಾಯಾರಿದ ರಾಕ್ಷಸಗವಿ
ಆ ಗವಿಯಲ್ಲಿ ನಾನು ಈಜಾಡಿ ಕಳೆದೆ
'ಸಿರಿಯನ್' ಅರ್ಧ ಹಕ್ಕಿ ನಾರಿ ಮೋಹಕ್ಕೆ ಸಿಕ್ಕಿಬಿದ್ದೆ,
ಕನಸೊಡೆದು ಎದ್ದೆ, ಎಂಥ ಭೀಕರ ಈ ಕನಸು!
ಅಸ್ಥಿಪಂಜರದ ಎಲುಬುಗಳೇ ನನ್ನ ಸಕಲ ಆಸ್ತಿ
''ಈ ಸಮಾಧಿಕಲ್ಲನ್ನು ಯಾರೂ ಅಲುಗಿಸಬೇಡಿ'',
ಹೀಗೆಂದು ಕೆತ್ತಿಸಿದೆ ನನ್ನ ಕಲ್ಪನಾ ಸಮಾಧಿಯ ಮೇಲೆ;

ಎಲ್ಲ ರೊಟ್ಟಿಯೂ ತೋಟದ ಬುಟ್ಟಿ ತುಂಬಿದ ಅಕ್ಷರಗಳು
ಮತ್ತೆ ನೆನಪು ಮಾಡುವ ಸವಿಯಾದ ಕಂದು ಪಿಯರ್ ಹಣ್ಣು
ಕಾರ್ಲ್‌ಸ್‌ಗರೆಟ್ಟಿ ನನ್ನ ಮತ್ತೊಂದು ಪ್ರತಿರೂಪ
'ನನ್ನನ್ನ ದೇವರು ಕಾಪಾಡಲಿ' ಎನ್ನುತ್ತಾ ಹೊಡೆದು ಬೀಳಿಸಿದ
ಮತ್ತೆ ಪುನರಾವರ್ತನೆಗೊಂಡ ಎಚ್ಚರತ್ತ ಕನ್ನಡಿ
ನನ್ನನ್ನು ನಾನೇ ಗಾಯಗೊಳಿಸಿಕೊಂಡೆ
ಈಸಿನ್ ಮತ್ತು ಲುಸಿಯಸ್ ಈ ಇಬ್ಬರು ಕತ್ತೆಗಳು
ಕ್ಯಾಪ್ಪನ್‌ನೆಯೋ ಆಕ್ರೋಪಸ್‌ನೊಡನೆ ಸೆಣಸಿದ ಧೀರ
ಪುಸ್ತಕಗಳಲ್ಲಿ ಲೈಂಗಿಕೋದ್ರೇಕ ಸಾಲುಗಳಿಗೆ ಗುರುತು ಹಾಕಿ
ಮಧ್ಯಾಹ್ನ ಸುರಿಯುತ್ತಿರುವ ಧಾರಾಕಾರ ಮಳೆ
ದೇಹ ಉದ್ರೇಕದಿಂದ ತಾಪಗೊಂಡು ಕಣ್ಣು ತೀಕ್ಷ್ಣವಾಗಿ
ಈ ಹೆಸರುಗಳಲ್ಲೆ ನನ್ನ ಹಣೆಯಲ್ಲಿ ಮೂಡಿ
ಲಂಗರಿನ ಕಡಲ ಹಡಗು

ನಾನು ಬರೆಯುವ ಕಾರಣವೇನೆಂದರೆ ಪುರೋಹಿತ
ಪಟಪಟನೆ ಒದರುವ ಮಂತ್ರ ಬೀಜಾಕ್ಷರಗಳಂತೆ ಈ
ನನ್ನ ಮಾತುಗಳು ಪುಟಪುಟಗಳಲ್ಲೂ ಬಲವಾಗಿ ಬೇರೂರಿ
ಸೇಬುಮರಕ್ಕೆ ಸುತ್ತಿರುವ ಅಂಟುಬಂದಳಿಕೆಯಂತೆ ನನ್ನ ಸುತ್ತಿ
ಈ ಪದಗಳ ಉಚ್ಚಾರಧಾರೆ ಕಲ್ಲಿನಿಂದಲೆ ಹರಿದು
ಸಂಗ್ರಹಿತ ಹೆಸರು ಪ್ರತಿಮೆಗಳಾಗಿ
ಆ ಪ್ರತಿಮೆಗಳ ಕಾಲ್ಪನಿಕ ಪೊಳ್ಳು ಚಿತ್ರಗಳಾಗಿ
ಈ ಊಹಾ ಚಿತ್ರಗಳೆಲ್ಲ ಸೇರಿ ಜೋಡಣೆಗೊಂಡು
ಮೋಡದ ಮೇಲೆ ಮೋಡಗಳು ಭೂತಗಳ ನಾಗಾಲೋಟ
ಶಿಖರಗಳ ತುದಿಯಲ್ಲಿ ಮೋಡಗಳ
ಮಸುಕು ನೆನಪು, ನನ್ನ ಕಾರುಣ್ಯದ ನೆನಪುಗಳು
ಮಬ್ಬು ಮೋಡ ಅಸ್ಪಷ್ಟ ಆಕಾಶ
ದೊಡ್ಡಮನೆ,
ನೂಲಿನೆಳೆಗಳ ಕಗ್ಗಂಟು, ಕಾಲ

ಖಾಲಿಜಾಗಗಳಲ್ಲಿ ಬೃಹತ್‌ವೃಕ್ಷಗಳು
ಮರದ ಎಲೆಗಳ ನಡುವೆ ಬಿಸಿಲ ಬಲೆ
ಸಣ್ಣ ಚರ್ಚು, ಗೋಪುರದ ಗಂಟೆ
ಗಂಟೆಯ ಮೊಣಕಾಲು ಮುಟ್ಟುವ
ಎರಡು ಲೋಹದ ನಾಲಗೆಗಳು
ಸತ್ತವರನ್ನೂ ಎಚ್ಚರಿಸುತ್ತಿದೆ
ಆ ತೋಪಿನಲ್ಲಿ ಮಿಲಟರಿ ಗಾಡಿ
ಹಸಿರು ಉದ್ದಗಣ್ಣಿನ ಕಬ್ಬಿನ
ಹಾಲು ಚಿಮ್ಮುವುದು
ಕೆಂಪು ಸ್ಟಾಲು, ತಂಪು ತಣ್ಣನೆ ನೆರಳು
ಗಲ್ಲಾಪೆಟ್ಟಿಗೆಯ ಮೇಲೆ
ನಕ್ಷತ್ರಚಿತ್ತಾರ ನೆರಳುಗಳು
ಮರಗಳ ರೇಖಾಚಿತ್ರ ವೈಭವ
ಸವಿಯ ಕವಳೆಹಣ್ಣಿನ ಮದ್ಯ
ಹೊಂಬಣ್ಣ ರಾಶಿ ಸಿಹಿಸಿಹಿ
ವರುಷಗಳು ಉರುಳಿ ಶೂನ್ಯ
ಕಂಬಿಗಳ ಗುಂಡು ಕಿಟಕಿಯ
ಚಕ್ರಗಳು ಚಲಿಸದೆಯೆ ನಿಂತಿವೆ.

ನನ್ನ ನುಡಿಗಳು,
ಆ ಮುರುಕು ಮನೆಯ ಕತೆಯ ಹೇಳುವುದು
ಅದರ ಖಾಲಿ ಕೋಣೆಗಳು
ಭೂತಗಳಿಗಾಶ್ರಯ ನನ್ನ ವಂಶಜರ
ದ್ವೇಷ ತುಂಬಿದ ಆತ್ಮಗಳು
ಅಲೆದಾಡುತ್ತಿವೆ ಆ ಕೋಣೆಗಳಲ್ಲಿ
ಚೇಳು ಹಾವು ಸಂತತಿ ಬೆಳೆದು ಹರಿದಾಡುವುವು
ನಾಯಿಗಳು ನೆಲದಲ್ಲೆ ಹಿಡಿಕೂಳು ತಿಂದಂತೆ
ಹಗೆಯ ವಿಷ ಚೇಳುಗಳು ಚುಚ್ಚಿ ನೋಯಿಸಿತೆನ್ನ
ಸಂಶಯದ ಆತ್ಮಗಳ ತಾಣ
ಆದರೂ ರೊಟ್ಟಿ ಕೊಟ್ಟ ಮನೆ

ಮೂಲೆ ಮೂಲೆಗಳೆಲ್ಲಾ ಹಗೆ, ಶೂನ್ಯ
ನದಿಯ ಹಿನ್ನೆಲೆ, ಏಕಾಂಗಿ ನಾನು
ಪುಟ್ಟ ಬಾಲಕ ಠಕ್ಕು ಹಿರಿಯರು
ಅವರ ಭೀಭತ್ಸ ಬಾಲಿಷ ವರ್ತನೆಗಳು
ದೀರ್ಘಹೆಬ್ಬಾಗಿಲು ದಿಡ್ಡಿಬಾಗಿಲು
ದಾಟುವ ಮಗು, ಛಾಯಾ ಚಿತ್ರಗಳು
ಮಸುಕು ನೆನಪುಗಳ ಕೆದಕುವ ಸತ್ತವರ ಚಿತ್ರಪಟಗಳು
ಮಗುವನ್ನು ಬದುಕಿ ಉಳಿಸುವ
ಕನ್ನಡಿಗಳು, ಅಳಿದ ನೆನಪುಗಳು
ಗಾಳಿಯಾಗಿ ಸುಳಿದಾಡುವ ಪ್ರೇತಾತ್ಮಗಳು.

ಕಾಲ ಅದರ ಪುನರಾವತಾರಗಳು
ವಿಕಟ ವಿರೂಪದ ಮುರುಕು ಪ್ರತಿಬಿಂಬಗಳು
ನನ್ನ ಮನೆಯಲ್ಲಿ ಬದುಕಿರುವವರಿಗಿಂತ, ಸತ್ತವರೆ ಹೆಚ್ಚು
ನನ್ನ ತಾಯಿ ಸಾವಿರ ವರ್ಷದ ಹುಡುಗಿ
ಜಗನ್ಮಾತೆ ಅವಳು ನಾನು ಅನಾಥ
ಅವಳು ತ್ಯಾಗಿ, ವಿಕಟ ಹಾಸ್ಯದ ದಿಟ್ಟೆ ದೂರದೃಷ್ಟಿಯ
ಚುರುಕು ಇಲಿ, ಹೆಣ್ಣುನಾಯಿ, ಇರುವೆ, ತಲೆಚಿಟ್ಟು ಹಿಡಿಸುವ
ಅವಳ ತಪ್ಪು ತಪ್ಪಾಗಿ ಬರೆದ ಪ್ರೇಮ ಪತ್ರಗಳು
ನನ್ನ ತಾಯಿ ಅನ್ನ ತಿನ್ನಿಸುವ ನನ್ನಮ್ಮ

ಮಳೆಯ ಕೆಳಗೆ
ಹಾಗೇ ನಿಂತ ಬೂದಿ ಮರ ನನಗೆ ತಾಳ್ಮೆ ಪಾಠ ಕಲಿಸಿತು
ಬಿರುಗಾಳಿಯ ಎದುರು ನಿಂತು ಹಾಡುವುದ ಕಲಿಸಿತು
ನನ್ನೊಳಗೆ ನಾನೇ ಇಣುಕಿ ನೋಡುವ ಗೋಡೆಯಾಚೆಯೂ ನೋಡುವ
ಕನ್ನೆನಿದ್ರೆಯಲ್ಲೆ ಕನವರಿಸುವಂತೆ, ನನ್ನ ಅತ್ತೆ
ಕಣ್ಣು ಮುಚ್ಚಿ ನೋಡುವುದ ಕಲಿಸಿದಳು
ನನ್ನ ಅಜ್ಜ ಸೋತಾಗಲೂ ನಗುವುದ ಕಲಿಸಿದ
ನೋವಿನಲ್ಲೂ ಹಿಂಸೆಯಲ್ಲೂ ಹಸನ್ಮುಖಿಯಾದ

ಇಂಥವೆಲ್ಲ ಜಗತ್ತಿನಲ್ಲಿ ನಡೆಯುವುದು ಸರ್ವೆ ಸಾಮಾನ್ಯ
ಸತ್ತ ನಿನ್ನಾತ್ಮಕ್ಕೆ ಶಾಂತಿ ಲಭಿಸಲಿ
ವಾಂತಿ, ಬಾಯಾರಿಕೆಗಳ ನಡುವೆ
ಮದ್ಯಪಾನಕ್ಕಂಟಿ ನನ್ನ ತಂದೆ ಹಾಳಾಗಿ ಸತ್ತ
ಬಂದ ಹಾಗೆಯ ಮರಳಿ ಅಗ್ನಿಜ್ವಾಲೆಗೇ ಹೊರಟ
ಒಂದು ಸಂಜೆ ಗುಂಪುನೊಣಗಳು ಧೂಳು
ರೈಲು ಬೋಗಿಗಳ ಚಕ್ರಗಳ ನಡುವಿಂದ
ನಾವು ಆಯ್ದುಕೊಂಡೆವು ಅವನ ಅಂಗಾಂಗಗಳ
ಆತನೊಡನೆ ಏನೊಂದೂ ನುಡಿಯಲಾರದ ನಾನು
ಈಗಲೂ ಕನಸಿನಲಿ ಸಂಧಿಸಿ ಮಾತನಾಡುವೆನು
ಇದು ಸತ್ತ ನಿರ್ಜೀವ ದೇಶ
ಸದಾ ಪರರ ಬಗ್ಗೆಯೆ ಚಿಂತೆ
ಈ ಮನೆಯು ಶಿಥಿಲಗೋಡೆಯಂತೆ ನಾನು ಬೆಳೆದೆ
ನಾನು ತೃಣಸಮಾನ
ವಿಧವೆ ವಸ್ತ್ರವಿಯೋಗ, ಅನಾಮಿಕರ ಪ್ರಲಾಪ

ದಿನಗಳು-

ಸ್ವಚ್ಛಂದ ಮನದಂತೆ ತೆರೆದ ಪುಸ್ತಕದಂತೆ
ಈರ್ಷೆ ಕನ್ನಡಿ, ಬಹುಮುಖಿಯಾಗದೆ ಹಾಗೆಯೆ ಉಳಿದೆ
ಆ ಕನ್ನಡಿಗಳಲ್ಲಿ ಮನುಷ್ಯರೇ ವಸ್ತುಗಳು
ವಸ್ತುಗಳೇ, ಸಂಖ್ಯೆಗಳು ಕೇವಲ ಸಂಖ್ಯೆಗಳು.

ನನ್ನಲ್ಲಿ ಬಲವೂ ಇಲ್ಲ ಗೆಲವೂ ಇಲ್ಲ ಪಾವಿತ್ರ್ಯ ಮೊದಲೇ ಇಲ್ಲ
ಸ್ವರ್ಗವೆಂಬುದು ನನ್ನ ಪಾಲಿಗೆ ಯಾರೊಬ್ಬರೂ ಇರದ
ಆಕಾಶದ ಚೂರು
ವ್ಯಾಮೋಹ ಹುಟ್ಟಿಸುವ ಶೂನ್ಯ ಸೌಂದರ್ಯ
ಸದಾ ಬದಲಾಗುತ್ತ ವಿವಿಧಾಕೃತಿಗಳ ವರ್ಣವೈವಿಧ್ಯ

ಕಾಲದ ಅವರ ದಿವ್ಯದರ್ಶನ
ದೇವನು ಮೋಡಗಳ ಮೂಲಕ ಮಾತಾಡಬಲ್ಲನೇ?
ಅಂಜೂರ ಮರದ ಎಲೆಗಳ ಮೂಲಕವೂ ನುಡಿಯಲಾರ.
ಈ ನನ್ನ ದೇಹ ದೇಹದೊಂದಿಗೆ ಮಾತಾಡಿ
ಅಣುಕ್ಷಣದ ಕಾಲದ ವಿವಿಧಾವತಾರಗಳು
ಮಳೆಯಲ್ಲಿ ತೊಯ್ದು ಮಧ್ಯಾಹ್ನದ ಹೊಳಪು
ನೀರ ಮೂಲೆಗಳಿಂದ ಬೆಳಕು ಮೂಡುತಿದೆ
ಇಬ್ಬನಿಯಲಿ ತೊಯ್ದ ಗಿಡಗಳ ಹೆಣ್ಣಿನ ಚೆಲುವು
ಈ ನನ್ನ ಚರ್ಮ ಮೋಹಿನಿಯಂತೆ ಅಂಟಿದೆ ನನಗೆ
ಕೊನೆಗೂ ಕಾಲ, ನಾನು ಏಕಕಾಲಕ್ಕೆ ಒಂದಾದೆವು
ನನ್ನೊಡನೆ ಕಾಲ ಅದರೊಡನೆ ನಾನು
ಆ ಕಾಲ ಅದರ ಎರಡು ಕಾಲಗಳು
ಎರಡು ಮುಖಗಳ ಕಾಲ ಏಕಮುಖವಾಗಿ
ಕಾಲವಲ್ಲದ ಕಾಲ, ಆ ಕಾಲ
ಎಲ್ಲ ಹೇಗಿದ್ದರೂ ‘ಈಗ’ ಅದು ಯಾವಾಗಲೂ,
ನಾನು ನನ್ನ ಮತ್ತೊಂದು ಮುಖ ಒಂದಾದಂತೆ
ನಾನು ಇಲ್ಲವಾದಂತೆ

ಘಳಿಗೆ ಬಿರಿದ ದಾಳಿಂಬೆ ನಾನು ಸೂರ್ಯನನ್ನು ಕುಡಿದು
ಕಾಲವನು ತಿಂದು
ಬೆಳಗಿನ ಬೆರಳು ಎಲೆಗಳ ತೆಳುರೇಖೆಗಳ ವಿಂಗಡಿಸಿ
ದುಂಬಿಗಳ ಗುಂಜಾರವ ನನ್ನ ನೆತ್ತರಿನಲ್ಲಿ
ಬಿಳುಪಿನ ಪುನರಾಗಮನ
ನಿರ್ಜನ ಸಮುದ್ರತೀರದಲ್ಲಿ ನಾನು ಒಬ್ಬೊಂಟಿ
ಅಲೆಗಳು ಎತ್ತಿ ಎಸೆದತ್ತ ನನ್ನ ಬೀಸಿ ದೂರ
ವಿಶಾಲ ನಡುಹಗಲು ಹಾಳು ಸುರಿಯುತ್ತಿದೆ
ಅಮೂರ್ತ ತಿರುಗಾಟ ನನ್ನೊಂದಿಗೆ ನಾನೇ ಮಾತಾಡುವೆ
ನಾನು ‘ದ್ವಯ’ ಕಾಲವೂ ಸೀಳಿ ಎರಡಾಯಿತು.

ಅಣುಕ್ಷಣದ ಬೆರಗುಗೊಳಿಸುವ ಉತ್ತುಂಗ ಕಾಲ
ಮಾಂಸವೇ ಅಕ್ಷರವಾಗಿ, ಅಕ್ಷರವು ಬೀಳುತ್ತಿದೆ
ನಾನು ಈ ಭೂಮಿಯನ್ನು ಬಿಟ್ಟು ಇರಬಲ್ಲೆ
ಭೂಮಿಯನ್ನು ತಿಳಿಯುವುದು ಎಂದರೆ ಸ್ಥಿತಿಯ ಅರಿವು
ಈ ರಹಸ್ಯವ ಭೇದಿಸಿ ನೋಡಲು
ಎಲ್ಲ ಬರೀ ಶೂನ್ಯ, ಬಯಲು ಒಳಗೇನೂ ಇಲ್ಲ
ಸತ್ತವರೂ ಇಲ್ಲ, ಸಾವೆಂಬುದೆ ಸತ್ಯ ಸಾವು ಜನ್ಮದಾತೆ
ಆದಿಮೂಲ ನಿವಾಸಿಗೆ ಇದರ ಅರಿವಿದೆ ಗ್ರೀಕರು ಇದನ್ನ ದಿವ್ಯವೆಂದರು
ನೀರೇ ಬೆಂಕಿ ಅದರ ಸುರಂಗ ಮೂಲಗಳು
ಅದರಲ್ಲಿ ಅಗ್ನಿಜ್ವಾಲೆಗಳು ನಾವು
ಸಾವೆಂಬುದು ಎಲ್ಲಕ್ಕೂ ಮೂಲ
ಶಬ್ದ, ಕುರುಡನ ಕೈ ಕೋಲೆಂಬ ಸ್ಪರ್ಶೇಂದ್ರಿಯ
ನಾನು ಸಾವನ್ನು ಬರೆಯುವೆ ತಕ್ಷಣವೇ
ಅದರೊಟ್ಟಿಗೇ ನಾನು ಜೀವಿಸುವೆ ಅದರ ಶಬ್ದನೆಲೆ ಗುರುತಿಸುವೆ.

ಗಾಳಿಯನು ತುಂಬಿಟ್ಟ ಗಾಜಿನ ಕ್ಯೂಬುಗಳು
ಈ ಹಾಳೆಯಲ್ಲಿ ತರಂಗವೆಬ್ಬಿಸಿದೆ
ಪ್ರತಿಧ್ವನಿಗಳೊಡನೆ ಸೇರಿ ಲೀನವಾಗುತ್ತ
ಪದಗಳ ಪ್ರಕೃತಿಚಿತ್ರ ನಿರ್ಮಿಸುತ್ತ
ನನ್ನ ಕಣ್ಣುಗಳು ಓದಿದಂತೆಲ್ಲ ಪದಗಳು
ಕಿವಿಯಲ್ಲಿ ಮೊಳಗಿ ಕೇಳಿದಂತೆಲ್ಲ
ಅವು ಅಲ್ಲೆ ಹುಟ್ಟುತ್ತ ಗುಪ್ತ ಲಿಪಿಯಾಗಿ ಬೆಳೆಯುತ್ತ
ಈ ಭೂವಲಯದ ದಿಕ್ಕುದಿಕ್ಕುಗಳಿಗೂ ವ್ಯಾಪಿಸಿ
ಹಳ್ಳಿಗಾಡಿನ ಕೊಳಚೆ ಪ್ರದೇಶದಲ್ಲೂ ಇದು ಹಬ್ಬಿ
ಉಭಯ ಜೀವಿಗಳಂತ ಈ ಭಾಷೆ, ಪದಗಳು
ಒಂದರಿಂದ ಮತ್ತೊಂದರತ್ತ ಸಂಚರಿಸುತ್ತ
ಬೆಂಕಿಯಲಿ ಮಿಂದು ಗಾಳಿಯಲಿ ವಿರಮಿಸಿ
ಮತ್ತೊಂದು ದಿಕ್ಕಲ್ಲಿ ಮತ್ತೆ ಕೇಳಿಸಿದಾಗ
ಅದೇನು ಹೇಳುತ್ತಿದೆ, ಕೇಳಿಸುತ್ತಿಲ್ಲ
ಅವು ಹೇಳುತ್ತಿಲ್ಲ ಮಾತಾಡುತ್ತಿದೆ.

ನಾನು ಒಂದು ಕತೆಯಿಂದ ಮತ್ತೊಂದಕ್ಕೆ ಜಿಗಿವೆ
ಹನ್ನೊಂದು ಅಕ್ಷರಗಳ ಸೇತುವೆಯ ತೂಗಾಟ
ಜೀವಂತ ದೇಹವಿದು ಗಾಳಿಯಲಿ ನೇತಾಡಿ
ಎಲ್ಲ ಜಾಗಗಳಲ್ಲೂ ಇರುವಂತೆ ತೋರಿ
ಬಿಟ್ಟಕಣ್ಣು ಬಿಟ್ಟಂತೆ ನಿದ್ರಿಸುತ್ತಿದೆ
ಹುಲ್ಲಿನ ಮೇಲೆ ಮಲಗಿ ಇಬ್ಬನಿಯಾಗಿ ಎದ್ದು
ತನ್ನನ್ನು ತಾನೇ ಅಟ್ಟಿಸುತ್ತ ಮಾತಾಡಿಕೊಳ್ಳುತ್ತಾ
ಪರ್ವತದ ಸಂದುಗಳ ತೂತುಕೊರೆದಂತೆ
ರಭಸ ಕಡಲಿನ ಒಡಲ ಬಡಬಾಗ್ನಿ
ಯಾರಕಣ್ಣಿಗೂ ಬೀಳದ ಶೋಕ ಸರೋವರ
ಒಂದೇ ಕೈಯಲ್ಲಿ ಎರಡು ಸಾಗರಗಳು
ಬೀದಿಯುದ್ದಕ್ಕೂ ನಡೆದು ಕಾಣದಾಗುತ್ತ
ಅಸ್ಪಷ್ಟ ಅಕ್ಷರಗಳು ಅರ್ಥಕ್ಕಾಗಿ ತಡಕಾಡಿ
ಗಾಳಿಯಲ್ಲೇ ಲೀನ, ಗಾಳಿಯಾಗಿ
ನಾನು ನಿಮಗೆ ಈ ವಿಷಯ ಏಕೆ ಹೇಳುತ್ತೇನೆ?
ಏಕೆಂದರೆ ಮಧ್ಯಾಹ್ನದ ವೇಳೆ
ಗಾಳಿಯಲ್ಲಿ ಭೂತ ಸಂಚರಿಸುತ್ತೆ
ಸೂರ್ಯ ಹಾರಾಡುತ್ತಾನೆ ಹೊಸ ರೆಕ್ಕೆ ಬಿಚ್ಚಿ
ಹಗುರವಾದ ಬಣ್ಣದ ಚಿಟ್ಟೆಯಾಗುತ್ತಿದೆ.

ಇರುಳು ಕವಿದಂತೆಲ್ಲ ಉಪ್ಪರಿಗೆ ಮೇಲೆ
ಚಂದ್ರ ಮೌನ ಸಾಮ್ರಾಜ್ಯ ಆಳುತ್ತಾನೆ
ಸಾವಿನ ಒಡೆಯ ಆತ್ಮದ ಸುದ್ದಿವಾಹಕ
ಆಕರ್ಷಕ ಚಾಲಾ ಗುಲಾಬಿ ಹೂವು
ವಿದ್ಯುತ್ ದೀಪ ತೂಗಾಡುತ್ತಿದೆ
ಅದರ ಬೆಳಕಿಗೆ ಹೊಳೆವ ತಲೆ
ಆ ಹೆಂಗಸು ಚೀರುತ್ತಾಳೆ
ಅದನ್ನು ಹಿಡಿದು ಕೊಲ್ಲು ಅದನ್ನು
ಮಾಟಗಾತಿಯಂತೆ ಸುಟ್ಟಳು

ದೀರ್ಘನಿಟ್ಟುಸಿರಿಟ್ಟು ಮುಂದೆ ಸಾಗಿದರು
ಚೆಲ್ಲಾಪಿಲ್ಲಿ ಬಿದ್ದಬೆಳಕು-ಮನೋ ಇಂಗಿತ..

ಅಲ್ಲಿ ಸುದ್ದಿ ತರುವವರಿದ್ದಾರೆಯೆ? ಹೌದು
ಗಾಳಿ, ಶೂನ್ಯಗಾಳಿಯು ಸನ್ನೆಗಳ ಕಳುಹಿಸಲು
ಅದರ ಮಾಯದ ಒಲೆಯ ಪ್ರಶ್ನೋತ್ತರಗಳು ನೂರಾರು
ವಸ್ತು ವಿಷಯಕ, ಮೃಗಗಳೂ ಕೂಡಿ ಭಾಷೆ ಮಾಡಿದವು
ಜಗತ್ತಿನೊಡನೆ ಮಾತನಾಡಿದರು ಜಗತ್ತು ಮಾತಾಡಿತು
ನಾವು ಅದರ ಒಂದು ಅಂಶ ಮಾತ್ರ.
ಮಾತುಗಳು ನಮ್ಮ ಎಲ್ಲ ಮಾತುಗಳು
ಸಂವಾದಗಳಾಗಿ ಒಂದರೊಡನೊಂದು ಬೆಸೆದು
ಅರ್ಥಹೀನ ಅಖಂಡ ವಾಗ್ವಾದಗಳಾಗಿ
ಮೊದಲಿಟ್ಟಲ್ಲಿಗೇ ಮತ್ತೆ ಮತ್ತೆ ಬಂದು ತಲುಪುವುವು
ನಾನೇನು ಹೇಳಿದೆ, ಅವೂ ಅದನ್ನೇ ಹೇಳುತ್ತವೆ
ಅವು ತನ್ನೊಂದಿಗೇ ಹೀಗೆ ಹೇಳಿಕೊಂಡಿತು ಹುಚ್ಚುಮಾತುಗಳೇ
ಒಂದರ ವಿರುದ್ಧ ಮತ್ತೊಂದು ನಿಂತ ದ್ವಂದ್ವಗಳೇ!

ಮಧ್ಯಾಹ್ನದ ಬೆಚ್ಚಗಿನ ಗಿಡದಪ್ಪುಗೆ ಸುರತ
ಕ್ಷಣದಲ್ಲೇ ಉತ್ತುಂಗಕ್ಕೇರಿ ಕೆಳಗೆ ವಾಲಿತ್ತು
ನಾನು ಸಾವನ್ನು ಕಂಡುಹಿಡಿದೆನು ಆಗ
ಆ ಸಾವೂ ಅದರೊಂದಿಗಿನ ಭಾಷೆಯನ್ನೂ ಸಹ
ಇಡೀ ಜಗತ್ತು ತನ್ನಲ್ಲೇ ಮಾತಾಡಿಕೊಳ್ಳಲು
ಜನರು ಜನರೊಂದಿಗೆ ಕೂಡಿ ಮಾತಾಡಲು
ಅದೇ ಇತಿಹಾಸವಾಯಿತು. ಗುಲಿರಿಮೋ ಆಲ್‌ಫನ್‌ಸೊ,
ಎಮಿಲಿಯೋ;
ಶೂನ್ಯವಾವಾರಿಸಿದ್ದಲ್ಲಿ ಇತಿಹಾಸ ಆದಿ
ಇತಿಹಾಸ, ಸಾವು ಒಂದರೊಡನೊಂದು ಒಡನಾಡಿ

ಮೋಡಗಳ ಧೂಳಿ ಗುಡುಗಾಟ ಉರುಳಾಟ
ಬಡಬಡಿಕೆ ಅಸ್ಪಷ್ಟ ಶಬ್ದಗಳು, ಮಾತಲ್ಲಿ
ಅರ್ಥವಿಲ್ಲ ಗುರಿಯಿಲ್ಲದ ಕೊಡುಕೊಳ್ಳುವಿಕೆ
ಕಾಲಸ್ವರೂಪ ಬದಲಾದಂತೆ ಕ್ರಾಂತಿಗಳು ತಲೆದೋರಿ
ಒಬ್ಬರೊಡನೊಬ್ಬರು ಕೆಣಕುತ್ತಾರೆ ಸೆಣಸಾಡಿ
ಅವರೆಲ್ಲ ಮೂಢತೆಯಿಂದ ತಮ್ಮಲ್ಲೇ ಬಂಡೆದ್ದು
ತಮ್ಮ ಮೂಲ ಪ್ರವೃತ್ತಿಯತ್ತ ಮತ್ತೆ ಮರಳುತ್ತಾರೆ
ತಮ್ಮ ಪಾಪಕ್ಕೆ ತಕ್ಕ ದಂಡ ತೆರಲೇಬೇಕು (ಅನಾಕ್ಸಿಮ್ಯಾಂಡರ್)
ಈ ಅನ್ಯಾಯದಿಂದಾಗಿ ನರಳಿ ಸಾಯುತ್ತಾರೆ
ತಮ್ಮ ಬಗ್ಗೆ ಹಾಗೂ ಬೇರೆಯವರೊಂದಿಗೂ ಕುಪಿತರಾಗುತ್ತಾರೆ
ಅತಿಆಸೆ ಹೆಬ್ಬಯಕೆ ಮತ್ತೂ ಬೇಕೆಂಬಾಸೆ
ಕಾಲವೇ ಇವರ ಕೊನೆಗಾಣಿಸಿ ಶಿಕ್ಷಿಸುವುದು
ಇದು ನ್ಯಾಯತೀರ್ಮಾನದ ನೆಲೆಯು ಹೌದು
ಹೆಪ್ಪುಗಟ್ಟಿದ ರಕ್ತ ನೋಡಿದಿರೇನು
ವರೋನಿಕಾ ಬಟ್ಟೆಯಲ್ಲಿ ಹೆಪ್ಪುಗಟ್ಟಿದ ರಕ್ತ
ಮತ್ತೊಬ್ಬರ ಮುಖದಲ್ಲೂ, ಸದಾ ಬೇರೆಯವರೇ
ಅಪರಾಧಿಗಳು ನಮಗೆ
ಇತಿಹಾಸದ ಸುರಂಗಮಾರ್ಗಗಳು ವಿಶಾಲ ಹಜಾರಗಳು
ನಾವು ಎಂಬುದು ಒಂದು ಮಾತ್ರವೇ ಸತ್ಯವೇ?
ಸಾವಿನಿಂದ ಹೊರಬರುವುದೆಂದರೆ ಅದರೊಳ ಪ್ರವೇಶಿಸುವುದು
ಇತಿಹಾಸದಿಂದಾಗಿ ಭಾಷೆ ಪರಿಶುದ್ಧವಾಗಿ
ಟಿಸಿಲುಗಳಾಗಿ ಒಡೆದು ವಿವಿಧ ನಾಮಗಳಾಗಿ
ನಾನು ಮಾತ್ರವಲ್ಲ ನನಗಿಂತಲೂ ಇನ್ನು ಮಿಗಿಲೇನನ್ನೂ ಸೂಚಿಸಿ
ನಾನಿಲ್ಲದಿದ್ದರೂ ಇದ್ದಂತೆ ತೋರಿಸಿ

ಮೂರನೆಯ ಮತ್ತೊಂದು ಅವಸ್ಥೆ
ಇದ್ದರೂ ಇದ್ದಂತಿಲ್ಲ ಶೂನ್ಯದಲ್ಲೂ ಸಂಪೂರ್ಣತೆ
ಗಂಟೆಗಳೇ ಅಲ್ಲದ ಗಂಟೆಗಳು ಮತ್ತೊಂದೇ ನಾಮಧರಿಸಿ
ಬಂದು ಹೋಗುತ್ತವೆ. ಮತ್ತೆ ಮತ್ತೆ

ಭಾಷೆಯೊಡನೆ ಮೇಳೈಸಿ ಕಲೆತು ಹೋಗುವುದು
ಅದರ ಇಲ್ಲದಿರುವಿಕೆ ಬರಬಹುದೆಂಬ ನಿರೀಕ್ಷೆ
ಅದು ಹೆಸರಿಡಿದು ಕರೆಯುವುದು 'ಇಲ್ಲ ಏನೂ ಇಲ್ಲ'
ಎರಡು ತುದಿಗಳ ಪದ, ಪದದ ನಡುವಿನ ಬಿರುಕು
ಅದರ ನೆಲೆಯೆ ಗಾಳಿ
ಬೆಂಕಿ ಇಟ್ಟಿಗೆಯ ನೀರಗೋಡೆಗಳಲ್ಲಿ
ಕಟ್ಟುತ್ತಾ, ಕೆಡಹುತ್ತ ಅಂತೆಯೇ ಉಳಿಯುತ್ತಾ
ಮೊದಲಿನಿಂದಲೂ ಹೀಗೆಯೇ ಇರುವ ಇದು ದೈವ
ಹೆಸರಲ್ಲದ ಹೆಸರಿನಲ್ಲೇ ತಳವೂರಿ
ಅಂಜೂರದ ಮರದೊಂದಿಗೆ ಸಲ್ಲಾಪದ ಸೊಲ್ಲೆತ್ತಿ
ಮಾತಿನ ನಡುವೆ ಮೌನವಾವರಿಸಿ
ನನ್ನ ಕಣ್ಣುರೆಪ್ಪೆಗಳ ಎದುರು ನಿಂತಿವೆ
ಅದ್ಭುತ ಚಿತ್ರಗಳ ಜಾದೂ ಪ್ರದರ್ಶನ
ನಿಯಮಬದ್ಧತೆ ನಡುವೆ ಕ್ರಮತಪ್ಪಿದ ನಡತೆ
ಜಾಗ್ರತಾವಸ್ಥೆಯ ತಳೆದ ಉಸುಕು ನೆಲ ಕೆಸರು
ಸಂಶಯಾಸ್ಪದ ತೋಟದ ಸುತ್ತ ನೆನಪುಗಳ ಹುತ್ತ
ಅದರ ಎಡರುತೊಡರಾದ ಮಾರ್ಗವ್ಯೂಹ
ಇದು ಪಾವಿತ್ರ್ಯತೆಯ ಕಳೆದುಕೊಂಡ ತೋಟ
ವಿವಿಧರೂಪಗಳ ತಾಳಿ ವಿರೂಪವಾಗಿದೆ.

ನಿರಾಕಾರ ಸ್ವರೂಪನೇ
ನನ್ನ ಇಂದ್ರಿಯಗಳು ನಿನಗೆ ಕೊಟ್ಟ ಹೆಸರಿದು
ಈ ಹೆಸರು ನನ್ನ ದೇಹಭಾಷೆಯಿಂದ ಮೂಡಿ ಬಂದದ್ದು
ನಾನು ನಿನ್ನ ಸೂರ್ಯನೆಂದು ಕರೆಯಬೇಕೆಂದಿದ್ದೆ
ತಿರುಗು ಮುರುಗು ಆಗದ ಪದ.
ನಿನ್ನ ಹೆಸರಿನ ದಾಳಗಳ ಉರುಳಿಸಿ ಮತ್ತೆ ಬೇಸತ್ತೆ
ಚದುರಿ ಚೆಲ್ಲಾಡಿದ ಒಣ ಬೀಜಗಳು
ಕಾಲದ ಕೇಂದ್ರ, ಬಿಂದುವಿನಲ್ಲಿ ಕಾಲವೇ ಉಳಿದಿಲ್ಲ
ಚಲನಶೀಲತೆಯು ಕೇಂದ್ರವನು ಹಿಡಿದಿಡಲು
ಕೇಂದ್ರವೇ ಅಳಿಸಿಹೋಗುತ್ತಿದೆ ಕಾಲದ ಕ್ರಾಂತಿಗಳಿಂದ

ಮಧ್ಯಾಹ್ನ

ಶೂನ್ಯಕ್ಕಾವರಿಸಿದ್ದು ಮರಗಳಲ್ಲಿ ಹಸಿರು ಜ್ವಾಲೆ
ಆವರಿಸಿ ಕಿಡಿಸೂಸಿ ಆರಿದ ಬೆಂಕಿ ಉಂಡೆಗಳು
ಹುಲ್ಲಿನ ನಡುವೆ ಅಡಗಿಸುವ ಕ್ರೂರ ಕ್ರಿಮಿಕೀಟಗಳು
ಹಳದಿ ನೆರಳುಗಳ ತೋಟದಲ್ಲಿ
ಪರಿಶುದ್ಧ ಹೆಜ್ಜೆಗಳು ಮಾಗಿಯ ಗಾಜು ಹೆಜ್ಜೆಗಳು
ಆಕಸ್ಮಿಕ ಮುಖಾಮುಖಿಯಾದ ಬಿಂಬ ಪ್ರತಿಬಿಂಬ
ಕ್ಷಣಿಕ ಬಾಳಿನ ಹಕ್ಕಿ
ರಾಶಿ ಎಲೆಗಳ ನಡುವಿನಕ್ಷರಗಳು
ನನ್ನ ಬರಹದಲ್ಲಿ ಮೂಡುವ ಸೂರ್ಯ ನೆರಳು ನುಂಗುತ್ತಾನೆ
ಗೋಡೆಗಳ ನಡುವೆ, ಕಲ್ಲಿನ ಗೋಡೆಗಳಲ್ಲಿ
ನೆನಪೆಂಬ ಗೋಡೆಗಳು
ಮೇಲೇಳುತ್ತಾ ಎದ್ದು ತೋಟವಾಯಿತು
ಮರದ ಬೊಡ್ಡೆಯ ಮೇಲೆ ಬೆಳಕ ಪ್ರತಿಬಿಂಬ
ಗಾಳಿಯ ಉಸಿರಾಟದ ಏರಿಳಿತ
ನಿರಾಕಾರಿ ಆ ದೇವ ಹೆಸರಿಲ್ಲದ ದೇವ
ನಾವು ಅವನಿಗಿಟ್ಟ ಹೆಸರೆಲ್ಲ ಬರೆ ಖಾಲಿ ಖಾಲಿ
ಕಾಲನೆಂಬ ದೇವ, ದೇವನೆಂಬ ಕಾಲ
ರೆಂಬೆಕೊಂಬೆಗಳ ನಡುವೆ ಸಂಚರಿಸುತ್ತಾನೆ
ನಾನು ಅದನ್ನು ಕುರಿತು ಬರೆಯುವೆ, ಚದುರಿದ ಮೋಡಗಳು
ಆಕಾಶದ ಅಸ್ಪಷ್ಟ ಕನ್ನಡಿಗಳು;
ಅದರಲ್ಲಿ ಮೂಡಿದ ಮುರುಕು ಪ್ರತಿಬಿಂಬಗಳು
ಈ ಆತ್ಮವೆಂಬುದು ಈಗಾಗಲೇ ಶೂನ್ಯ ಪರಿಶುದ್ಧ ಸ್ಥಳ
ಚಲನೆಯೊಡನೆ ಸೇರಿ ಲೀನವಾಗುವುದು
ಸೂರ್ಯನಿಗೆ ವೇಗದಿಂದ ಚಲಿಸುವ ಬಯಕೆ, ಕಾಲವೆಂಬ
ಹೂವಿನೊಳದಳದ ಸಾರಹೀರುವ ಬಯಕೆ
ಸೀರಗಿಡಗಳ ಮೇಲೆ ಬೆಂಕಿ ಉರಿಜ್ವಾಲೆಯ
ಪದಗಳು ಹೀಗೆ ಹೇಳುತ್ತಿವೆ
ಹೂವು ಎಂಬುದು ಮತ್ತೊಂದು ಸೂರ್ಯ

ಹರಕುಮುರುಕು ಅಕ್ಷರ ಹೆಸರುಗಳು
ನಾವು ಹೆಸರುಗಳನ್ನು ಹಿಂಡಿ ಹಿಪ್ಪೆ ಮಾಡಿದ್ದೇವೆ
ಹೆಸರುಗಳನ್ನು ಚೆಲ್ಲಾಪಿಲ್ಲಿ ಮಾಡಿ
ಆ ಹೆಸರುಗಳ ಹೆಸರಿಗೇ ಮಸಿ ಬಳಿದಿದ್ದೇವೆ
ನಾನಿನ್ನೂ ಹೆಸರನ್ನು ಹುಡುಕುತ್ತಲೇ ಇರುವೆ
ಭಾಷೆಯ ಗುಜುಗುಜು ಸದ್ದನ್ನು ಆಲಿಸುವೆ
ಬಂಡೆ ನಡುವೆ ಹರಿವ ನದಿಗಳ ನಾದ
ಬಣ್ಣದ ಬೋಟುಗಳ ಕಾಲಸಂಚಾರ

ಪಿರಿಮಿಡ್ಡಿನ ಮೂಳೆಗಳು, ಪದಗಳ ಗುರಿಯಿಲ್ಲದ ಅಲೆದಾಟ
ನಮ್ಮ ಒಡೆಯರ ಮಾತು ಸಿಡಿಲು ರಕ್ತದಾಹ
ನಾನು ಪದಗಳನ್ನು ಕಟ್ಟುವಾಗ ಅದರ
ಅಲುಗಾಡುವ ಪ್ರತಿಬಿಂಬಗಳ ನೆರಳುಗಳು
ಓಡಾಡುವ ಗೋಪುರಗಳ ಗಾಳಿ ಮಂದಿರಗಳು
ಕಾಲ ಅದರ ಹೊಂದಾಣಿಕೆಗಳು
ವರ್ಷಗಳು, ಸಾವು, ಅಕ್ಷರಗಳು
ಇವು ಬೇರೆ ಕಾರಣಗಳಿಂದ ಒಂದಾಗಿ ಸೇರಿ
ಪ್ರತಿಬಿಂಬಗಳ ಸುತ್ತುವಿಕೆ, ಪದ್ಯ
ಗಾಳಿಗೋಪುರಗಳ ಕಟ್ಟುತ್ತಾ ಕಳಚುತ್ತಾ
ರಹಸ್ಯಾರ್ಥಗಳ ಅಂತರಾಳದಲ್ಲಿ ನಿಜನಾಮ ಅಳಿದು
ಕೆಲವುಸಲ ಈ ಹಾಳೆಗಳೂ ಓಲಾಡುವುವು
ಅದರ ನಿರಂತರ ನಿಟ್ಟುಸಿರು ಹಾದಿಯಿಲ್ಲದ ಹಾದಿ ಹಿಡಿದ
ಸ್ವಚ್ಛಂದ ಶಬ್ದಗಳು ಸೂಕ್ಷ್ಮ ಸಂವೇದನೆಯ
ಆಯಸ್ಕಾಂತವು ತಿರುಗುತ್ತ
ಕೊಂಡಿಗಳ ಕಳಚಿ ಮತ್ತೆ ಕಚ್ಚಿಕೊಳ್ಳುತ್ತಾ

ನಾನು ಎಲ್ಲಿದ್ದೆನೋ ಅಲ್ಲಿಯೇ ಇದ್ದೇನೆ.

ಅಸ್ಪಷ್ಟ ಧ್ವನಿಗಳನ್ನು ಹಿಂಬಾಲಿಸಿ ನಡೆವೆ
ಹೆಜ್ಜೆ ಸಪ್ಪಳ ನನ್ನೊಳಗೆ ನನ್ನ ಕಣ್ಣೊಳಗೆ

ನನ್ನ ಮನದೊಳಗೆ ನಾನು ನನ್ನ ಹೆಜ್ಜೆ ಸದ್ದು
ನಾನು ಯೋಚಿಸುವ ಧ್ವನಿಗಳನ್ನು ಕೇಳುತ್ತಿರುವೆ
ಆ ಧ್ವನಿಗಳೂ ನನ್ನಂತೆಯೇ ಯೋಚಿಸುತ್ತಿವೆ
ನಾನು ಒಂದು ನೆರಳು, ನನ್ನ ನುಡಿ ನಾನು ಎಸೆದ ದಾಳ.

ನದಿ

ಉದ್ವಿಗ್ನಗೊಂಡ ನಗರ, ನನ್ನ ನೆತ್ತರ ಧಮನಿಗಳಲ್ಲಿ, ಉದ್ರಿಕ್ತ ದುಂಬಿ ಯಂತೆ, ವಿಸ್ತಾರಬಯಲುಗಳ ದೀರ್ಘಮೌನದ ಶೋಕ, ಟ್ರಾಮುಗಳ ಗದ್ದಲ ದೂರದ ಮೂಲೆಮೂಲೆಗಳಲ್ಲಿ, ಮರಗಳು ಅಪಮಾನದ ಭಾರಕ್ಕೆ ತಲೆ ಬಾಗಿರಲು, ಮಧ್ಯರಾತ್ರಿಯನ್ನು ಯಾರೋ ಕಲುಕಿದಂತೆ ದೊಡ್ಡ ಗಲಭೆ ಶಬ್ದ ಕ್ರಮೇಣ ಕಡಿಮೆಯಾಗುತ್ತಾ ಆಗುತ್ತಾ ಕಿವಿಯಲ್ಲಿ ಏನೋ ರಹಸ್ಯದ ಪಿಸು ಮಾತಿನಂತಾಗಿ,

ಕತ್ತಲೆಯು ಕಳಚಿದಂತೆಲ್ಲ ಏ ಓ ಎಂಬ ಸ್ವರಗಳು ಯಾವುದೋ ಸುರಂಗ ಮಾರ್ಗದಲ್ಲಿ ಸಿಕ್ಕು ನುಡಿಯಲಾರದೆ ಮೌನ,

ಕುರುಡನಂತೆ ತಡವರಿಸುತ್ತ ಅತ್ತಿತ್ತಾ ಗ್ಯಾಲರಿಗಳಲೆಲ್ಲಾ ತಡಕಾಡು ತ್ತಿರಲು, ಅರೆಪ್ರಜ್ಞಾವಸ್ಥೆಯ ಅಕ್ಷರಗಳು ಕೆಳಗೆ ಧುಮುಕುತ್ತಿವೆ. ಇಂಕಿನ ಜಲ ಪಾತದಂತೆ; ನಗರವು ಚಲಿಸುತ್ತ ಅದರ ಬಂಡೆಗಲ್ಲಿನ ದೇಹ ಕುಲುಕಿ ಅಲ್ಲಾ ಡಿಸುತ್ತ ನನ್ನ ದೇಹದೇಗುಲದತ್ತ ಧಾವಿಸಿದೆ.

ಇಡೀ ರಾತ್ರಿ ಒಂದರ ಹಿಂದೊಂದು ಪ್ರತಿಮೆಗಳು, ಚಿಲುಮೆಯ ಹಿಂದೆ ಚಿಲುಮೆ ಕಲ್ಲಿನ ಹಿಂದೆ ಕಲ್ಲುಗಳ ದೀರ್ಘರಾತ್ರಿ

ಅದರ ಚೂರುಗಳು ನನ್ನ ಮೆದುಳಿನಲ್ಲೇ ನಿಂತಾಗ ನಗರವು ನಿದ್ರೆ ಯಲ್ಲೇ ಮಾತನಾಡುತ್ತಿದೆ ನನ್ನ ಬಾಯಮೂಲಕ

ಉಸಿರುಕಟ್ಟುತ್ತ ಸಂವಾದಕ್ಕಿಳಿದಿದೆ ನೀರು, ಅದರ ತೊದಲು ಮಾತು ಗಳು, ಕಲ್ಲಿನ ಬಿರುಸು ಮಾತುಗಳು ಅದರದರ ಕತೆಯ ಸಾರುತ್ತಿವೆ.

ಈ ಒಂದು ಕ್ಷಣವನ್ನು ಸ್ತಬ್ಧಗೊಳಿಸಲು, ತಡೆಹಡಿದು ನಿಲ್ಲಿಸಲು ರಕ್ತವು ವೇಗದಿಂದ ಹರಿಯುತ್ತಿದೆ ಮೌನವಾಗಿ ಹರಿಯುತ್ತಿದೆ.

ಕಾಲನನ್ನು ತಡೆದು ನಿಲ್ಲಿಸಲು ನದಿಯ ತೀರದ ಆಲದಮರದ ನೆರಳ ತಡಿಯಲ್ಲಿ ಕುಳಿತ ಯೋಗಿ ಬುದ್ಧನಂತೆ

ಒಂದೇ ಒಂದು ಅಣುಕ್ಷಣವು ಕಾಲನ ತುದಿಯಲ್ಲಿ ಕುಳಿತು ನದಿಯ ನನ್ನ ಇರವನ್ನು ಮತ್ತೊಂದೆಡೆಗೆ ಕೊಂಡೊಯ್ಯಲು

ನದಿಯನ್ನು ತಡೆಯಲು ದಡದಲ್ಲೇ ಕುಳಿತು ನೋಡುತ್ತಿರಲು ಸ್ವಚ್ಛಂದ ಕ್ಷಣವು ನೀರಿನ ಕೇಂದ್ರಬಿಂದುವಿನಲ್ಲೇ ನೆಲಸಿ ಅಚ್ಚರಿ ಹುಟ್ಟಿಸಿತು

ಕಾರಂಜಿ ನೀರೆಲ್ಲವನ್ನು ಮೊಗೆದು ಕುಡಿದು ನೀಲ ಅಕ್ಷರಗಳ ಧಾರೆ ಬಂಡೆಗಲ್ಲುಗಳ ತುಟಿಯ ತುದಿಯಿಂದ ಧುಮುಕುತ್ತಿದೆ.

ರಾತ್ರಿಯ ಕೊನೆಯಜಾವ, ಬುದ್ಧನಂತೆ ಮೌನವಾಗಿ ಕುಳಿತಿದೆ ಮುಚ್ಚಿಟ್ಟ ಕ್ಷಣಗಳ ಪಳಚ್ಚನೆ ಹೊಳೆವ ಕಾಲ

ಪ್ರಳಯಾಗ್ನಿಯು ಕಾಲವನ್ನು ನಾಶಮಾಡಲು ಅದೇ ಕಾಲವು ಪುನಃ ಹುಟ್ಟಿ ರಾತ್ರಿ ಕೊನೆಯಲ್ಲಿ ತನ್ನ ಕೊನೆ ಉಸಿರಾಟದ ಏರಿಳಿತದ ಸದ್ದು

ನದಿಯು ಹೇಳಿದ್ದನ್ನೇ ಹೇಳು ದೀರ್ಘಪದಗಳು ತುಟಿಗಳನ್ನು ಹೋಲುತ್ತಿವೆ ಎಂದೆಂದಿಗೂ ಮುಗಿಯದ ಶಬ್ದಗಳು

ಕಾಲನು ಹೇಳಿದ್ದನ್ನೇ ಕಠಿಣ ಮಾತುಗಳಿಂದ ಕಲ್ಲು ಹೇಳುತ್ತಿದೆ. ಸಮುದ್ರದ ಭಾವಭಂಗಿಯು ಇಡೀ ಜಗತ್ತನ್ನೇ ಆವರಿಸಿದೆ

ಈ ಪದ್ಯದ ನಡುವೆ ಅಸಹಾಯಕತೆ ತಲೆದೋರಿ, ಎಲ್ಲಾ ಅಸ್ತವ್ಯಸ್ತ ವೆನಿಸುತ್ತಿದೆ.

ಯಾರೂ ನನ್ನ ಪಕ್ಕದಲ್ಲಿ ಇಲ್ಲದಿದ್ದರೂ ಬರೆಯುವಾಗ ನನ್ನ ಹಿಂದೆ ಸದಾ ನಿಟ್ಟಿಸಿ ನೋಡುವ ಎರಡು ಕಣ್ಣುಗಳ ಇರಿವನೋಟವೂ ಇಲ್ಲಿಲ್ಲ

ನನ್ನ ಹಿಂದಾಗಲಿ ಮುಂದಾಗಲಿ ಯಾರೂ ಇಲ್ಲ. ಈ ಲೇಖನಿಯ ಯುದ್ಧ ಕೊನೆಮೊದಲಿಲ್ಲದ ಬರಹ ಜಿಗಿದು ಓಡಲು ಗೋಡೆಯೂ ಇಲ್ಲ

ಕಾವ್ಯ ಎಂಬುದು ಏಕಾಂತವಾದ ಬಯಲಿನಂತೆ ಏನು ಹೇಳಿದರೂ ಹೇಳಿದಂತಲ್ಲ ಹೇಳಲಾರದ್ದು ಹೇಳುವ ಸ್ಥಿತಿಯ ಮೀರಿದ್ದು

ಬ್ಯಾಬಿಲೋನಿಯದ ಗೋಳಗುಮ್ಮಟಗಳ ತುತ್ತತುದಿ ಭಗ್ನಗೊಂಡ ಸ್ಥಿತಿಯ ಕುರುಡು ಸಾಮ್ರಾಜ್ಯ

ಇಲ್ಲ

ನನ್ನನ್ನು ನಾನೇ ಶಾಂತಗೊಳಿಸಿಕೊಳ್ಳಲು ಕಣ್ಣುಮುಚ್ಚಿ ಮೌನ ಧರಿಸುವೆನು. ನನ್ನ ಮುಚ್ಚಿದ ಕಣ್ಣುಗಳ ಮುಂದೆ ಹಸಿರು ಜಿಗಿಯುವುದು ಕಣ್ಣರೆಪ್ಪೆ ಒಳಗೆ ಸೂರ್ಯ ಬೆಳಕಿನ ಚಿಲುಮೆ ಅಕ್ಷರಗಳ ವಿಸ್ತಾರ ಅಲೆಗಳ ಹೊಯ್ದಾಟ ಕಾಣ್ಕೆಗಳ ಬೀಸು ನೋಟ ಉರುಳುರುಳಿ ಒಂದೇ ಅಲೆಯಂತಾಗಿ ತೀರವನ್ನೂ ಅಪ್ಪಳಿಸಿ

ಕಾವ್ಯ ನಕ್ಷತ್ರಗಳು ಈ ಹಾಳೆಯಲ್ಲಿ ಮೂಡಿಬರಲು ಕಾಯಬೇಕು ಅಕ್ಷರಗಳ ಕಗ್ಗಾಡಿನಲ್ಲಿ ಸಿಕ್ಕು ತಡಕಾಡಬೇಕು.

ಇಲ್ಲ

ಉಳಿದಿಲ್ಲ, ಇನ್ನೇನೂ ಹೇಳಲು ಉಳಿದಿಲ್ಲ, ಯಾರೂ ಇಲ್ಲ ರಕ್ತಚಲನೆ ಮಾತ್ರ ಈ ರಕ್ತಚಲನೆಯ ಹೊರತು ಇನ್ನೇನೂ ಉಳಿದಿಲ್ಲ ಬರದದ್ದನ್ನೇ ಮತ್ತೆ ಮತ್ತೆ ಬರೆದು ಅದೇ ಪುನರಾವರ್ತನೆ ಮತ್ತೆ ಮತ್ತೆ

ಕಾಲನೆಂಬ ಅಕ್ಷರಗಳು, ಮುರುಕು ಅಕ್ಷರಗಳು, ಇಂಕಿನ ಮುದ್ದೆ ಈ ರಕ್ತಚಲನೆ ನನ್ನ ಎತ್ತಲೋ ಸೆಳೆಯುತ್ತಿದೆ.

ನಾನು ತಲೆಬಾಗಿ ಈ ಬಿಳಿಹಾಳೆಯೊಂದಿಗೆ ಆಡುವೆನು ಮಾತು ನನ್ನ ಪಕ್ಕದಲ್ಲಿ ಯಾರೋ ಬರೆಯುವದು ನನ್ನ ರಕ್ತಚಲನೆ ವೇಗ ಹೆಚ್ಚಿರಲು

ಈ ನಗರವೂ ಅಷ್ಟೆ, ಅದರ ರಕ್ತಚಲನೆಗೆ ತಕ್ಕಂತೆ ಏನೋ ಹೇಳಬಯಸುವುದು ಕಾಲ ರಾತ್ರಿಗಳೂ ಏನೋ ಹೇಳಬಯಸುವುದು

ಇಡೀ ದೀರ್ಘರಾತ್ರಿ ಮನುಷ್ಯನು ಏನೋ ಒಂದು ಮಾತು ಹೇಳಬಯಸುವನು ಆತನು ಹೇಳುವಷ್ಟರಲ್ಲೇ ಕಲ್ಲಿನಕೋಟೆಯಲ್ಲಿ ಬಂದಿಯಾಗುವನು

ನಾನು ಕೇಳಲೇಬೇಕು ಆ ಮನುಷ್ಯನು ಏನು ಹೇಳುವನೆಂಬುದ ನಾನು ಕೇಳಲೇಬೇಕು ಚಲಿಸಿ ಗುರಿಯಿಲ್ಲದೆ ಮರುನುಡಿವ ಈ ನಗರದ ಮಾತು ನಾನು ಕೇಳಲೇಬೇಕು

ಇಡೀ ರಾತ್ರಿ ಒಡೆದ ಬಂಡೆಗಳ ಯುದ್ಧ ನನ್ನ ತಲೆಯೊಳಗೆ ನೀರಿಗೂ ಬಂಡೆಗೂ ನಡೆವ ಸತತ ಯುದ್ಧ

ರಾತ್ರಿಗೂ ಅಕ್ಷರಗಳಿಗೂ, ರಾತ್ರಿ ರಾತ್ರಿಗೂ ನಡೆದ ಘರ್ಷಣೆ ಏನೊಂದೂ ಹೊಳೆಯದೆ ಮಂಕು ಕವಿದು ರಾತ್ರಿ ಬೆಳಕುಗಳ ಯುದ್ಧ

ಆದರ ವಿದ್ಯುದಾಲಿಂಗನದ ಹೊಳಪನ್ನು ಕಲ್ಲು ಬಿಂಬಿಸಿ ಕಗ್ಗತ್ತಲಲ್ಲೂ ಒಂದು ಕಿಡಿಯ ಸೂಸಿ ಮತ್ತೆ ವಿರಾಮ ಪಡೆಯಲಿ

ಸಾವಿನೊಡನೆ ಸೆಣಸಾಟ, ದೇವತೆಗಳನ್ನು ಬೇಡುವೆನು ಈ ರಕ್ತದ ಹಾಗೂ ಇಂಕಿನ ನದಿಯನ್ನು ಹೇಗೆ ತಡೆಯುವುದು,

ಈ ಪದಧಾರೆ ನಿಲ್ಲಿಸಿ ಇದರ ಪ್ರವಾಹವನ್ನು ಹಿಂದಕ್ಕಟ್ಟಿದ್ದಾಗ ಹೊಳೆ ಹೊಳುವ ಬಂಗಾರದ ತುಂಬಬಟ್ಟಲು ಹರಿಯುತ್ತಿದೆ

ಆ ಸಲಿಲವು ತನ್ನ ಹೃದಯವನ್ನೇ ಬಗೆದು ತೋರುತ್ತಿರಲು ಅಸಂಖ್ಯಾತ ಕನ್ನಡಿಗಳು ಆ ನೀರಲ್ಲೇ ಮೂಡಿ ಮುಳುಗಿ, ಗಾಜಿನ ಮರ ವೊಂದು ಗಾಳಿಗೆ ಚದುರಿ ಬುಡಮೇಲಾಗುತ್ತಿದೆ.

ಕೋರೈಸುವ ಕ್ರೂರ ಬೆಳಕಿಗೆ ಎಲೆಎಲೆಯೂ ಮಿಂಚುತ್ತಾ ಕವಿಯ ಶಬ್ದ ಪ್ರತಿಮೆಗಳು ಮಾಯವಾದಂತೆ ಮಾಯವಾಗುತ್ತಿದೆ.

ಕಾಲವೆಂಬುದರ ದಪ್ಪ ಚರ್ಮವು ಬೆಳೆದು ಗಾಯವು ಮಾಗಿ ಮಚ್ಚೆ ಯಾದಂತೆ ಈ ಜಗತ್ತಿನ ಗಾಯವನ್ನು ಸೂಕ್ಷ್ಮವಾದ ಒಂದು ಗೆರೆ ಬೆಳೆದು ಮುಚ್ಚಲಿ ಈ ಶಬ್ದಗಳೆಂಬ ಬಾಹುಗಳು ಚಾಚಿ ಕಾವ್ಯ ಒಂದೇ ಧಾರೆಯ ನೇಯ್ಗೆ ನೇಯ್ದು ಅದರ ಕ್ರೂರ ಕಿರಣಗಳ ರೇಖೆ ದಿಕ್ಕು ದಿಕ್ಕಿಗೂ ಹಬ್ಬಲಿ

ಅದರ ಆತ್ಮವು ಬೆಂಕಿಗೆ ಬಿದ್ದ ಹುಲ್ಲು ಕರಕಾಗುವಂತೆ ಆಗಲಿ ಅಮಾವಾಸ್ಯೆ ಚಂದ್ರನ ಎದೆಕಡಲು ಏನೊಂದನ್ನೂ ಪ್ರತಿಬಿಂಬಿಸದೆ ಇರಲಿ

ಓರೆಕೋರೆಯ ಜಾಗಬಿಟ್ಟು, ವಿಸ್ತಾರ ಶೂನ್ಯಗಳು ಒಂದರ ಮೇಲೊಂದು ಒರಗಿ ತನ್ನ ಬೀಸು ರೆಕ್ಕೆಗಳನ್ನು ಬಿಚ್ಚಲಿ

ಬೆಂಕಿಯ ಜ್ವಾಲೆಗಳು ಎಲ್ಲೆಡೆಯೂ ವ್ಯಾಪಿಸಿ ಹರಳುಗಟ್ಟಿದ ಕಲ್ಲಾಗಿ ಪಾರದರ್ಶಕ ಬಟ್ಟಲುಗಳಂತಾಗಲಿ

ಹೊಳೆವ ಕಠಿಣಕಲ್ಲುಗಳು ಹರಳುಗಟ್ಟಿ ಬಿಳುಪಾಗಿ ಶಾಂತ ಶುಭ್ರವಾಗಲಿ

ನದಿಯ ಪ್ರವಾಹ ಹಿಂದಕ್ಕೆ ಸರಿದು ಮತ್ತೆ ತನ್ನ ಪ್ರತಿಬಿಂಬಗಳ ತನ್ನಲ್ಲೇ ಅಡಗಿಸಿಕೊಳ್ಳುತ್ತಾ ರಿಂಗಣಗುಣಿದು ಸುರಳಿ ಸುತ್ತುತ್ತಾ ಸಾಗುತ್ತಿರಲಿ

ರಾಬರ್ಟ್ ಫ್ರಾಸ್ಟ್ ಕವಿಯ ಭೆಟ್ಟಿ

ಮಧ್ಯಾಹ್ನ ಮೂರುಗಂಟೆಯ ಸಮಯ. ಹೆದ್ದಾರಿಯಲ್ಲಿ ಇಪ್ಪತ್ತು ನಿಮಿಷಗಳ ನಡಿಗೆಯ ನಂತರ ಒಂದು ರಸ್ತೆ ತಿರುವನ್ನು ಬಂದು ಮುಟ್ಟಿದೆ. ಬಲಕ್ಕೆ ತಿರುಗಿ ಇಳಿಜಾರನ್ನು ಹತ್ತಿದೆ. ಅಲ್ಲಲ್ಲಿ ಮರಗಳ ನೆರಳಿನಿಂದ ತಂಪೆನಿಸುತ್ತಿತ್ತು. ಅಲ್ಲೆ ಸಣ್ಣ ಝರಿಯೊಂದು ಹರಿಯುತ್ತಿತ್ತು. ನಡೆದಂತೆಲ್ಲಾ ನನ್ನ ಪಾದದಡಿ ಮಣ್ಣು ಕುಸಿಯುತ್ತಿತ್ತು. ಸೂರ್ಯ ಎಲ್ಲೆಲ್ಲೂ ವಿಜೃಂಭಿಸಿದ್ದ. ಗಾಳಿಯಲ್ಲಿ ಹಸಿರ ಸುವಾಸನೆ. ಜತೆಗೆ ಬಿಸಿಲು ಬಾಯಾರಿಕೆ. ಮರ ಮರದ ಎಲೆ ನೀಲ ಬಾನಿನ ಹಿನ್ನೆಲೆಯ ಬೆಳ್ಳಿ ತುಂಡು ಮೋಡಗಳು ಅಲೆಯಿಲ್ಲದ ಸಮುದ್ರದಂತೆ ಕಾಣುವ ಆಕಾಶ ಇವೆಲ್ಲಾ ಸ್ಥಿರಚಿತ್ರದಂತಿದ್ದವು. ಒಂಟಿಹಕ್ಕಿಯೊಂದು ಹಾಡಿತು.

ಈ ನೀರಿನ ಜುಳುಜುಳು ನಾದ ಕಾವ್ಯಕ್ಕಿಂತಲೂ ಸವಿ ಮತ್ತು ಹತ್ತು ನಿಮಿಷಗಳ ಕಾಲ ನಡೆಯುತ್ತಲೇ ಇದ್ದೆ. ಅಲ್ಲೊಂದು ತೋಟದ ಒಂಟಿ ಮನೆ. ಹೊಂಬಣ್ಣದ ಕೂದಲಿನ ಮಕ್ಕಳು ಮರದಡಿಯಲ್ಲಿ ಆಡುತ್ತಿದ್ದರು. ನಾನು "ಮನೆಯ ಯಜಮಾನರು ಇದ್ದಾರೆಯೇ?" ಎಂದು ಕೇಳಿದೆ, ಆಟದಲ್ಲೇ ತನ್ಮಯರಾದ ಆ ಮಕ್ಕಳು ಆಟ ನಿಲ್ಲಿಸದೆ 'ಮಹಡಿಯ ಮೇಲಿದ್ದಾರೆ' ಎಂದು ಹೇಳಿ ಎದುರು ಕಾಣುವ ಬೆಟ್ಟದ ತುದಿಯನ್ನು ತೋರಿಸಿದರು. ಆ ಬೆಟ್ಟದ ತುದಿಯಲ್ಲೊಂದು ಮನೆ. ನಾನು ಹತ್ತುತ್ತಾ ಆ ಬೆಟ್ಟದ ತುತ್ತತುದಿಗೆ ಬಂದಾಗ ಅಚ್ಚರಿ ಎನಿಸುವಂಥ ನಿಸರ್ಗ ಸೌಂದರ್ಯ. ಕಣಿವೆ, ನೀಲ ಪರ್ವತಗಳು ನೀರ ಝರಿಗಳು ಕೆಳಗೆ ಸಮತಟ್ಟಾದ ಹಸಿರ ನೆಲ ಗಿಡಮರಗಳು ತಂಗಾಳಿಗೆ ತೂಗಾಡುತ್ತಿತ್ತು. ಹರ್ಷಹಜ್ಜಿ ಎಲೆಗಳೆಲ್ಲಾ ಹಾಡುತ್ತಿವೆ. ನಾನು ಆ ಮನೆ ಮಹಡಿ ಹತ್ತಿ ಕವಿಯ ಕೋಣೆಯನ್ನು ಹೊಕ್ಕೆ. ಅದೊಂದು ಮರದಿಂದಲೇ ನಿರ್ಮಿಸಿದ್ದ ಚಿಕ್ಕ ಕೋಣೆ. ಪೈಂಟು ಬಣ್ಣ ಮಾಸಿದೆ. ಕಿಟಕಿಗೆ ಪರದೆಗಳು ಇಲ್ಲ. ಈಸಿ ಚೇರಿನ ಮೇಲೆ ಒಬ್ಬ ಮುದುಕ ಕುಳಿತಿದ್ದ. ಅವನ ಪಕ್ಕದಲ್ಲೇ ಮೈತುಂಬಾ ಕೂದಲಿನ ಜೂಲುನಾಯಿ ಕುಳಿತಿದೆ. ನನ್ನ ಕಂಡ ಆ ಮುದುಕ ಒಳ ಬರಲು ಹೇಳಿದ. ನನ್ನ ಕಂಡು ನಾಯಿ ಸಂತೋಷದಿಂದ ಜಿಗಿದಾಡ ತೊಡಗಿತು. ಆ ಕೋಣೆಯಲ್ಲಿ ಬಣ್ಣ ಮಾಸಿದ ಎರಡು ಕುರ್ಚಿಗಳು ಒಂದು ಬೆಂಚು ಒಂದು

' ಹೌದು ಬೇಕು ನಾನು ಸುಮಾರು ಅರ್ಧಗಂಟೆ ನಡೆದು ಸುಸ್ತಾಗಿದೆ''.

ನಾವು ನಿಧಾನವಾಗಿ ಬಿಯರ್ ಹೀರುತ್ತಾ, ಆ ಕವಿಯತ್ತ ಪರಿಕಿಸುವ ದೃಷ್ಟಿ ಬೀರಿದೆ. ಅವನ ಬಿಳಿಯ ಷರ್ಟು, ನೀಲಗಣ್ಣು ಮುಗ್ಧತುಂಟತನ ಸೂಸುತ್ತಿತ್ತು. ಅವನ ಆಧ್ಯಾತ್ಮಿಕ ತಲೆ ರೈತನ ಕೈಗಳು ಆತ ನನಗೆ ಪುರಾತನ ಋಷಿಯಂತೆ ಕಂಡ. ಜನದಟ್ಟಣೆಯಿಂದ ದೂರ ಏಕಾಂತಸ್ಥಳದಲ್ಲಿ ಅವನು ವಾಸಿಸುತ್ತಿದ್ದರೂ ಅವನು ಧರ್ಮ ನಂಬುವವನಲ್ಲ. ಅವನು ಕುಳಿತಿರುವುದು ಮರಳುಗಾಡಲ್ಲಾಗಲಿ ಕೋಡುಗಲ್ಲಾಗಲಿ ಅಲ್ಲ. ಅವನೂ ಎಲ್ಲರಂತೆ ತನ್ನ ಊಟ ತಾನು ದೊರಕಿಸಿಕೊಳ್ಳುತ್ತಿದ್ದವನು. ನಾನು ನೋಡಿದ ಸ್ಥಳ ಬಹಳ ರಮಣೀಯವಾಗಿತ್ತು. ನೈಜ ಪ್ರಕೃತಿ ಸೌಂದರ್ಯ. ಆದರೆ ಮೆಕ್ಸಿಕೋ ಪರಿಸರಕ್ಕಿಂತಲೂ ಭಿನ್ನ. ಇಂಥ ಸ್ಥಳದಲ್ಲಿ ಅಡ್ಡಾಡಲು ಎಂಥ ಚೆನ್ನ!

''ನನ್ನ ಹೆಣ್ಣುಮಕ್ಕಳ ನಿಮ್ಮ ದೇಶದ ಪ್ರಕೃತಿ ಸೌಂದರ್ಯ ಬಹಳ ನಾಟಕೀಯ ಎನ್ನುತ್ತಾರೆ'' ಎಂದೆ.

''ಪ್ರಕೃತಿ ಸೌಂದರ್ಯದೆದುರು ನಾವು ದುರ್ಬಲರು. ಇಂಥ ಪ್ರಕೃತಿಯ ಮಧ್ಯೆ ನಾವು ಆ ಕ್ಯಾಕ್ಟಸಿನಂತಾಗಬಾರದು. ನಿಸರ್ಗಪ್ರಿಯರು ಇಲ್ಲಿ ಕಲ್ಲಿನಂತೆ ತನ್ಮಯರಾಗಿ ಕುಳಿತು ಪ್ರಕೃತಿ ಸೌಂದರ್ಯದಲ್ಲೇ ತಲ್ಲೀನರಾಗಿರುತ್ತಾರೆ. ಹೀಗೆ ಕಲ್ಲಿನಂತೆ ಕುಳಿತ ಇವರು ಕ್ರಮೇಣ ಕಲ್ಲಾಗಿ ಪರಿವರ್ತಿಸುತ್ತಾರೋ ಆಗ ಈ ಮರಗಿಡ ಪಶುಪಕ್ಷಿಪ್ರಾಣಿಗಳು ಎಲ್ಲ ಎಲ್ಲವೂ ಹಾಡುತ್ತಿರುತ್ತದೆ. ನಮಗೆ ಅದು ಕೃತಕವೆಂದು ತಿಳಿಯುವುದೇ ಇಲ್ಲ.

ನನಗೆ ಹದಿನೈದು ವರ್ಷವಾದಾಗ ನಾನೊಂದು ಕವನ ಬರೆದೆ. ಅದೇ ನನ್ನ ಮೊದಲ ಕವನ. ಯಾವುದರ ಬಗ್ಗೆ ಎಂದರೆ :

'ನಾನು ಪ್ರಿಸ್ಕಾಟ್ ಎಂಬ ಲೇಖಕನ ಕೃತಿಗಳನ್ನು ಓದುತ್ತಿದ್ದೆ. ಆದ್ದರಿಂದಲೇ ನಿಮ್ಮ ದೇಶದ ಬಗ್ಗೆ ಯೋಚಿಸುವಂತಾಯಿತು. ನೀವು ಪ್ರಿಸ್ಕಾಟ್ ಓದಿರುವಿರಾ?''

''ನನ್ನ ಅಜ್ಜನ ಅತ್ಯಂತ ಪ್ರಿಯವಾದ ಪುಸ್ತಕವೇ ಪ್ರಿಸ್ಕಾಟ್. ಚಿಕ್ಕ ವಯಸ್ಸಿನಲ್ಲೇ ಆತನ ಎಲ್ಲಾ ಕೃತಿಗಳನ್ನು ಓದಿ ಮುಗಿಸಿದ್ದರೂ ಈಗ ಮತ್ತೊಮ್ಮೆ ಓದಬೇಕೆನಿಸುತ್ತಿದೆ. ಓದಿದ ಪುಸ್ತಕ ಮತ್ತೊಮ್ಮೆ ಓದುವವರನ್ನು, ಜಾಸ್ತಿ ಪುಸ್ತಕಗಳನ್ನು ಓದುವವರನ್ನು ಕಂಡರೆ ನನಗೆ ಇಷ್ಟ. ನಾವು ಒಳ್ಳೆಯ ಪುಸ್ತಕಗಳನ್ನು ಆಗಾಗ ಓದುತ್ತಿರಬೇಕು.

''ಬಹಳ ಶೀಘ್ರವಾಗಿ ಓದುವುದನ್ನು ಕಲಿಸುತ್ತೇವೆ ಎಂದು ಕೆಲವು ಗೆಳೆಯರು ಹೇಳುತ್ತಾರೆ. ಆ ಮಾದರಿಯನ್ನು ಅವರು ಶಾಲೆಗಳಲ್ಲೂ ಅಳವಡಿಸುತ್ತಾರಂತೆ''.

''ಅವರಿಗೆ ಹುಚ್ಚು. ನಾವು ವಿದ್ಯಾರ್ಥಿಗಳಿಗೆ ನಿಧಾನವಾಗಿ ಓದುವುದನ್ನು ಕಲಿಸಬೇಕೆ ವಿನ ಈ ರೀತಿ ಅವರ ಮನಸ್ಸಿನ ಮೇಲೆ ಮಾನಸಿಕ ಒತ್ತಡ ಹೇರಬಾರದು. ಅವರು ಏಕೆ ಹೀಗೆ ಶೀಘ್ರವಾಗಿ ಓದಲು ಹೇಳಿಕೊಡುತ್ತಾರೆ ಗೊತ್ತೆ? ಅವರಿಗೆ ತಮ್ಮಲ್ಲೇ ನಂಬುಗೆ ಇರುವುದಿಲ್ಲ. ಪ್ರದೇಶಗಳನ್ನು ಬಿಟ್ಟು ನಗರಗಳಿಗೆ ಬಂದು ನೆಲಸುತ್ತಾರೆ. ಅವರು ಪಲಾಯನವಾದಿಗಳು. ತಮ್ಮ ನೆರಳಿಗೆ ತಾವೇ ಹೆದರುವವರು ಆಗಿರುತ್ತಾರೆ.''

'ಹೌದು, ಆದರೆ ಈ ಪ್ರಪಂಚ ಅತಿಭೀತಿಯನ್ನೂ ಅನಾಥಪ್ರಜ್ಞೆಯನ್ನೂ ಮೂಡಿಸುವಂಥದ್ದು. ಯಾರು ಬಲಿಷ್ಠರು ಅಧಿಕಾರ ಸ್ಥಾನದಲ್ಲಿರುವವರೂ ಅಂಥವರು ಇಂಥ ಹೆದರಿದ ಜನರನ್ನು ಶೋಷಿಸುತ್ತಾರೆ. ಒಂಟಿಬಾಳು ಅಪಾಯ. ಎಲ್ಲರೂ ಒಟ್ಟಾಗಿ ಸಹಬಾಳ್ವೆ ಮಾಡುವುದರಿಂದ ಅವರಿಗೆ ಬಾಳಿನಲ್ಲೂ ಸಾವಿನಲ್ಲೂ ಸುಖವಿದೆ-ಭೀತಿಯೇ ಇಂಥ ಮನುಷ್ಯರನ್ನು ಕಂಡು ಹಿಡಿಯಿತು. ಭೀತಿ ಎಲ್ಲರಲ್ಲೂ ಮನೆ ಮಾಡಿದೆ. ಬಲಿಷ್ಠರ ವಿರುದ್ಧ ಕೈ ಎತ್ತಲು ಎಲ್ಲರೂ ಹೆದರುತ್ತಾರೆ. ಆದರೆ ಬಲಿಷ್ಠರಿಗೂ ಭೀತಿ ಇದೆ. ಆದ್ದರಿಂದಲೇ ಅವರೂ ಯಾವುದಾದರೂ ಅಧಿಕಾರ ಪ್ರತಿಷ್ಠೆಗಳಿಗೆ ಅಂಟಿಕೊಂಡೇ ಇರುತ್ತಾರೆ.

ಇಲ್ಲಿ ಜನರು ಅಸಂಖ್ಯಾತ ಸಂಖ್ಯೆಯಲ್ಲಿ ಕಾರ್ಖಾನೆಗಳಲ್ಲಿ ದುಡಿಯುತ್ತಾರೆ. ಅವರು ದಣಿದು ಕೆಲಸದಿಂದ ವಾಪಸ್ಸು ಬರುವಾಗ ಈ ದೇಶದ ಬಗ್ಗೆ ಅವರಿಗೆ ಜಿಗುಪ್ಸೆ ಎನಿಸುತ್ತದೆ. ಕಾರಣ ಬಡತನ ಕಷ್ಟಕರ ದುಡಿಮೆ. ಇವು ಮನುಷ್ಯನನ್ನು ಏಕಾಂಗಿತನದಲ್ಲಿ ಕೆಡವಿ ಆತನು ತನ್ನ ಎಲ್ಲ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಾನೆ. ಒಬ್ಬ ಗೆಳೆಯನಂತೆ ಸಿನಿಮಾಕ್ಕೆ ಬಾರ್‌ಗೆ ಹೋಗಲೂ ಹೆದರುತ್ತಾನೆ.

''ಹೌದು ನೀವು ಹೇಳಿದ್ದು ನಿಜ. ಸ್ವಾತಂತ್ರ್ಯದ ಅನುಭವವೇ ಮಹತ್ತರವಾದುದು. ಅದು ಕಾವ್ಯದಂತೆ, ಜೀವನವೇ ಒಂದು ಕಾವ್ಯ. ಒಬ್ಬ ಕವಿ ಕವನ ಬರೆಯಲು ಆರಂಭಿಸಿದರೆ ಏನೋ ಹೊಸತನ್ನು ಕಂಡು ಹಿಡಿದಂತೆ. ಮೊದಲನೆಯ ಸಾಲು ಬರೆದ ನಂತರ ಮುಂದೇನೋ ಹೊಳೆಯದು. ಅನಿಶ್ಚಿತ ಎರಡನೆಯ ಸಾಲು. ಮುಂದೆ ಪದ್ಯವೇ ನಮಗಾಗಿ ಕಾಯುತ್ತದೆ. ಅಥವಾ ಸೋಲುತ್ತದೆ. ಇಂಥ ಕವಿಯ ಒಂದು ಅನಿಶ್ಚಿತ ಮನೋವೃತ್ತಿಯ ಅಪಾಯದೆಡೆಯಲ್ಲೂ ಸಾಹಸಪ್ರವೃತ್ತಿ ತಲೆ ಎತ್ತಿ ಕೆಲಸ ಮಾಡುತ್ತದೆ. ಕವಿಯು ಕಣ್ಣು ಮುಚ್ಚಿ ತನ್ನ ಪ್ರವೃತ್ತಿಯೇ ಕೆಲಸ ಪೂರೈಸುತ್ತದೆಂದು ನೆಚ್ಚಲು ಸಾಧ್ಯವಿಲ್ಲ. ಕಾವ್ಯಪ್ರವೃತ್ತಿಗೆ ಜಾಗೃತ ಸ್ಥಿತಿ ಚಿಂತನಶೀಲತೆ ಆವೇಗ ಮುಖ್ಯ. ಪ್ರತಿಯೊಂದು ಸಾಲು ಅಥವ ಪ್ರತಿ ಕವನವೂ ರೂಪುಗೊಳ್ಳುವ ಸಂದರ್ಭದಲ್ಲಿ ಸೋಲಬಹುದು. ಜೀವನವೂ ಹಾಗೆಯೇ, ಪ್ರತಿಕ್ಷಣ ಸೋಲು ಆಯ್ಕೆಗಳಿಂದ ಕೂಡಿದ್ದು.

''ನಿಜ, ಕಾವ್ಯ ಎಂದರೆ ಅನುಭವ ಸ್ವಾತಂತ್ರ್ಯದ ಒಂದು ಅಭಿವ್ಯಕ್ತಿ ಹಾಗೂ ಸಾಹಸಪ್ರವೃತ್ತಿ. ಬರೆದು ಮುಗಿಸಿದ ಕವನ ಹಾಗೇ ಸ್ಥಿರವಾಗಿ ಉಳಿಯುತ್ತದೆ. ಈಗಿನ ಜನರು ಬಹಳ ಬೇಜವಾಬ್ದಾರಿಗಳಾಗಿದ್ದಾರೆ. ತಮ್ಮ ಹಿಂದಿನ ಪರಂಪರೆಯ ಕವಿಗಳ ಒಳ್ಳೆಯ ಕಾವ್ಯ ಸ್ಮರಿಸುತ್ತಲೂ ಇಲ್ಲ. ಅವರನ್ನು ಅನುಕರಿಸಲು ಇಚ್ಛಿಸುವುದಿಲ್ಲ.''

''ನಿಮಗೆ ಪರಂಪರೆಯಲ್ಲಿ ನಂಬಿಕ ಉಂಟೆ?''

''ಖಂಡಿತ. ಪ್ರತಿಯೊಬ್ಬ ಕವಿಯೂ ತನ್ನದೇ ಆದ ಸ್ವಾತಂತ್ರ್ಯದ ಧ್ವನಿಯನ್ನು ತನ್ನ ಕೃತಿಗಳಲ್ಲಿ ಮೂಡಿಸಲು ಯತ್ನಿಸುತ್ತಾನೆ. ಹೀಗೆ ಸ್ವಂತಿಕೆ

ಸ್ಥಾಪಿಸಲು ಆತ ತನ್ನ ಪೂರ್ವಜರ ಕೃತಕ ಉತ್ಪ್ರೇಕ್ಷೆ ಭಾಷೆಗಳಿಂದ ಕೂಡಿದ ಶೈಲಿಯನ್ನು ತಿರಸ್ಕರಿಸಬೇಕಾಗುತ್ತದೆ.

ನಾನು ಬರೆಯಲು ಆರಂಭಿಸಿದಾಗ ನನ್ನ ಪೂರ್ವಕವಿಗಳ ಕಾವ್ಯ ಉಪಯೋಗಕ್ಕೆ ಬರದಿದ್ದರೂ ನಾನು ಅವರಿಂದ ಭಾಷೆಯನ್ನು ಬಳಸಲು ಕಲಿತೆ. ನನ್ನದೇ ಆದ ಸ್ವಂತ ಭಾಷಾಶೈಲಿಯನ್ನು ರೂಢಿಸಿಕೊಳ್ಳಲು ಅವರ ಕಾವ್ಯ ಪೂರಕವಾಯಿತು. ನನ್ನ ಭಾಷೆ ನನ್ನ ಸುತ್ತಮುತ್ತಲಿನ ಪರಿಸರದ ಜನರಾಡುವ ಭಾಷೆ. ನನ್ನ ಬಾಲ್ಯ ಯೌವನದ ಭಾಷೆ. ಇದನ್ನು ರೂಢಿಸಿಕೊಳ್ಳಲು ನಾನು ಬಹಳ ಕಾಲ ಕಾಯಬೇಕಾಯಿತು.

ದಿನಂಪ್ರತಿ ನಾವು ಭಾಷೆಯ ಪದಗಳನ್ನು ನಮಗೆ ಬೇಕಾದಂತೆ ಬಳಸುತ್ತಿರುತ್ತೇವೆ. ಒಂದೊಂದು-ಪದಕ್ಕೂ ಆ ಪರಿಸರ ಆ ಕ್ಷಣಕ್ಕೆ ತಕ್ಕಂತ ಅರ್ಥವಿರುತ್ತದೆ. ಫ್ರೆಂಚ್‌ಕವಿಯು ಭಾಷೆಯ ಬಳಕೆಯ ಬಗ್ಗೆ ಹೇಳುತ್ತಾ 'ಕಾವ್ಯದಲ್ಲಿ ಪ್ರತಿಮೆಗಳು ಹುಟ್ಟಿಕೊಳ್ಳುವುದಿಲ್ಲ. ಕವಿಯು ಕಾಣ್ಕೆಗಳಿಂದ ಮೂಡಿಬರುತ್ತವೆ. ಅದನ್ನು ಓದುಗರೂ ಕಂಡುಹಿಡಿಯಲೇಬೇಕಾಗುತ್ತದೆ. ಶಬ್ದಗಳಿಗೆ ತಮ್ಮದೇ ಆದ ಅರ್ಥದ ಹೊಳಹುಗಳು ಇರುತ್ತವೆ'. ನಾನು ಬರೆಯಲು ಆರಂಭಿಸಿದಾಗ ಅಮೆರಿಕನ್ ಕಾವ್ಯದ ಸಂದರ್ಭದಲ್ಲೂ ಹೀಗೆ ಆಗಿತ್ತು. ಅತಿಯಾದ ವಾಗ್ವೈಭವ, ಉತ್ಪ್ರೇಕ್ಷೆಗಳ ವಿರುದ್ಧ ನಾವು ಹೋರಾಡಬೇಕಾಗಿದೆ. ಜಗತ್ತು ಪರಿಭ್ರಮಣ ಹೊಂದುತ್ತಿರುವ ಕಾಲ ಇದು. ನಿನ್ನೆ ಇದ್ದಂತೆ ಈಗಿಲ್ಲ. ನಾವು ಈ ಬಗ್ಗೆ ಸ್ವಲ್ಪ ತಮಾಷೆಯಿಂದ ನೋಡಬೇಕು. ಎಲ್ಲ ವಿಚಾರಗಳನ್ನೂ ಅತಿ ಗಂಭೀರವಾಗಿ ನೋಡುವ ಅಗತ್ಯವಿಲ್ಲ. ಕೆಲವೊಮ್ಮೆ ನಮ್ಮ ಬಗ್ಗೆ ನಾವೇ ತಮಾಷೆ ಅಪಹಾಸ್ಯ ಮಾಡಿಕೊಳ್ಳುವುದು ಒಳ್ಳೆಯದು. ನಗಲು ಗೊತ್ತಿರದ ಮನುಷ್ಯನನ್ನು ಎಂದೂ ನಂಬಬಾರದು. ಹೀಗೆ ಹೇಳಿದ ಫ್ರಾಸ್ಟ್ ಜೋರಾಗಿ ನಗಲು ಆರಂಭಿಸಿದ. ನಾವು ಬೆಟ್ಟವನ್ನು ಇಳಿಯಲು ಪ್ರಾರಂಭಿಸಿದೆವು. ನಾಯಿ ನಮಗಿಂತ ಮುಂದೆ ಚಿಮ್ಮಿ ಓಡುತ್ತಿತ್ತು. ಆಗ ಆತ ತನ್ನ ಮಾತು ಮುಂದುವರಿಸುತ್ತಾ ಹೀಗೆ ಹೇಳಿದ 'ತಮ್ಮ ಬಗ್ಗೆ ತಾವೇ ತಮಾಷೆ ಮಾಡಿಕೊಂಡು ನಗದೆ ಇರುವವರನ್ನು ಯಾರೂ ನಂಬುವುದಿಲ್ಲ. ಅತಿ ಮೇಧಾವಂತ ಕವಿಗಳು, ಹಾಸ್ಯ ಪ್ರಜ್ಞೆ ಇಲ್ಲದ ಪ್ರಾಧ್ಯಾಪಕರು, ಪ್ರವಾದಿಗಳು ಇವರಿಗೆ ಗಟ್ಟಿಯಾಗಿ ಅರಚಲು ಗೊತ್ತಿದೆಯೇ ಹೊರತು ಬೇರೆ ವಿವೇಕವೇನೂ ಇರುವುದಿಲ್ಲ ಇವರು ಅತ್ಯಂತ ಅಪಾಯಕಾರಿ ಮನುಷ್ಯರು''.

''ನೀವು ಪ್ರಸ್ತುತ, ಅಂದರೆ ಇಂದಿನ ಯುವ ಕವಿಗಳ ಕಾವ್ಯ ಓದುವಿರಾ?''

''ಹೌದು, ನನಗೆ ಯುವಕವಿಗಳ ಒಳ್ಳೆ ಕಾವ್ಯ ಬಹಳ ಪ್ರಿಯ. ಜತೆಗೆ ನಾನು ಕೆಲವು ತತ್ತ್ವಜ್ಞಾನಿಗಳ ಕೃತಿಗಳನ್ನೂ ಓದುತ್ತಿರುತ್ತೇನೆ. ಆದರೆ ನನಗೆ ಕಾದಂಬರಿ ಓದಲು ವ್ಯವಧಾನವಿಲ್ಲ. ಹೀಗೆ ಮಾತನಾಡುತ್ತಾ ನಾವು 'ಫಾರ್ಮ್‌ಹೌಸ್' ಬಂದು ಮುಟ್ಟಿದೆವು. ಮಕ್ಕಳೆಲ್ಲಾ ನಮ್ಮ ಸುತ್ತ ಬಂದು ಸೇರಿದರು. ಆಗ ಕವಿ ಫ್ರಾಸ್ಟ್ ತನ್ನ ಬಾಲ್ಯದ ದಿನಗಳನ್ನು ನೆನೆಯುತ್ತಾ ತಾವು ಸಾನ್‌ಫ್ರಾನ್ಸಿಸ್ಕೋದಲ್ಲಿ ಕಳೆದ ದಿನಗಳನ್ನು ಕುರಿತು ಹೇಳಿ ಅನಂತರ ಇಂಗ್ಲೆಂಡಿಗೆ ಬಂದು ನೆಲಸಿದ ವಿಷಯವನ್ನು ತಿಳಿಸಿದರು. 'ಇದೇ ನನ್ನ ದೇಶ, ಇಲ್ಲೇ ನನ್ನ ಮೂಲದ ಬೇರುಗಳು ಇರುವುದು'.

ವರ್ಮಂಟ್ ದೇಶ ಮೆಕ್ಸಿಕೋ ದೇಶದ ವಿರುದ್ಧ ಯುದ್ಧ ಘೋಷಿಸಲು ನಿರಾಕರಿಸಿದ್ದು ನಿಮಗೆ ಗೊತ್ತೆ? ನಮ್ಮತನ ಎಂಬುದನ್ನು ನಾವು ಕಾಯ್ದಿಟ್ಟುಕೊಳ್ಳಬೇಕೆಂದರೆ ಇಂಥ ಏಕಾಂತವಾದ ಪ್ರಕೃತಿಯ ಮಧ್ಯೆ ವಾಸಿಸ ಬೇಕು. ಆಗಲೇ ನನಗೆ ಪ್ರಿಯ. ಆಗ ನಾನು 'ಹೀಗಿರುವುದು ನನಗೆ ಸ್ವಲ್ಪ ಕಷ್ಟ. ಏಕೆಂದರೆ ನೀವು ಶ್ರೀಮಂತರು.' ಕೆಲವು ವರ್ಷಗಳ ಹಿಂದೆ ನಾನು ಏಕಾಂತವನ್ನು ಬಯಸಿ ಕೊಸ್ಟಾರಿಕಾ ಎಂಬ ಸಣ್ಣ ದೇಶವನ್ನು ಆರಿಸಿಕೊಂಡು ಅಲ್ಲಿರಲು ನಿಶ್ಚಯಿಸಿದೆ. ಅಲ್ಲಿಯೂ ಅಮೆರಿಕನ್ನರ ಗಲಾಟೆ ಎಂದು ತಿಳಿದು ಅಲ್ಲಿಗೆ ಹೋಗಲಿಲ್ಲ' ಇಂಗ್ಲೆಂಡನ್ನು ಆರಿಸಿಕೊಂಡೆ.

ನಾವಿಬ್ಬರೂ ಒಂದು ತಿರುವಿಗೆ ಬಂದು ಮುಟ್ಟಿದೆವು. ನಾನು ಗಡಿಯಾರ ನೋಡಿಕೊಂಡೆ. ಎರಡು ಗಂಟೆಗಳಿಗೂ ಮೀರಿ ನಾವು ಹೀಗೆ ಮಾತನಾಡುತ್ತಿದ್ದೆವು. ಫಾಸ್ಟ್ ''ನಾನು ಹೊರಡುತ್ತೇನೆ, ನನಗಾಗಿ ಅವರು ಊಟಕ್ಕೆ ಕಾಯುತ್ತಿರುತ್ತಾರೆ.'' ಎನ್ನುತ್ತಾ ಮೈಮುರಿಯುತ್ತಾ. ನಿಮಗೆ 'ವಾಪಸ್ಸು ಹೋಗಲು ದಾರಿ ಗೊತ್ತಾಗುತ್ತದೆಯೇ?' ಎಂದು ಕೇಳಿದರು. ನಾನು 'ಗೊತ್ತು' ಎಂದು ಹೇಳುತ್ತಾ ಹಸ್ತಲಾಘವನ್ನು ಕೊಟ್ಟು ಮುಂದುವರಿದೆ. ಅಷ್ಟ ರಲ್ಲೇ ಆತ ದೊಡ್ಡ ಧ್ವನಿಯಲ್ಲಿ 'ತಿರುಗಿ ಮತ್ತೆ ಬನ್ನಿ. ನೀವು ನ್ಯೂಯಾರ್ಕಿಗೆ ಹೋದೊಡನೆ ಪತ್ರ ಬರೆಯಿರಿ. ಮರೆಯಬೇಡಿ' ಎಂದು ಕೂಗಿ ಹೇಳುತ್ತಿರಲು ನಾನು ತಲೆ ಆಡಿಸಿ ಒಪ್ಪಿ ಮುಂದುವರಿದೆ. ಆತ ನಾಯಿಯ ಜತೆ ಆಡುತ್ತಾ

ಕಡಿದಾದ ದಾರಿಯನ್ನು ಕ್ರಮಿಸಲು ತೊಡಗಿದ. ಆತನಿಗೆ ಎಪ್ಪತ್ತು ವರ್ಷವಿರ ಬಹುದೆಂದು ನಾನು ಯೋಚಿಸುತ್ತಾ ಹಿಂದಿರುಗಿ ಬರುತ್ತಿರುವಾಗ ಆತನನ್ನು ಭೆಟ್ಟಿಯಾಗಲು ಮತ್ತೊಬ್ಬ ಹೋಗುತ್ತಿದ್ದ. ರಾಬರ್ಟ್ ಫ್ರಾಸ್ಟ್‌ನ ಸಂಪೂರ್ಣವಾದ ಹೆಸರು ಆರಂಟೋನಿಯೋ ಮೆಕಾಡೊ ಎಂದು. ಆ ಹೊಸ ಅತಿಥಿ ಭಾಷೆಯನ್ನು ತಿಳಿಯದವ. ಹೇಗೆ ಇವರೊಂದಿಗೆ ಸಂಭಾಷಣೆ ನಡೆಸುತ್ತಾನೋ? ಸ್ಪೈನರಿಗೆ ಇಂಗ್ಲೀಷ್ ಬರದು. ಅಮೇರಿಕನ್ನರಿಗೆ ಸ್ಪೈನ್ ತಿಳಿಯದು. ಆದರೂ ಪರವಾಗಿಲ್ಲ ಅವರು ಒಬ್ಬರನ್ನೊಬ್ಬರು ನೋಡಿ ಮುಗುಳ್ನಕ್ಕು ಗೆಳೆತನ ಬೆಳಸುತ್ತಾರೆ. ನಾನು ರೊಕಾಪೊರ್ಟ್ ಮನೆಯನ್ನು ಸ್ಮರಿಸಿಕೊಂಡೆ. ಅದು ವೆಲೆನ್‌ಸಿಯಾದಲ್ಲಿರುವ ದೊಡ್ಡ ತೋಟದ ಮಧ್ಯೆ ಇದೆ. ಆ ತೋಟವು ಅಲಕ್ಷ್ಯಕ್ಕೆ ಗುರಿಯಾಗಿ ಕಾಡಿನಂತೆ ಹುಚ್ಚಾಪಟ್ಟೆ ಬೆಳೆದು ನಿಂತಿದೆ. ಆತನ ವಾಸದ ಕೋಣೆ ಹಾಗೂ ಕುರ್ಚಿ ಮೇಜುಗಳ ಮೇಲೆಲ್ಲಾ ಬರೇ ಧೂಳು. ಮೆಕಾಡೋ ಸಿಗರೇಟನ್ನು ಬಾಯಲಿಟ್ಟುಕೊಂಡೇ ಹೊರ ಹೊರಟ. ಬಂದ ಸ್ಪೈನಿನ ಅತಿಥಿಯೂ ಮುದುಕ. ನಗಲು ಚೆನ್ನಾಗಿ ಬಲ್ಲ ವನು. ಈ ಲೋಕದಿಂದಲೇ ನಿವೃತ್ತನಾದವನು. ಮರೆಗುಳಿ ಬೇರೆ. ಎಲ್ಲಾ ಮಾತಿನಲ್ಲೂ ಅಮೆರಿಕನ್ನರಂತೆ ತಾತ್ವಿಕತೆ ಬೆರಸಿ ಸಂತನಂತೆ ಮಾತಾಡುವುದು. ಮೆಕಾಡೋ ಕೂಡ ದುರಂತಗಳನ್ನು ಎದುರಿಸುತ್ತಲೇ ನಗಬಲ್ಲ. ತನ್ನ ಸಮಸ್ಥಿತಿ ಯನ್ನು ಕಾಯ್ದುಕೊಂಡು ವಿಷಾದದಿಂದ ನಗಬಲ್ಲ. ''ಹೌದು, ಆಂಗ್ಲೋ ಸಾಕ್ಸನ್‌ರು ಬಿಳಿಯ ಶರಟು ಧರಿಸುತ್ತಾರೆ. ಮರಗಳ ಹಸಿರು ನೋಡಿ ಆನಂದಿ ಸುತ್ತಾರೆ. 'ಅವರ ಮತ್ತೊಂದು ನಗೆಯ ಮುಖ ದುರಂತದ್ದು ಅವರ ಸಹ ಚರರ ಕವಿತೆಗಳಲ್ಲಿ ಮಂಜಿನ ಬಿಳುಪನ್ನು ಕಾಣುತ್ತಾರೆ. ಬೇರೆಯವರ ಪದ್ಯ ಗಳಲ್ಲಿ ಬರಿಯ ಸೋಪಿನ ಧೂಳನ್ನು ಕಾಣುತ್ತಾರೆ. ಬೇರೆಯವರ ಪದ್ಯಗಳಲ್ಲಿ ಮೆಕ್ಸಿಕೋ ಧೂಳು. ಅದು ಮುಟ್ಟಿದೊಡನೆ ತಟ್ಟನೆ ಮಾಯವಾಗುವ ಧೂಳು.

ಜನವರಿ ಒಂದು

ವರುಷಗಳ ಕದ ತೆರದವು
      ನುಡಿಯ ಬಾಗಿಲಂತೆ
ಕಾಣದ ನಿಟ್ಟಿನತ್ತ
            ನಾಳೆ
ಕಳೆದಿರುಳು ನೀನು ಹೇಳಿದಂತೆ
ನಾವು ಯೋಚಿಸಬೇಕಾದ ಸಂಕೇತ-ಚಹರೆಗಳು
ನಿಸರ್ಗ ಚಿತ್ರಕ್ಕೆ ನಿರ್ಮಿಸಿಟ್ಟ ಚೌಕಟ್ಟು
ಎರಡು ಪುಟಗಳಲ್ಲಿ
ಒಂದು ದಿನಕ್ಕೆ ಒಂದು ಪುಟ
ನಾಳೆ ನಾವು ಮತ್ತೊಮ್ಮೆ ಕಂಡುಹಿಡಿಯಬೇಕಾಗಿದೆ-
ಈ ವಿಶ್ವದ ವಾಸ್ತವಿಕ ಸ್ಥಿತಿಗತಿಗಳನ್ನು.

ಬಹಳ ತಡ ನಾನು ಕಣ್ಣು ತೆರೆದದ್ದು
ಕ್ಷಣದೊಂದು ಕ್ಷಣಕ್ಕೆ
ಅಜಟಕ್ ಜನಾಂಗದ ಅನಿಸಿಕೆಗಳೇ ನನ್ನವೂ ಕೂಡ
ಭೂಶಿರದ ನೆತ್ತಿಯ ಮೇಲೆ
      ಕಾಯುತ್ತಾ ಬಿದ್ದಿದೆ
ಅನಿಶ್ಚಿತ ಕಾಲ ಆ ಕಾಲವೇ ತಿರುಗಿರಬಹುದು
      ದಿಗಂತದೊಳಗಣ ಒಡೆದ ಬಿರುಕಿನಿಂದ
ಅದು ಹಾಗಲ್ಲ ವರ್ಷವದು ಮತ್ತೆ ಬಂತು
ತೆರವಾದ ಕೋಟೆಯ ತುಂಬ ತುಂಬಿತ್ತು
ನನ್ನ ಈ ನೋಟ ಅದನ್ನು ತಟ್ಟಿ ಹಿಂಬಾಲಿಸಿತ್ತು
ಕಾಲ, ನಮ್ಮಿಂದ ಅದಕ್ಕೆಲ್ಲ ಸಹಾಯ
ನಿನ್ನೆಯಂತೆಯೆ ಇಂದು ಸಹ ನಿಖರ
ಖಾಲಿ ಬೀದಿಯ ಮನೆಗಳಲ್ಲಿ
ಮಂಜು ಮುಸುಕಿದ ಮನೆಗಳ ಮೇಲೆ

ಮೌನದಿಂದ ಕುಳಿತ ಮಂಜು
ನೀನು ನನ್ನ ಬಳಿಯಲ್ಲೆ
ಇನ್ನೂ ಮಲಗಿ ನಿದ್ರಿಸಿದ್ದೆ
ದಿನವೇ ನಿನ್ನ ಶೋಧಿಸಿತು
ಇದನ್ನು ನೀನು ಒಪ್ಪದಾದೆ
ದಿನವೇ ನಿನ್ನ ಕಂಡುಹಿಡಿಯಿತು ನಿಜ
ನನ್ನ ಇರುವಿಕೆಯನ್ನೂ ಸಹ
ಮತ್ತೊಂದೆ ದಿನಕ್ಕೆ ನೀನಿಟ್ಟೆ ಹೆಜ್ಜೆ

ನೀನು ನನ್ನ ಬದಿಯಲ್ಲೆ
ನಾನು ನೋಡಿದೆ ನಿನ್ನ ಮಂಜುಗಡ್ಡೆಯಂತೆ
ನಿದ್ರಿಸಿದ್ದ ನೀನು, ಮಂಜುಗಡ್ಡೆಯೆ ಸರಿ
ಉಪಕಾರಗಳನ್ನು ನಿರೀಕ್ಷಿಸದ ಕಾಲ
ರಸ್ತೆ, ಮರಗಳನ್ನು ಕಂಡುಹಿಡಿಯುವುದು
ನಿದ್ರಿಸಿದ ಸ್ತ್ರೀಯರನ್ನು ಸಹ.

ನೀನು ಕಣ್ಣು ತೆರೆದಂತೆಲ್ಲ
ನಾವು ನಡೆಯುತ್ತೇವೆ ಮತ್ತೆ ಮುಂದೆ
ಗಂಟೆಗಳ ನಡೆವ ಕಾಲದ ಶೋಧನೆಗಳು
ನಾವು ಕಾಲದೊಡನೆ ಕಾಣಿಸಿಕೊಂಡೆ ನಡೆಯೋಣ
ಕಾಲಕ್ಕೆ ಸಾಕ್ಷಿಯಾಗಿ ಕಾಲದೊಂದಿಗೆ ಕೂಡಿ
ದಿನಗಳ ಬಾಗಿಲು ತೆರೆದು ನಾವು
ಅಮೂರ್ತ ಅಜ್ಞಾತದತ್ತ ಹೆಜ್ಜೆ ಹಾಕೋಣ.

ಗ್ರಾಮ

ಕಲ್ಲುಗಳೇ ಕಾಲ
ಗಾಳಿ
ಶತಮಾನಗಳ ಗಾಳಿ
ಮರಗಳೇ ಕಾಲ
ಮನುಷ್ಯರೆಲ್ಲ ಕಲ್ಲು
ಗಾಳಿಯು
ಸುರುಳಿ ಸುತ್ತಿ ಮುಳುಗುವುದು
ಕಲ್ಲಿನ ದಿನವಾಗುವುದು
ಇಲ್ಲಿ ನೀರು ಇಲ್ಲ. ನೀರಿನ ಆಕರ್ಷಕ ಕಣ್ನೋಟ ಮಾತ್ರ.

ನೀರಿನ ಕೀಲಿಕೈ

ಹೃಷಿಕೇಶ ದಾಟಿ ಹರಿವ
ಗಂಗೆ ಮತ್ತೂ ಹಚ್ಚಹಸಿರು
ದಿಗಂತದ ಗಾಜೊಡೆದು
ಆದ ಶಿಖರಗಳು
ನಾವು ನಡೆಯುತ್ತೇವೆ ಹರಳುಗಟ್ಟಿದ ಮಂಜಿನ
ಮೇಲೆ, ಕೆಳಗೆ
ನೀರವ ಮೌನ ಜಲಸಂಧಿಯಲ್ಲಿ
ನೀಲ ಶೂನ್ಯದ ನಡುವೆ
ಬಿಳಿಯ ಹೆಬ್ಬಂಡೆ ಕಪ್ಪುಮೋಡ
ನೀನು ಹೇಳಿದೆ
....
ಆ ರಾತ್ರಿ ನನ್ನ ಕೈಗಳು ನಿನ್ನ ಸ್ತನಮಂಡಲದ ಮೇಲೆ

ಮತ್ತೊಂದು

ಅವನ ಮುಖವನ್ನ ಅವನೇ ಶೋಧಿಸಿ ಕಂಡುಕೊಂಡ
ಅದರ ಹಿಂದೆಯೇ
ಬದುಕಿ ಬಾಳಿ ಸತ್ತ ಮತ್ತೆ ಪುನರುಜ್ಜೀವಿಸಿದ
ಹೀಗೆ ಎಷ್ಟೋ ಬಾರಿ
ಇಂದನವನ ಮುಖದ
ತುಂಬೆಲ್ಲ ಸುಕ್ಕುಗಳು
ಅವನ ಸುಕ್ಕುಗಳಿಗಿಲ್ಲ ಮುಖ.

ಹಕ್ಕಿನೋಟ

ಗಿಲ್‌ರಿಮ್ಮೊ ನೀರಹಕ್ಕಿ
ರೋಷದಿಂದ
        ಉರುಳಾಡಿ ಸುರುಳಿ ಸುತ್ತುತ್ತಿದ್ದಾಗ
ಪ್ರತಿಬಿಂಬಗಳು ಸುತ್ತಲೂ

ನೇರ ಸರಳರೇಖೆ ಬಿದ್ದು
ಸ್ಪಷ್ಟ ಗೋಚರಿಸುವ
ಪರಿಶುದ್ಧ ಬಿಳುಪು
ಮೇಲಿಂದ ಕೆಳಗೆ
ಕೊಕ್ಕು ಕಡುರಕ್ತಗೆಂಪು
ಚದುರಿದ ಉಪ್ಪು
ವಿರಳವಾದ ಸರಳರೇಖೆ
ಬೀಳುತ್ತದೆ
ನೆಟ್ಟಗೆ
ನಿನ್ನ ಕಣ್ಣೋಟ
ಆ ಪುಟದತ್ತಲೆ ನೆಟ್ಟು
ಕರಗಿ, ಲೀನ.

ಪ್ರಣಯಗೀತೆ

ದ್ರಾಕ್ಷಿಬಳ್ಳಿ ಹಬ್ಬಿದ್ದ ಬೆರಳಿಂದ
ಬಿದ್ದ ಹಸಿಹಸಿ ನೀರು
ಮತ್ತೂ ಪಾರದರ್ಶಕ
ನನ್ನ ಭಾವನೆಗಳ ಚಾಚುಸೇತುವೆ
ನಿನ್ನಿಂದ ಮತ್ತೆ ನಿನ್ನತ್ತ.

ಬರಹ

ಮೂಡುತ್ತ ಬೆಳಗು ತನ್ನದೇ ಚಿತ್ರ ಸೃಷ್ಟಿಸುವಂತೆ
ನಾನು ಬರೆದ ಅಕ್ಷರಗಳು
ಹಾರಿಹೋಗುವುವು ಮೇಲೆ
ಹಿಂತಿರುಗಿ ಬರದಂತೆ.

ಯೌವ್ವನ

ಕುಣಿಕುಣಿವ ಕಡಲ ಅಲೆಗಳು
ಶುದ್ಧ ಬಿಳುಪು
ಪ್ರತಿಗಳಿಗೆಯೂ
ಹಸಿರುಪಚ್ಚೆ
ಪ್ರತಿಬೆಳಗೂ
ನವಯೌವ್ವನ
ಸಾವು.

ಭೂತ

ಮನುಷ್ಯನು ಧೂಳಾದರೆ
ಬಯಲ ನಡುವೆ ನಡೆಯುವವರೆಲ್ಲರೂ
ಮನುಷ್ಯರೇ?

(ಸ್ವರ) ಮೈತ್ರಿ

ಮೇಲೆ ನೀರು
ಕೆಳಗೆ ತೋಪು
ದಾರಿಯಲ್ಲಿ ಗಾಳಿ
ಸಕಲವೂ ನಿಯಮಬದ್ಧ
ಬಕೆಟ್ಟಿನಲ್ಲಿ ನಿಂತ ಕಪ್ಪುನೀರು
ಆ ನೀರು ಕೆಳಗಿಳಿಯಿತು ಮರಗಳತ್ತ
ಆಕಾಶಕ್ಕೆ ಅದೇ ತಾನೇ ಮೂಡಿತ್ತು ತುಟಿ.

ದಿವ್ಯವಾಣಿ

ಇರುಳ ಶೀತ, ತಣ್ಣನೆಯ ತುಟಿ
ಆಡಿತು, ಒಂದೇ ಒಂದು ಮಾತು
ಅದೊಂದು ಶೋಕದಂಕಣ
ಅದು ಮಾತಲ್ಲ, ಬರಿಕಲ್ಲು
ಕಲ್ಲೂ ಸಹಿತ ಅಲ್ಲ ಬರಿನೆರಳು
ನನ್ನ ಆವಿಯಾದ ತುಟಿಯಲ್ಲಿ ನಿಜದ ನೀರು
ನಿಜದ ಮಾತು
ನನ್ನ ತಪ್ಪುಗಳ ಹಿಂದಿನ ಕಾರಣ
ಸಾವಾಗಿದ್ದರೆ ಅದರ ನಡುವೆಯೆ ನನ್ನ ಬದುಕು
ಅದು ಒಂಟಿತನವಾಗಿದ್ದರೆ ಮಾತಾಡಿ ಸೇವಿಸುವೆ
ಅದು ನೆನಪಾಗಿದ್ದರೆ ಅದರ ನೆನಪೇ ನನಗಿಲ್ಲ
ಅದು ಹೇಳುವುದೇನೋ ಅರಿಯೆ ನಾನು ಆದರೂ ನಂಬುವವನು
ಒಬ್ಬರು ಬದುಕಿರುವರೆಂದು ತಿಳಿಯುವುದು ಹೇಗೆ?
ಒಬ್ಬರ ಅರಿವನ್ನು ಮರೆಯುವುದು ಹೇಗೆ?
ಅರೆತೆರದ ಕಣ್ಣೆವೆಯ ಕಾಲ
ನಮ್ಮನ್ನು ನೋಡುತ್ತವೆ ನಾವೂ ಅದರತ್ತಲೇ ನೋಡುವಂತೆ
ಮಾಡುತ್ತವೆ.

ಸಾದೃಶ್ಯ

ಶೂನ್ಯಗಳ
      ಶೂನ್ಯ
ಮಧ್ಯವಿಲ್ಲ ಕೆಳಗು ಇಲ್ಲ ಮೇಲೂ ಇಲ್ಲ ಏನೂ
ಸಿಲ್ಲದೆ ಹೀರಿ ಹುಟ್ಟುತ್ತಿದೆ ತನಗೆ ತಾನೆ
ಅಲೆಯದಾವರ್ತದಲ್ಲಿ ತಿರ್‍ರನೆ ತಿರುಗುವ ಶೂನ್ಯ
ಮೇಲಿಂದ ಕೆಳಗೆ ಬಿದ್ದ
ಶೂನ್ಯಗಳು
      ಸ್ವಚ್ಛ
ಕತ್ತರಿಸಿಟ್ಟ ವಜ್ರಷಟ್ಕೋನ
      ತೂಗಾಡುವುದು
ನೇರ ರಾತ್ರಿಗಳಲ್ಲಿ
ಕಲ್ಲುಹರಳಿನ ಕಪ್ಪುತೋಟ
ಅದರ ರೆಂಬೆಕೊಂಬೆಗಳಲ್ಲಿ ಹೊಗೆಯರಳಿ
ಬಿಳಿತೋಟ, ಅಲ್ಲಿ ಗಾಳಿಸ್ಫೋಟ
ಶೂನ್ಯಗಳು
ಏಕಾಂತ ಶೂನ್ಯದಿಂದೆದ್ದು ಅರಳಿದ
ಹೂವಿನ ಮುಖ
ಕರಗಿ
ಶೂನ್ಯದಲ್ಲಿ ಶೂನ್ಯ
ಎಲ್ಲ ಮಿಂಚಿಮಾಯವಾಗಿ
ಮುಟ್ಟಲಾಗದ ಪ್ರಸ್ತಕ್ಕೆ ತಾಣ.

ಖಚಿತತೆ

ಇದು ನಿಜವೆ ಆಗಿದ್ದರೆ ಈ ಲ್ಯಾಂಪಿನ
ಹೊಳೆವ ಬೆಳ್ಳಿ ಬೆಳಕದು ನಿಜವೆ ಆಗಿದ್ದರೆ
ಬರೆಯುತ್ತಿರುವ ಈ ನನ್ನ ಕೈ ನಿಜವೆ ಆಗಿದ್ದರೆ
ಬರೆಯುವುದನ್ನು ನೋಡುತ್ತಿರುವ ಈ ನನ್ನ ಕಣ್ಣುಗಳು ನಿಜವೇ?

ಒಂದು ಪದದಿಂದ ಮತ್ತೊಂದು ಪದ
ನುಡಿಯುವ ಮುನ್ನವೆ ಮಾಯವಾಗುವುದು
ಎರಡು ವಾಕ್ಯಾಂಶಗಳ ನಡುವಿನೆಡೆಯಲ್ಲಿ
ನಾನು ಬದುಕಿರುವೆ ಎಂದು ಗೊತ್ತು ನನಗೆ.

ಮುಂಜಾವು

ಗಾಳಿಯ ಕೈಗಳು ಮತ್ತು ತುಟಿಗಳು
ಸಲಿಲ ಹೃದಯ
        ಯೂಕಲಿಪ್ಟಸ್
ಬೀಡುಬಿಟ್ಟ ಬಟ್ಟ ಬಯಲ ಮೋಡಗಳು
ಪ್ರತಿನಿತ್ಯ ಹುಟ್ಟುವ ಈ ಬದುಕು
ಸಾವು, ಹುಟ್ಟುವುದೀ ಬದುಕಿಂದ
ನಾನು ಕಣ್ಣುಜ್ಜುವೆನು
ಆಕಾಶ ನಡೆವ ಭೂಮಿ.

ಬೆರಗು

ಅಲುಗಾಡದೆ ನಿಂತ ರೆಂಬೆಯ ಮೇಲಿಲ್ಲ
ಗಾಳಿಯಲ್ಲದ
    ಗಾಳಿಯಲಿಲ್ಲ
ತುರ್ತಾಗಿ ಹಾಡುವ
    ಹಾಡಹಕ್ಕಿಯಲ್ಲಿ.

ದೂರಸಂಬಂಧಿ

ಕಳೆದಿರುಳು ಬೂದಿಮರ
ಏನೋ ಹೇಳಬೇಕೆಂದಿತ್ತು
ಆದರದು ಏನೊಂದನ್ನೂ ಹೇಳದೆ ಮೌನವಾಗಿತ್ತು.

ಸ್ಪರ್ಶ

ನಿನ್ನ ಇರುವಿಕೆಯ ತೆರೆ ತೆರದ
ಈ ನನ್ನ ಕೈಗಳು
ನಿನ್ನ ಮುಂದಿನ ನಗ್ನತೆಗೆ ತೊಡಿಸಿ ಬಿಟ್ಟೆ
ನಗ್ನಗೊಳಿಸಿದ ದೇಹಗಳಲ್ಲಿ ನಿನ್ನ ದೇಹಕ್ಕಾಗಿ
ಈ ನನ್ನ ಕೈಗಳು
ಶೋಧಿಸುವುದು ಬೇರೆ ದೇಹ, ನಿನ್ನ ದೇಹಕ್ಕಾಗಿ.

ಬೆಳಗು

ತಣ್ಣಗೆ ರಭಸಗತಿಯಿಂದ ಕೈಗಳು
ಹಿಂದಕ್ಕೆಳೆಯುತ್ತಿವೆ ಒಂದೊಂದಾಗಿ
ಕಪ್ಪು ಬ್ಯಾಂಡೇಜುಗಳನ್ನು, ಆಗ
ತೆರೆವೆ ನಾನು ಕಣ್ಣು
ಜೀವಿಸಿರುವೆ ಇನ್ನು
ಹಸಿಯಗಾಯ ಇನ್ನೂ ಹಸಿಹಸಿ
ಅದರ ಮಧ್ಯದಲ್ಲೆ ನಾನು.

ಇಲ್ಲಿ

ರಸ್ತೆಯೊಡನೆ ಈ ನನ್ನ ಹೆಜ್ಜೆಗಳು
ಸದ್ದುಮಾಡುತ್ತಿವೆ, ಮತ್ತೆ ಮತ್ತೆ
ಬೇರೊಂದು ರಸ್ತೆಯಲ್ಲಿ
ನನಗೆ ಕೇಳಿಸುತ್ತಿದೆ ಆ ಹೆಜ್ಜೆಗಳ ಸದ್ದು
ರಸ್ತೆಯುದ್ದಕ್ಕೂ ನಾನು ಸಾಗುತ್ತಿರಲು
ಅಲ್ಲೆಲ್ಲಾ ಇದ್ದ ಮಬ್ಬು ಮಾತ್ರವೆ ಸತ್ಯ.

ಸ್ನೇಹ

ನಾನು ಕಾಯುತ್ತಿರುವ ಹೊತ್ತು
ಮೇಜಿನ ಮೇಲೆ ಬಿತ್ತು, ಬಿದ್ದು
ದೀರ್ಘವಾಗುತ್ತಾ,
ಲ್ಯಾಂಪಿನ ಹರಡಿದ ಕೇಶರಾಶಿಯಾಗಿ
ರಾತ್ರಿ ಕಿಟಕಿ ಬದಲು ನೆರಳು ಮುಳುಗಿ
ಅದರಾಚೆಗೆ ಯಾರೊಬ್ಬರು ಅಲ್ಲಿ ಇಲ್ಲದಿರಲು
ಹೆಸರೆ ಇಲ್ಲದ 'ಇರುವಿಕೆ' ನನ್ನ ಸುತ್ತುವರೆದಿತ್ತು.

ನಿಸರ್ಗ ಚಿತ್ರ

ಬಂಡೆ ಮತ್ತು ಪ್ರಪಾತ
ಕಲ್ಲಿಗಿಂತಲು ಹೆಚ್ಚು ಕಾಲದ
ಕಾಲಾತೀತ ವಸ್ತುಗಳು.

ಜಲಧಾರೆ ಬೀಳುವಾಗ ಆದಂಥ
ಕಲೆಯ ಗುರುತಿನಂತೆ ಸ್ಥಿರ
ನಿರಂತರ ಪರಿಶುದ್ಧ ನೀರು

ಇಲ್ಲಿ ಬೃಹತ್ತಾಗಿ ಮಲಗಿರುವ
ಬಂಡೆ ಮೇಲೆ ಬಂಡೆ
ಬಂಡೆ ಸುತ್ತಲೂ ಗಾಳಿ

ಈ ಜಗಕ್ಕೆಲ್ಲ ಮೈದೋರಿ
ಇದ್ದ ಹಾಗೇ ಇರುವ ಸೂರ್ಯ
ನಿಶ್ಚಲ ಅಗಾಧಕೂಪದಲ್ಲಿ

ಇಲ್ಲಿ ಸುತ್ತುವ ಪರಿಭ್ರಮಣದ ಆಳತೆ
ಕಡಿದಾದ ಬಂಡೆಯ ತೂಕ
ನಮ್ಮ ನೆರಳಿಗಿಂತಲು ಹಗುರ.

ಕನ್ಯಾಕುಮಾರಿಯ ಬಳಿ

ಅಲೆಮಾರಿಗಳ ನಾಡು ಕೋಡಿ ಹರಿದ ನೀರ ಬಯಲುಗಳ
ನಟ್ಟನಡುವೆ ಹಾದಿ ಒಡೆದು ಚೂರು
ಮರಗಳ ಕಂಠಮಟ್ಟ ನಿಂತ ನೀರು
ಆದೇ ತಾನೆ ಹುಟ್ಟಿ ಕಣ್ಣುಬಿಟ್ಟಾಕಾಶ
ಶುದ್ಧ ಬಿಳುಪಿನ ಪ್ರಶಾಂತ ಹಕ್ಕಿಗಳು
ತುಂಬು ತುಪ್ಪಳದ ಕ್ರೌಂಚಗಳು
ನಿಷ್ಕಳಂಕಗಳ ನಡುವೆ ನಿಂತ ನಾಟಕೀಯ ಹಸಿರು
ಹುದುಗಿದೆ ಹಾಸುಹೊಕ್ಕಾಗಿ ಕೊಚ್ಚೆಕೆಸರಲ್ಲಿ
ಬಡ ಸೋಮಾರಿ ಎಮ್ಮೆಗಳು
ಮುಚ್ಚಿಕಣ್ಣು ಮೆಲಕು ಹಾಕಿ
ನೀರಿನಲ್ಲಿ ಮೇಯುವಲ್ಲೆ ಮಗ್ನ
ಬೇಡುವ ಕಪಿಗಳು, ಒಂದು ಗುಂಪು ಸಮಚಿತ್ತದ
ಅಚ್ಚರಿ ಹುಟ್ಟಿಸುವ ಹಳದಿ ಮೇಕೆ
ಮೊನಚಾದ ಕೋಡುಗಲ್ಲಿನ ಮೇಲೆ
ಅದರ ಮೇಲೆ ಕುಳಿತ ಡೊಂಬಕಾಗೆ
ಯ, ಗಲಿಬಿಲಿ ಇರವು ಕಂಡೂ ಕಾಣದಂತೆ ನಿತ್ಯ ನಿರಂತರ
ಜೇಡನಾಗರಗಳಲ್ಲಂಥಲ್ಲದ ಹೇಳಹೆಸರಿಲ್ಲದ
ದಿನವೂ ನಿರ್ಲಕ್ಷ್ಯದ ಜಗತ್ತಿನ ನಡುವೆ
ದೇವರೋಪಾದಿಯಲ್ಲಿ ನೆಲೆ ನಿಂತ ಭೂತ
ಒಂದನ್ನೊಂದು ವಿರೋಧಿಸುತ್ತಾ ಸಂಚರಿಸುವ ಜೀವರಾಶಿ
ದ್ವಿದಳಧಾನ್ಯದ ತೆನೆಯ ಮುಖ ಆಕಾಶದತ್ತ
ಸೂರ್ಯಚಂದ್ರರ ಸಮ್ಮಿಲನದ ಅಡಿಯಿಡುವ ರಾತ್ರಿ
ಮಿಂಚುಳ್ಳಿ, ಹಕ್ಕಿಯ ವರ್ಣಪಾರದರ್ಶಕ ಹೊಳಪು
ಪ್ರಧಾನ ಕಪ್ಪು ಆವರಿಸಿ ನಿಸರ್ಗದ ಚಿತ್ತಾರಗಳೆಲ್ಲ ಮುಳುಗಿ ಮಾಯ.

ಉದಕ ಮಂಡಲ

ನೀಲಗಿರಿ ಬೆಟ್ಟಗಳ ಮೇಲೆ
ತೋಡರಿಗಾಗಿ ಹುಡುಕಾಡಿದೆ
ಅವರದು ಕೋನದೇಗುಲ ಲಾಯ
ಮೂಳೆ ಎದ್ದ ಗಡ್ಡದ ನಿಗೂಢ ಮುಖ
ತಮ್ಮ ಪವಿತ್ರ ಎಮ್ಮೆಗಳ ಹಾಲು ಕರೆದು
ರಾಗಗಳ ಗೊಣಗುತ್ತಾರೆ, ತಮ್ಮ ಬಿಡುವಿನ ವೇಳೆ
ತಮಗೇ ತಿಳಿಯದಂತೆ ಕಾಯ್ದುಕೊಳ್ಳುವ
ಸುಮೇರಿಯನ್ ರಹಸ್ಯ
ಪುರಾತನ ಒಣತುಟಿಗಳ ನಡುವೆ
ಇಸ್ತಾರಗಳ ಹೆಸರು, ಉಗ್ರದೇವತೆ ಅವಳು
ಖಾಲಿ ಬಾವಿಯ ಮೇಲೆ ಹೊಳೆವ
ಬೆಳದಿಂಗಳ ಚೂರು.
ಸಿಸಿಲ್ ಹೋಟಲಿನ ವರೆಂಡಾದಲ್ಲಿ
ಮಿಸ್ ಫೆನಲೋಪಿ (ಹೊಂಗೂದಲು ಕೈಯಲ್ಲಿ ಕೋಲು
ತೊಡೆತನಕ ಉಲ್ಲನ್ ಕಾಲ್ಚೀಲ)
ಕಳೆದ ಮೂವತ್ತು ವರ್ಷಗಳಿಂದ ಅವಳ ಒಂದೇ ಹಾಡು
''ಓ ಇಂಡಿಯಾ ಒಳ್ಳೆಯ ಅವಕಾಶಗಳನ್ನು ಕಳೆದುಕೊಂಡ ದೇಶವೇ''
ಆ ಪ್ರಪಂಚದ ನಡುವೆ
ಜಾಕರಾಂಡ ಮರದ ಮಧ್ಯೆ ಎಂಥ ಬೆಳಕಿನ ಬುಗ್ಗೆ!
ಖುಷಿಗೊಂಡ

ಕಾಗೆಗಳ ಕೂಗು
ಎತ್ತರದ ಹುಲ್ಲುಗಳು ಗಿಡ್ಡಗಿಡಗಳು
ಅಸ್ಥಿರ ನೆಲ, ಖಾಲಿಜಾಗಗಳಲ್ಲಿ
ಹಾರುವ ಗೆದ್ದಲು ಗೂಡುಕಟ್ಟುವುವು
ಸೈಕ್ಲೋಪಿನ ಸೂಕ್ಷ್ಮ ಬುರುಜು
ಮೈಸೀನಿಯನ್
ಮಣ್ಣದಿಬ್ಬಗಳು

ಮ್ಯಾಚ್ಚು ಪಿಚ್ಚುಗಳಿಗೆ
ಮರಳ ಶ್ರದ್ಧಾಂಜಲಿಗಳು
ಹಚ್ಚಹಸುರಿಂದ ತೊಳಗುತ್ತ
ಬೂದಿಯಂತೆ ಬೆಳಗುತ್ತ
ಹಾಡುವ ಮರ

ದೃಷ್ಟಿ ಹರಿಸಿದಂತೆಲ್ಲ
ಗುಲಾಬಿ ಕೆಮಿಲಿಯಾ ಮರ
ಬಾಗಿ ಬಳಕುತ್ತಿದೆ ಶೂನ್ಯದತ್ತ
ಪ್ರಭೆ ಸೂಸುತ್ತಾವೆ ಮೂಸಂಡಿ ಮೌನದ ಹಸಿರು
ಬೀಳುವ ಶೂನ್ಯದಲ್ಲಿ ಬಿಟ್ಟಂತೆ ಬೇರು
ಹೊಕ್ಕು ಹೊರಡಲಸಾಧ್ಯದಿರವು
ಬವಳಿ ಬರಿಸುವ ಅಸ್ಪಷ್ಟ ಭಾಷೆ.

ಇರುಳು ಬೆಳೆದಂಥ ಮುಗಿಲು
ಯೂಕಲಿಪ್ಟಸ್ ಭಗ್ಗನೆ ಹೊತ್ತಿ ಉರಿದ
ಉದಾತ್ತ ನಕ್ಷತ್ರ ಪುಂಜ
ನನ್ನ ದೂರ ತಳ್ಳದೆ ಬಳಿಗೆ ಬಾ ಎನ್ನುತ್ತಿದೆ.

ದೀಕ್ಷೆ

ತರುಣ ಹಸನ್
ಕ್ರೈಸ್ತಳನ್ನು ಲಗ್ನವಾಗಲು
ಒಳಗಾದ ಸಂಪ್ರೋಕ್ಷಣೆಗೆ
ಪಾದ್ರಿ ಅವನಿಗೆ ಇಟ್ಟ
ಹೆಸರು ಎರಿಕ್
ಅವನಿಗೆ ಈಗ ಹೆಸರುಗಳು ಎರಡು
ಹೆಂಡತಿ ಮಾತ್ರ ಒಬ್ಬಳೇ.

ಹುಮಾಯೂನನ ಶೋಭಾಯಮಾನ ಸಮಾಧಿ

ದುಂಬಿಗಳ ಸಂವಾದ
ಕಪಿಗಳ ಭಾಷೆ
ಉದ್ರಿಕ್ತ ಹಕ್ಕಿಗಳ ಸಂಖ್ಯಾಶಾಸ್ತ್ರ
ಇವು ವಿರೋಧಿಸುವ

ಗುಲಾಬಿಯ ಕೆಂಗೆಂಪು ಬೆಂಕಿ, ಕಲ್ಲಿಂದ
ಏರ್ಪಟ್ಟು ಗಾಳಿ ಮತ್ತು ಹಕ್ಕಿಗಳು
ಕಾಲವನ್ನು ನಂಬಿ ನೀರ ಮೇಲೆ

ಮೌನ ಶೈಲಿಯ ರಚನೆ.

ಲೋದಿ ತೋಟಗಳಲ್ಲಿ

ನೀಲ ಮೊತ್ತದಲ್ಲಿ
ಗೋಳಗಾಜಿನಂತ ಸಮಾಧಿಗಳು
ಕತ್ತಲಿನ ಸುತ್ತ ಮುಚ್ಚಿದ್ದ ಸ್ವಂತ ಆಲೋಚನೆಗಳು
ತಟ್ಟನೆ ಹಕ್ಕಿಗಳ ಕಳಿಸುವುವು ಮುಂದೆ.

ಹಿಮಾಚಲ ಪ್ರದೇಶ ೩

ಐದು ಅಂಥ ಪದ್ಧತಿಗಳು
ಕಂಡದ್ದು, ಕೇಳಿದ್ದು, ಹಾಗೂ ಮಾಡಿದ್ದು
ಔತಣಕ್ಕಾಗಿ ಬಂದ ರಣಹದ್ದುಗಳ ಹಿಂಡು
ಹೊಟ್ಟೆಬಿರಿಯೆ ತಿನ್ನಿಸುವರು, ಅದಕ್ಕೆ ಹಾರಲು ಮೈಭಾರ
ಕಲ್ಲು ಪೊಟರೆಯಿಂದ ಬಂದಂಥ
ಕುಂಟುಗರುಡ ನಿಂತು ದೂರ
ದಿಟ್ಟಿಸಿ ನೋಡುತ್ತದೆ ಕೊಳೆತ ಮಾಂಸದತ್ತ.

ನಾಗಪುರದ ನ್ಯಾಯವಾದಿ ಜಾನಿ ಪರದೇಶೀಯನಿಗೆ ಹಾಕಿದ ಕೊಕ್ಕೆ
ಡಾಕು ಬಂಗಲೆಯ ವರೆಂಡಾದಲ್ಲಿ ಆಡುತ್ತಾನೆ ಆಂಗ್ಲಭಾಷೆ
ಸುರಿಸಿ ಜೇನು, ಗುಟುಕು ಮಧ್ಯ, ತುಂಡು ಮಾಂಸ, ತೋಟದ
ಖರ್ಜೂರ ಕೊಟ್ಟು ಬುಟ್ಟಿ ತುಂಬ ತನ್ನ ಪ್ರವೇಶ ನಕ್ಷೆ
ವಿವರಿಸಿದ ವೇಳೆ, ಹೆಂಡತಿ ನಿಂತು ಬೀರಿನೋಟ ಬೀರುತ್ತಾಳೆ
ಮೌನದಿಂದ ನೋಡನೋಡುತ್ತಲೇ ಆ ನೋಟ ತೀಕ್ಷ್ಣವಾಗಿ
ಗೊಣಗಿ ಜರೆಯುತ್ತಾಳೆ ಹಿಂದೂಸ್ಥಾನಿಯಲ್ಲಿ.

ರಾಷ್ಟ್ರಗಳ ವೈರದ ಪರಿಹಾರದಂತ್ಯಕ್ಕೆ
ಅಚ್ಚರಿಯು ಹುಟ್ಟಿ ಬಿಟ್ಟಂಥ ಉಸಿರು
ಅರ್ಧಚಂದ್ರ, ಸ್ಥಿರನಿಂತ ಸೂರ್ಯ
ಇಬ್ಬರು ಸುಂದರ ಮುದುಕರ ಪ್ರತ್ಯಕ್ಷ
ಆ ನೋಟಕ್ಕೆ ಉದ್ರಿಕ್ತ ಪುನಃ ಚೇತನಗೊಂಡು
ಉಗ್ರ ಕೀಟದ ಕಾಮೋದ್ರೇಕ
ಚೆಲ್ಲಾಡಿದ ಒಣಬೀಜಗಳ ಯುದ್ಧ
ಗಂಟೆ ಒಂದರಲ್ಲೆ.

ಆರು ಯೂಕಲಿಪ್ಟಸ್ ಮರಗಳು ಕ್ಲಬ್ಬಿನ ಮೊಗಸಾಲೆಯಲ್ಲಿ
ಮೇಲುಸುರೆಳೆದು ಬಿಟ್ಟಾಗ, ಅಸ್ಪಷ್ಟ ಎಳೆಹಳದಿ ಬೆಳಕು
ಮೂವರು ಇಂಗ್ಲೀಷಿನವರು ಪರೀಕ್ಷಿಸುವವರು ರಾಜ್‌ನನ್ನು
ಪರಿಶೀಲಿಸಿ ನೋಡವರು ಸಿಡ್ನಿ, ಸಿಕ್ಕರನ್ನು
ಭಾರತೀಯ ವಿಧವೆಯರು ಆಡುವರು ಬ್ರಿಡ್ಜ್ ಇಸ್ಪೇಟಾಟ
ಹೊಲೆಯನೊಬ್ಬ ಗುಡಿಸಿ ಸಾರಿಸಿ ಮಾಯ
ಕಪ್ಪು ನಕ್ಷತ್ರವೊಂದು ನನ್ನ ಮೆದುಳಲ್ಲೆ ಸ್ಫೋಟ.

ಗೀಜಗನ ಹಕ್ಕಿ (ಪ್ಯಾರಿಸ್ಸಿನಲ್ಲಿ 'ಕ್ಯಾಪಿಟಲಿಸಂ'ನ ಗೋಪುರಕ್ಕೆ
ಬಿತ್ತು ಬೆಂಕಿ- ಬಂಡವಾಳ ಪತ್ರಗಳಿಗೂ ಸಹ)
ಫೈನ್ ಮರದ ನೆರಳುಗಳ ಬೆಟ್ಟ ಸಾಲು
ಧೂಳಿಗಾಗಿ ಅಳುವ ಹಕ್ಕಿ
ಸುಟ್ಟಂಥ ಆ ಸಂಜೆ
ಈ ಅಪ್ರಸಿದ್ಧ ಸಾಲುಗಳನ್ನು ನಾನು ಬರೆಯುತ್ತೇನೆ.

ಬೃಂದಾವನ

ಕಗ್ಗತ್ತಲು ಸುತ್ತ ಕವಿದು
ಕರಗಿದ ಕಗ್ಗಾಡು
ಅಲುಗಾಡುವ ವಿಶಾಲ ತೆರೆಗಳು
ಉಸುರುತ್ತಿವೆ
ನಾನು ಬರೆಯುತ್ತೇನೆ
ನಿಲ್ಲಿಸುತ್ತೇನೆ

    ಮತ್ತೆ ಬರೆಯುತ್ತೇನೆ
    ಎಲ್ಲವೂ ಇದ್ದು ಇಲ್ಲದಂತೆ
    ಬೀಳುತ್ತಿವೆ ಪುಟಗಳ ಮೇಲೆ ಮೌನವಾಗಿ

ಒಂದು ನಿಮಿಷದ ಹಿಂದೆ
ಕೆಳಗೆ ಬೀದಿಯಲ್ಲಿ ಕಾರು ರೇಸು
ಎಲ್ಲ ಮನೆಗಳ ರೇಸು ಮುಗಿಯಿತು
            ಈಗ ನನ್ನ ರೇಸು
ನನ್ನ ಮುಂಚಿನಾಲೋಚನೆಗಳ ನಡುವೆ
ನಕ್ಷತ್ರಗಳು ತಲೆಯ ಮೇಲೆ
            ಎಂಥ ಮೌನದ ತೋಟ.

ನಾನೊಂದು ಮರವಾಗಿ ಮಾತಾಡುವೆ
ನನ್ನ ತುಂಬೆಲ್ಲ ಎಲೆಗಳದೆ ಕಣ್ಣುಗಳು
ಅದೇ ಒಂದು ಸುದ್ದಿಯಾಗಿ ಗುಲ್ಲೆದ್ದು ಮುಗಿದಿದ್ದು
ಗುಂಪು ಗುಂಪೇ ಪ್ರತಿಮೆಗಳು
ಹೊಡೆದು ತಿರುಚಿ ಎಲ್ಲಕ್ಕೂ
ಕೊಡುವೆ ಹೊಸ ರೂಪ

ಕಪ್ಪು ಮೇಲೆ ಬಿಳುಪು
ತೋಟದ ಅಲ್ಫಾರ್ಥದ ಅಕ್ಷರಗಳು
ಲ್ಯಾಂಪಿನ ಬೆಳಕಲ್ಲಿ ನೆಟ್ಟದ್ದು
 ಕಾರು ರೇಸು ನಿರಂತರ
ನಿದ್ರೆಯ ಮಧ್ಯ ಹೊರವಲಯದಲ್ಲಿ
 ನನ್ನ ರೇಸು
ಆಲೋಚನೆಗಳನ್ನು ಬೆಂಬತ್ತಿದೆ
 ನನ್ನ ಹಾಗೂ ಬೇರೆಯವರ
ಹಳೆಯ ನೆನಪಿನ ಅಳಿದುಳಿದ ಭಾವ
ಹೆಸರುಗಳು
ಬೆಂಕಿ ಕಿಡಿಯಂಥ ನೆನಪು
ಮಧ್ಯರಾತ್ರಿ ಪಾರ್ಟಿಗಳ ನಗೆ
ಗಂಟೆಗಟ್ಟಲೆ ನೃತ್ಯ
ನಕ್ಷತ್ರ ಪುಂಜದ ಮೆರವಣಿಗೆ
 ಸಾಮಾನ್ಯ ಸ್ಥಳದಲ್ಲಿ
ನಾನು ನಂಬಲೇ ಮನುಷ್ಯನನ್ನು?
ಅಥವಾ ನಕ್ಷತ್ರಗಳನ್ನು?
ನನ್ನ ನಂಬುಗೆ
 (ಇಲ್ಲಿಂದ ನಾನಿಟ್ಟ ಚಿಕ್ಕಿಗಳ ಸಾಲು)
 ನೋಡುತ್ತೇನೆ

ಹವೆಯಿಂದ ಹಾಳುಬಿದ್ದ ಕಂಬಗಳ ಪಡಸಾಲೆ
ದುಃಖಾರ್ತರು ಕೆತ್ತಿದ ಶಿಲ್ಪಾಕೃತಿ
ಎರಡು ಸಾಲಿನಲ್ಲಿ ಭಿಕ್ಷುಕರು
 ಅಲ್ಲಿಗೆ ನಿಂತು
ಸಿಂಹಾಸನಾರೋಹಣದ ಮಾಡಿದ ದೊರೆ
 ಸುತ್ತುವರೆದಿರುವ
ಬಂದು ಹೋಗುವವರ ಸುಗಂಧ ನರುಗಂಪು
ಎಲ್ಲರೂ ವ್ಯಭಿಚಾರಿಗಳೋ ಎಂಬಂತೆ

ದೇಹ ಶುದ್ಧಿ ಮಾಡಿಕೊಂಡ ಮಿತಿಮೀರಿದ
ಶ್ರೀಗಂಧ ದುಂಡುಮಲ್ಲಿಗೆಯ ಶಿಸ್ತು ಸಿಂಗಾರ
ಬರಿ-ಭ್ರಾಂತಿಯನು ಹರಡಿಸುವ ತೋರಿಕೆಯ ರೂಪ

ವಿವಿಧ ಸ್ವರೂಪಗಳ ಜ್ವರ
ಕಾಲದ ಜ್ವರ
ಚೆಲುವಿನೊಳಗಣ ಮೇಳ
ಜಗತ್ತಿಡೀ ಅಡಗಿರುವ ನವಿಲಬಾಲ
ಅದರ ಅಸಂಖ್ಯಾತ ಕಣ್ಣುಗಳಲ್ಲಿ

ಇತರ ಕಣ್ಣುಬಿಂಬ ಪ್ರತಿಬಿಂಬ
ಹೊಂದಿಸಿಟ್ಟಾಗ
ಪ್ರತಿಫಲನಗೊಂಡಂಥ ಒಂಟಿಕಣ್ಣು

ಒಬ್ಬೊಂಟಿ ಸೂರ್ಯ
ಬಚ್ಚಿಟ್ಟುಕೊಂಡ
ಪಾರದರ್ಶಕ ಪರದೆ ಹಿಂದೆ
'ಕಾಲ' ವೆಂಬುದ್ದೇ ಅದ್ಭುತ
ಝಗ್ಗನೆ ಪ್ರಜ್ವಲಿಸುವ ಅಗ್ನಿಜ್ವಾಲೆ

ಕಲ್ಲುಗಳು, ಹೆಂಗಸರು, ನೀರು
ಎಲ್ಲಕ್ಕೂ ಶಿಲಾಕೃತಿಯ ರೂಪ
ರೂಪಕ್ಕೆ ತಕ್ಕ ವರ್ಣವಿನ್ಯಾಸ
ಆಕೃತಿಗಳೆಲ್ಲ ಅಗ್ನಿಗಾಹುತಿಯಾಗಿ ಮಾಯ

ಲೋಹ ಮರಗಳ ಸಂಗೀತ
ದೇವನ ಗೂಡಾದ
ಗರ್ಭಗುಡಿಯಲ್ಲಿ
ಸೂರ್ಯನನ್ನ ಹೊಸೆದು ಮಾಡಿದ ಹಾಡು

ಜಲವಾಯುವಿನಾಲಿಂಗನದಂಥ ಸಂಗೀತ
ಈ ಎಲ್ಲ ಗಡಿಬಿಡಿಗಳ ನಡುವೆ

ಒಂದು ವಸ್ತುವಿಷಯ
ಈ ನೆರಳಾಟದ ಮಾನವಧ್ವನಿ

ಮಧ್ಯಾಹ್ನ ಬಿಸುವೇರಿ ಕಾದಿರುವ ಚಂದ್ರ
ದೇಹದಿಂದ ಕಳಚಿಕೊಂಡ ಆತ್ಮದ ಆರೋಪ
(ನಾನೇನು ಬರೆವೆನೋ ಅದರ ಇರಿವು ನನಗಿಲ್ಲ
ಸಾಲುಗಳ ನಡುವೆ ಮಾತ್ರ ನನ್ನ ನೋಟ
ನನ್ನ ಪ್ರತಿಮೆಯು ಒಂದು ಹಚ್ಚಿಟ್ಟ ದೀಪ
ನಟ್ಟಿರುಳಿನ ನಡುವೆ)

ಠಕ್ಕು ಮಾಂತ್ರಿಕನೊಬ್ಬ
ಸಂಪೂರ್ಣ ತಲೆಬಾಗಿ ಕಪಿಯಂತೆ ಕುಳಿತು

ಕೊಕ್ಕೆ ಹಾಕಿಟ್ಟ ಕುಂಡದಲ್ಲಿ
ತುಂಬಿಟ್ಟಿದ್ದಾನೆ ಮಂಕುಬೂದಿ
ನಕ್ಕನೊಬ್ಬ ಸಾಧು ನನ್ನತ್ತ ನೋಡಿ
ಮತ್ತೊಂದು ತೀರದಿಂದ ನೆಟ್ಟನೋಟಕ್ಕೆ ಗುರಿಮಾಡಿ
ದೂರ ಬಹುದೂರ
ದಿಟ್ಟಿಸಿ ನೋಡುತ್ತಾನೆ, ಕಾಡುಪ್ರಾಣಿಯಂತೆ, ಸನ್ಯಾಸಿಯಂತೆ
ನಗ್ನ, ಹಾರಾಡುವ ಕೂದಲು ಭಸ್ಮಲೇಪಿತವ
ಕ್ಷಕಿರಣದಂಥ ನೆಟ್ಟ ನೋಟದ ಕಾಂತಿಯುಕ್ಕುವ
ಖನಿಜ ಹೊಳಪಿನ ಕಣ್ಣು
ಅವನೊಡನೆ ಈಗ ನನಗೆ ಮಾತಾಡುವಾಸೆ
ಅವನ ಅಂತರಾಳದಿಂದ ಹೊಮ್ಮಿ ಮೊಳಗುವ ಧ್ವನಿ ಕೇಳುವಾಸೆ
ಆದರೆ ಹೊರಟು ಹೋದ ಹೊರಟೇ ಹೋದ

ಎತ್ತ ಹೊರಟ ಎಲ್ಲಿಗೆ?
ಅವನಿರುವ ಠಾವೆಲ್ಲಿ?
ಅವನ ಅಸ್ತಿತ್ವದ ಅರ್ಥವೇನು?
ಈ ತೆರೆದ ಶೂನ್ಯ ಬಯಲಿನ ಯಾವ ಪ್ರಪಂಚಕ್ಕಿವ ಸೇರಿದವ?
ನಾ ಬರೆವ ಒಂದೊಂದು ಅಕ್ಷರವೂ
ನನ್ನ ನೆನಪಿನ ಮೊಳಕೆ
ಹೇರುತ್ತಿದೆ ಕಾಲವನ್ನು
ಮತ್ತೆ ಪುನರಾವರ್ತನೆಯ ಹಗಲು
ಹೋಯಿತು ಎಲ್ಲಿ? ಹೊರಟೇ ಹೋಯಿತು
ಸಂನ್ಯಾಸಿ, ಆ ಠಕ್ಕ ಸಂನ್ಯಾಸಿ
ಹಸಿವಲ್ಲೊ ಮಾದಕ ವ್ಯಸನದಲ್ಲೋ ಪರಮಾನಂದ
ಅವನು ನೋಡಿರಬಹುದು ಕೃಷ್ಣನನ್ನು
ಝುಗ ಝುಗಿಸುವ ನೀಲಮರ
ಕಪ್ಪು ನೀರಿನ ಚಿಲುಮೆ ಅಲೆಗಳ
ಬಂಡೆಗಳ ಬಿರುಕಲ್ಲೆ ಶುಷ್ಕ ದಾಹ
ಅವನು ಹೆಣ್ಣರೂಪವನ್ನೂ ತೊಟ್ಟು ಮೆರೆದ
ದಿಗ್ಭ್ರಮೆ ಹುಟ್ಟಿಸುವ ನಿರಾಕಾರಿ ಅವನು
ಸಂಚರಿಸುತ್ತಾನೆ ಘಟ್ಟ ತೀರಗಳಲ್ಲಿ
ಹೆಣವೆಲ್ಲಿ ಸುಡುವರೋ ಅಂಥ ಠಾವಲ್ಲಿ
ನಿರ್ಜನ ರಸ್ತೆಗಳು
ಮನೆ ಮತ್ತು ಅವುಗಳ ನೆರಳು
ಎಲ್ಲಾ ಒಂದೇ ನಮೂನೆ ಆದರೂ ಬೇರೆಬೇರೆ
ಪುನಃ ಕಾರುರೇಸಿನ ಆರಂಭ
ನಾನು ಮೌನ
ನಾಗಾಲೋಟದ ಆಲೋಚನೆಗಳೊಂದಿಗೆ
ಎಲ್ಲಿ ಹೋದರು? ಸನ್ಯಾಸಿ, ಭಿಕ್ಷುಕ, ರಾಜ, ಹಾಳಾದ್ದು
ಎಲ್ಲಾ ಒಂದೇ
ಸದಾಕಾಲವೂ ಒಂದೇ

ಈ ಎಲ್ಲ ಇರಬೇಕಾದ್ದು ಒಬ್ಬರಲ್ಲೆ
ಎಲ್ಲರಿದನು ಒಳಗೊಂಡಿರಲೇಬೇಕು
ಗುರಿಯಿಲ್ಲದೆ ಅಲೆಯುತ್ತಾ
ಎತ್ತಹೋದವು ಎತ್ತಹೋದವು?
ಆ ಅವನೆ ಮತ್ತೊಂದು ತೀರದಲ್ಲಿ ನೆಟ್ಟುದೃಷ್ಟಿ
ಅವನ ಕೊನೆಯಿಲ್ಲದ ಬೇಸರದ ನಡುಹಗಲು
ನಾನು ಅಲೆದಾಡುವ ಸಮಯದಲ್ಲಿ
ಕಾರು ರೇಸುಗಳು, ಮನೆಮನೆಗಳ ನಡುವೆ
ಲ್ಯಾಂಪಿನ ಬೆಳಕಲ್ಲಿ ನನ್ನ ಬರಹ
ಲುಪ್ತವಾಗುತ್ತಿರುವ ನಿತ್ಯಸತ್ಯಗಳು
ಅವುಗಳ ದೂರದ ಹೊರಪ್ರಾಂತ್ಯಗಳು
ನನ್ನ ವಸ್ತು ವಿಷಯವಲ್ಲ
ಹಸಿದಿರುವೆ ನಾನು ಬಾಳಿಗಾಗಿ ಮಾತ್ರವಲ್ಲ ಸಾವಿಗಾಗಿ
ನನಗೆ ತಿಳಿದಂತೆ ನಾನು ಬರೆದಿಡುವೆ
ಕಾಲವೇ ರೂಪು ತಳೆದು ಬಂದಾಗ
ಅದರ ಕ್ರಿಯೆ
ಅದರ ಚಲನಶೀಲತೆಯಲ್ಲಿ ಎಲ್ಲದರ ಇರವು
ಅದನ್ನು ಕೆತ್ತಿದ್ದೂ ಆಯಿತು ಹಾಳುಗೆಡವಿದ್ದು ಆಯಿತು
ಆಂತರಿಕ ಪ್ರಜ್ಞೆ ಮತ್ತು ಕೈಗಳು ಕಾಲವನ್ನೆ ಹಿಡಿದಿಡಲು
ಆಯಿತದೇ ಇತಿಹಾಸ
ನೆನಪುಗಳು ತಮ್ಮನ್ನು ತಾವೆ ಕಂಡುಕೊಂಡಂತೆ
ನಾನು ಏಕಾಂಗಿಯಲ್ಲ
ನಿನ್ನೊಡನೆ ನಿರಂತರ ನನ್ನ ಮಾತು
ನನ್ನೊಡನೆ ನಿರಂತರ ನಿನ್ನ ಮಾತು
ಕತ್ತಲತ್ತ ನಾನು ಸರಿದು
ಹೊಸ ಸಂಕೇತಗಳ ಹುಟ್ಟುಹಾಕುವೆನು.

ಎಲಿಫೆಂಟಾದಲ್ಲಿ ಭಾನುವಾರ

ಭವ್ಯ ಶಿಲ್ಪಾಕೃತಿಯ ಪಾದದಡಿಯಲ್ಲೆ ಪ್ರಾತಃಕಾಲ
ಮಹಮದೀಯ ಪೋರ್ಚುಗೀಸರಿಂದ ಭಗ್ನಭಿನ್ನ
ಆಕೃತಿಗಳ ಊನಾಂಗಳು ಕಾಗೆ ಕುನ್ನಿಗಳ ತಿನಿಸುತಾಣ
ಹಾಳುಬಡಿದ ಅಸಂಖ್ಯಾತ ಮೂರ್ತ ರೂಪಗಳು
ಬಿದ್ದಿವೆ ರಾಶಿರಾಶಿ ಪೇರಿಸಿಟ್ಟಂತೆ
ಜೀವಕಳೆ ತಳೆದು ಅನಾದಿಕಾಲದಿಂದ ಮೆರೆದ ಶಿಲ್ಪಗಳೇ
ಇಂದು ವಿಕಾರ ಸ್ವರೂಪದ ಪ್ರತಿಮೆಗಳು ನರಕ ಜೀವಗಳ
ಸ್ವಾಗತಗೀತೆ

ಶಿವಪಾರ್ವತಿಯರೇ, ನಿಮಗೆ ಪೂಜಿಸುವೆವು ನಾವು
ದೇವರಂಥಲ್ಲ, ಪ್ರತಿಮೆಗಳಂತೆ
ದೈವತ್ವವುಳ್ಳ ಮಾನವರಂತೆ
ಊಳಿಗದ ಪದ್ಧತಿಯನೆ ವಿಜೃಂಭಿಸಿದ ಶಿವ ನೀನು
ನಿನ್ನ ನಾಲ್ಕೂ ಕೈಗಳೂ ನಾಲ್ಕು ನದಿಗಳು
ನಿನ್ನ ವಸಂತಗಳೇ ಚಿಲುಮೆಯಾಗಿ ಚಿಮ್ಮಿದ
ನೀರಲ್ಲೆ ಮಿಂದ ಪರಿಶುದ್ಧ ಚೆಲುವೆ ಪಾರ್ವತಿ
ಶಿಲ್ಪಾಕೃತಿಯಂಥ ಅಂಗಭಂಗಿಯ ನಿಲುವು
ಸೂರ್ಯನಡಿಯಲ್ಲೆ ಕುದಿವ ಕಡಲು
ಶಿವನ ತುಟಿಯಲ್ಲಿರಳಿದ ಮಂದಸ್ಮಿತ
ಆ ಕಡಲಿನುದ್ದ ಮೈಚಾಚಿ ಮಲಗಿದ್ದ ಅಗ್ನಿಜ್ವಾಲೆ
ಪಾರ್ವತಿಯ ಹೆಜ್ಜೆ ಗುರುತು ಆ ಕಡಲ ಮೇಲೆ ಶಿವಪಾರ್ವತಿ

ಅವಳೇ ನನ್ನ ಹೆಂಡತಿ

ಈ ನಾನು ಮತ್ತೇನನ್ನೂ ನಿನ್ನ ಕೇಳುವುದಿಲ್ಲ
ಅನ್ಯ ಪ್ರಪಂಚದಲ್ಲಿ ಮಾತ್ರ
ಬೆಳಕು ಕಡಲಿನಲ್ಲಿ,
ಬರಿಯದಾದ ನೆರಳು, ಕಡಲ ತೆರೆಗಳ ಮೇಲೆ ನಿದ್ರಿಸಿದ ಭೂಮಿ.

ಕಪ್ಪು ಮತ್ತು ಬಿಳುಪುಕಲ್ಲು

ಭೂತಳದ ಒಳಪದರದಲ್ಲಿ
ಕಲ್ಲುಬೀಜವನ್ನು ಬಿತ್ತಲು
ಆಕಾಶದುದ್ದಕ್ಕೂ ಮೊಳಕು ಬೆಳದ ಕಲ್ಲು
ಕಲ್ಲೊಳಗೆ ನಿದ್ರಿಸಿದ್ದ ಮುದುಕನೊಬ್ಬ
ಅವನು ಕಣ್ಣೆವೆ ತೆರೆದು ನೋಡಿದರೆ
ಕಲ್ಲು ಅಲ್ಲೆ ಸ್ಫೋಟ.
ಸುಳಿಗಾಳಿಗೆ ಮೂಡಿತ್ತು ಕೊಕ್ಕುರೆಕ್ಕೆ
                    ಅದೇ ಹೆಣ್ಣಾಗಿ

ದಾರಿದೂರ ಹರಿದು
        ಚಳಿಗಾಲದ ಚದುರಿದ ಗಡ್ಡದ ನಡುವೆ
ಕಲ್ಲು ಹಿಂದುಳಿದು
        ಜ್ವಾಲೆ ಉರಿದು
        ಕಣ್ಣ ಚೌಕಟ್ಟಿನಲ್ಲೆ
        ಹೂವುಗಳು
ನಿನ್ನ ಅಂಗೈಯ ಮೇಲೆ
ಆಡಿತ್ತು ಮಾತು
ತೂಗಾಡುತ್ತಾ
        ನಿನ್ನ ಎದೆಯ ನಡುವೆ
ಸಲಿಲ ಭಾಷೆಯ
        ಕಲ್ಲು ಫಲಿಸಿ
ಅದರಲ್ಲಡಗಿದ
        ಬೀಜ ಹಾಡುವುದು
        ಅವುಗಳು ಒಟ್ಟು ಏಳು

ಏಳು ಸೋದರಿಯರು
ಏಳು ವಿಷದ ಹಾವುಗಳು
ಏಳು ಹನಿಗಳ ಹಸಿರು
ಏಳು ಶಬ್ದಗಳು
ನಿದ್ರಿಸುತ್ತಿದೆ
ನದಿಯ ಹಾಸು(ಗೆ) ಗಾಜಿನೊಳಗೆ
ಏಳು ನಾಳದೆಳೆಗಳ ನೀರು
ಕೇಂದ್ರ ಬಿಂದುವಿನಲ್ಲಿ
ಆ ಕಲ್ಲಿನ ನೋಟ,
ಬಿರಿದು ಬಾಯ್ದೆರೆದು ಸ್ಫೋಟ.

ಬೆಳಗಿನ ಬೆಂಕಿ

ಗಾಳಿ
ಭೂಗರ್ಭದ ಪದರದಲ್ಲಿ
ಸುತ್ತುತ್ತಿರುವ ಗ್ರಹಮಂಡದಲ್ಲಿ
ಸೃಷ್ಟಿಸುತ್ತದೆ ಅಥವಾ ಇಲ್ಲ
ಅದರ ಅಗೋಚರ ಕಟ್ಟಡವೇ
ಈ ಮನುಷ್ಯ.
ಅವನ ಭಾಷೆ ಕಾಣದೊಂದು ಬೀಜ
ಉರಿಯುತ್ತಿದೆ
ಶೂನ್ಯದ ಅಂಗೈಯ ಮೇಲೆ
ಅಕ್ಷರಗಳು ಶಾಖದಿ ಪ್ರಜ್ವಲಿಸುತ್ತ ಬೆಳಗಿ
ಅವು ಗಿಡಗಳಾಗಿ
ಅದರ ಬೇರು
ಮೌನ ಮುರಿದಾಗ
ಅದರ ಕೊಂಬೆಗಳು
ಕಟ್ಟಿ ನಿರ್ಮಿಸಿದ ಶಬ್ದಸೌಧಗಳು
ಅಕ್ಷರಗಳು
ಹುಬ್ಬಲ್ಲಿ ಬಿಂದು ಹಣ್ಣಾಗಿ
ಬಾಯಲ್ಲಿ ಅರಳಿ ಹೂವಾಗಿ
ಅದರ ಬೇರುಗಳು
ಇರುಳನ್ನೆ ಕುಡಿದು ಬೆಳಗನ್ನೆ ತಿಂದಾಗ
ಭಾಷೆಗಳು
ಶಾಖದಿಂದ ಪ್ರಜ್ವಲಿಸುವ ಮರ
ಮಳೆಯಲ್ಲಿ ಆ ಎಲೆಗಳ
ಹಸಿರ ಮಿಂಚು ಬೆಳಕು
ರೇಖಾವಿನ್ಯಾಸ ಪ್ರತಿಧ್ವನಿ
ಬಿಳಿಯ ಹಾಳೆಯ ಮೇಲೆ
ಕವನವು ತನ್ನಿಂದ ತಾನೇ ಬೆಳಗು ಮಾಡುವುದು
ಶೂನ್ಯದ ಅಂಗೈಯ ಮೇಲೆ.

ಮೈಸೂರಿನ ಬೀದಿಯಲ್ಲಿ

ನೀಲನಿಶ್ಚಲ ಬೆಟ್ಟ, ಕೆಂಪು ಬಯಲುಗಳು
ನೀಲಿಬಂಡೆಯಾವೃತ ಮೈದಾನ, ಒರಟು ಪಾಪಾಸುಕಳ್ಳಿ
ದಟ್ಟಕಾಡಿನ ಪೊದೆ-ಜನರು?
ಅವರ ಮೈಬಣ್ಣ ನಸುಗಪ್ಪೆ? ಅಥವಾ ಅವರು ಹೊದ್ದ
ಶಾಲು ಬಿಳುಪೆ?
ಸಾಮಾನು ಹೊತ್ತು ಮಾರುವವರ ಊರು, ಎತ್ತರದ ಆಕಾಶ
ವಿಸ್ತಾರ ಬಯಲುಗಳ ನಾಡು,
ಕನಸು ಕಟ್ಟಲು ತಕ್ಕ ಊರು, ಕುದುರೆ ಸವಾರರ ಬೀಡು.
ಹಸಿವಿಂದ ಕಂಗೆಟ್ಟವರು, ಸೊಂಪಾಗಿ ಬೆಳೆದ ಹೆಂಗಸರು ಮಕ್ಕಳು
ದುಂಡುಮೊಲೆ ದಪ್ಪ ಪೃಷ್ಠ, ಆಭರಣ ತೊಟ್ಟರೂ ಬರಿಗಾಲ ನಡಿಗೆ.
ಗಾಡಿಕಾರ್ತಿಯರು ತೊಟ್ಟ ಝಗಝಗಿಸುವ ಮೆಜೆಂಟಾ ಉಡಿಗೆ
ಹಚ್ಚೆಹೊಯ್ಯಿಸಿಕೊಂಡ ಹೆಣ್ಣುಗಂಡುಗಳು
ಅಸಂಖ್ಯ ಕಣ್ನೋಟಗಳ ಮಿಲನ, ತಣ್ಣನೆಯ ನೋಟ
ಗಜಿಬಿಜಿ ಅಸ್ಪಷ್ಟ ಮಾತುಗಳು, ನಿಗೂಢ
ಆದರೆ ಟಿಪ್ಪುಸುಲ್ತಾನ್ ಅವ ಮೈಸೂರಿನ ಹುಲಿ.

ಚಿತ್ರಕಲಾಕಾರ ಸ್ವಾಮಿನಾಥನ್

ಕೈಯಲ್ಲಿ ತುಂಡುಬಟ್ಟೆ ಜತೆಗೆ ಚೂರಿ
ತೀಕ್ಷ್ಣ ಆಲೋಚನೆ,
ಭೀಕರಗೂಳಿ, ಎದುರು
ಬಿಳಿಯ ಭಿತ್ತಿ ಅದರೆದುರು ಬರಿಶೂನ್ಯ
ಚಿಮ್ಮುವ ನೀರು
ನೀಲ ಉರಿಯುವ ಲೋಹ
ಅಗ್ನಿಶಿಖೆ ಶಿಲಾಸ್ಫಟಿಕ
ಕಡಲಿನಲ್ಲಿ ಹುಟ್ಟಿದ ಹಸಿರು ಸಸ್ಯ
ಅದರಿಂದ ಹೊಮ್ಮಿದ ಹೊಳಪು ಬಣ್ಣ
ಕೈಯಲ್ಲಿ ಬಟ್ಟೆತುಂಡು ಜನತೆಗೆ ಚೂರಿ
ಕುಂಚ ಕೈಯಲಿಲ್ಲ
ಕೆಂಡಮಂಡಲ ಸೂರ್ಯನ ಜಾಗೃತಾವಸ್ಥೆ,
ಜಗತ್ತೆಂಬ ಖಾಲಿ ಮುಖದೆದುರು
ಚಿಮ್ಮುವ ನೀರು
ಸರ್ಪನೃತ್ಯಗತಿ ತರಂಗಗಳು
ಕೊರೆದ ಚಿತ್ರಕಂಪನಗಳ ಖಾಲಿ ಹಾಳೆಗಳು
ತ್ರಿಕೋನಾಕಾರದ
ನಿಗೂಢರಹಸ್ಯಗಳ

ಕಪ್ಪು ಪೀಠಕ್ಕೆ ನೆಟ್ಟ ಬಿರುಸುಬಾಣ
ಕೋಪೋದ್ರಿಕ್ತ ವರ್ಣಮಾಲೆ
ಕಪ್ಪು ಇಂಕಿನ ಬೊಟ್ಟು, ಜೇನು ರಕ್ತ
ತುಂಡುಬಟ್ಟೆಯ ಜತೆಗೆ ಚೂರಿ
ಚಿಮ್ಮುವ ನೀರು
ಮೆಕ್ಸಿಕನ್ನರ ಕೆಂಪು ಚೆಲ್ಲನೆ ಚಿಮ್ಮಿ
ಕಪ್ಪಾಗಿ ಮಾರ್ಪಟ್ಟು

ಇಂಡಿಯನ್ನರೆ ಕೆಂಪು ಚಿಲ್ಲನೆ ಚಿಮ್ಮಿ
ಕಪ್ಪಾಗಿ ಮಾರ್ಪಟ್ಟು
ಆ ತುಟಿಗಳು ಮತ್ತೂ ಕಾಳಗಪ್ಪಾದ
ಕಾಳಿಯಂತಾಗಿ
ಇದ್ದಲುಕಪ್ಪಾಗಿ ನಿನ್ನ ಕಣ್ಣಿನ ಇಕ್ಕೆಲಗಳಲ್ಲೂ
ರಾತ್ರಿರಾಣಿಯರ, ಆಸೆ ಇರುಳುಗಳು
ಕಪ್ಪುಕಾಳಿ
ಹೊಂಬಣ್ಣ ಹೊಳೆವ ಉರಿವ ಜೀವಜಂತುಗಳು
ಕಾವಿಬಣ್ಣ ತೊಟ್ಟ ಕೆಳವರ್ಗದ ಡೋಲು ಬಡಿತ
ಕಪ್ಪುಕಾಡುಗಳ ಹಸಿರು ಮೈಮಾಟ
ನೀಲಗಪ್ಪಿನ ಕಾಳಿ ಮೈಬಣ್ಣ ತಾಳಿ
ಕಾಮೋದ್ರಿಕ್ತ ಗ್ಯಾಡಲೂಪಿ ಪರ್ವತಶ್ರೇಣಿ,
ತುಂಡುಬಟ್ಟೆ ಮತ್ತು ಚೂರಿ
ತ್ರಿಕೋನಾಕಾರ ಎದುರು
ಕಣ್ಣು ಸ್ಫೋಟಿಸಿದಾಗ
ಚಿಲುಮೆನೀರಿನ ಗುರುತು
ಹಾವುಹೆಜ್ಜೆಯ ಜಲತರಂಗದ ಅಲೆ ಮುನ್ನುಗ್ಗಿ
ಆ ಅಲೆಗಳೇ ಇನ್ನೂ ಹತ್ತಿರ ಕಂಡಂತೆ ಕಾಣ್ಕೆ ಹೊಳಹು
ಅದರ ಮೈಬಣ್ಣ ಚಿತ್ರವಿನ್ಯಾಸಗಳು
ಒಡೆಯಲಾಗದ ಒಗಟು, ನಗ್ನವೇಷ.

ಉದಯಪುರದಲ್ಲಿ ಒಂದು ದಿನ

ಸ್ಪಟಕಶಿಲೆ, ಶ್ವೇತ ಅರಮನೆ
ಬಿಳುಪಿನ ಮೇಲೆ ಕಪ್ಪುಕೊಳ
ಲಿಂಗ ಮತ್ತು ಯೋನಿ

ಸಕಲ ದೇವರದೇವನೇ
ಈ ರಾತ್ರಿ ರಕ್ಷಿಸು ನನ್ನ

ತಂಪಾದ ಮೇಲುಪ್ಪರಿಗೆ
ನೀನು ಅತೀತ, ವರ್ಣಾನಾತೀತ
ನಿನ್ನ ಹೊಗಳಲು ಶಬ್ದಗಳೇ ಇಲ್ಲ

ಪರಲೋಕದ ನಕ್ಷತ್ರಗಳೇ
ನಿಮ್ಮದೇ ಈ ಇರುಳು

ನಾನು ಮುಳುಗುತ್ತೇನೆ ಪುನಃ ಮೂಡುತ್ತೇನೆ
ತೊಳಗುತ್ತೇನೆ, ನೆನೆದು ತೊಪ್ಪೆಯಾಗುತ್ತೇನೆ
ನೀನು ಏಕಶರೀರಿಯೇ, ಏಕಾಂಗಿಯೇ?

ನೀರು ಹಕ್ಕಿಗಳು ನೀರ ಮೇಲೆ
ಅದರ ಕಣ್ಣರಪ್ಪೆಯಡಿಯಲ್ಲಿ ಮುಂಜಾವು

ಸಾವಿನ ಉನ್ನತಾವಸ್ಥೆ
ಸ್ಪಟಿಕ ಶಿಲೆ ಸ್ಫೋಟಿಸಿದಾಗ
ಆತ್ಮ ವಿಲೀನವಾಯಿತು ಆಗ

ಮೌನವಾಳುತ್ತಿದ್ದ ಅರಮನೆಗಳೆಲ್ಲವೂ
ಬಿಳಿಯ ಪ್ರವಾಹದಲ್ಲಿ ಕೊಚ್ಚಿಹೋದವು ಎತ್ತ?

ಹೆಂಗಸರು ಮಕ್ಕಳು
ಹಾದಿಬೀದಿಗಳಲ್ಲಿ
ಚದುರಿ ಚಲ್ಲಾಡಿದರು ಹಣ್ಣಿನಂತೆ

ಹರಕು ಚಿಂದಿಯ ಜನರೋ ಬೆಳಕು ಕಿರಣಗಳೋ?
ಮೆರವಣಿಗೆ ಹೊರಟರು ಬಯಲಲ್ಲಿ ದೂರ

ತಣ್ಣಗೆ ಹೊಳೆವ ಬೆಳ್ಳಿ
ಝಣಝಣ ಗೆಜ್ಜೆನಿನಾದ
ಕಡಗ ನಡುಪಟ್ಟಿಗಳ ಧರಿಸಿ

ಬಾಡಿಗೆಯ ಒಡವೆಗಳ ತೊಟ್ಟ
ಮದುವೆಯ ಗಂಡು ಹೊರಟ ದಿಬ್ಬಣಕೆ

ಪರಿಶುದ್ಧ ಬಟ್ಟೆಗಳು
ಬಂಡೆಗಳ ಮೇಲೆ ಹಾಸಿ
ಒಬ್ಬರನ್ನೊಬ್ಬರು ನೋಡುತ್ತಾರೆ, ಮಾತಿಲ್ಲ

ಪುಟ್ಟ ದ್ವೀಪದಲ್ಲಿ
ಚೀರಾಡುವ ಕೆಂಪು ಕಪಿಗಳು

ಗೋಡೆ ಬದಿಗೆ ನೇತಾಡುತ್ತಾನೆ
ಕೆಂಡಗಣ್ಣಿನ ಕ್ರೋಧ ಸೂರ್ಯ
ಬೆಳಕಿನ ಬಲೆಯ ನೇಯುತ್ತಾನೆ

ನನ್ನ ತಲೆ ಕಾದ ಮತ್ತೊಂದು ಸೂರ್ಯ
ಕೆಟ್ಟ ಆಲೋಚನೆಗಳ ಸಂತೆಮಾಳ

ನೊಣಗಳು, ರಕ್ತ
ಪುಟ್ಟ ಆಡುಮರಿಯೊಂದು
ಕಾಳಿಯ ಕೈ ತಪ್ಪಿಹೋಯಿತು

ಆ ಸೃಷ್ಟಿಕರ್ತ ದೇವನ ಮನುಜರು ಮೃಗಗಳು
ಒಂದೇ ತಟ್ಟೆಯಲ್ಲಿ ಕೂತು ಉಣ್ಣುತ್ತಾರೆ

ನಿಸ್ತೇಜ ನಿಂತ ಆ ದೇವನ ಸುತ್ತ
ಕಾಳಿಕಾದೇವಿಯು ಕುಣಿಯುವಳು
ತಲೆ ತರಿದು ಹಾಕುವರು

ಶಾಖದ ಮೊಟ್ಟೆ ಒಡೆದು ಬಂದ ಗಳಿಗೆ
ಮಾವಿನಹಣ್ಣುಗಳೆಲ್ಲ ಮಾಗಿ ಕೊಳತು....

ನಿನ್ನ ವದನವೇ ಒಂದು ಸರೋವರ
ಪ್ರಶಾಂತ ಆಲೋಚನಾರಹಿತ ಕೊಳ
ಅಲ್ಲಿ ಟ್ರಾಟ್ ಮೀನುಗಳು ಚಿಮ್ಮಿ ಆಡುವುವು

ನೀಲ ಮೇಲೆ ತೇಲುವ ಜ್ಯೋತಿಗಳು
ಆತ್ಮಗಳ ಸಮುದ್ರಯಾನ

ಗರಗಸದಂತೆ ಹೊಳೆವ ಬಯಲು
ಹೊಂಬಣ್ಣದ ಬಯಲು ಬಿರುಕು ಬಿಟ್ಟಿತು...
ನಿನ್ನ ಬಟ್ಟೆಯ ಹಾಗೆ

ನನ್ನ ಆಸೆಯ ದೀಪದ ಹಣತೆ
ನಿನ್ನ ನೆರಳುಗಳ ದೇಹದಲ್ಲಿ

ಬದುಕಿರುವ ಅಸ್ಥಿಪಂಜರಗಳು
ಒಂದರೊಡನೊಂದು ಅಪ್ಪಿಹಿಡಿದು
ಶೂನ್ಯಸ್ಥಳದ ಮೇಲೆ....

ಶೂನ್ಯಾಕಾಶವು ನಮ್ಮನ್ನು ನುಚ್ಚುನೂರಾಗಿಸಿತು
ಜೀವಜಲ ನಮ್ಮನ್ನು ಬದುಕುಳಿಸಿತು.

ನಾನು ಕಣ್ತೆರೆದು ನೋಡಿದೆನು
ಅಸಂಖ್ಯ ಮರಗಿಡಗಳು
ಈ ಇರುಳಲ್ಲೆ ಜನಿಸಿದವು

ನಾನು ನಿನ್ನ ನೋಡಿದ್ದೇನು? ನಾನು ಹೇಳುವುದೇನು
ಸಮಸ್ತವನ್ನೂ ಸೂರ್ಯನು ಒಮ್ಮೆಗೆ, ಅಳಿಸಿ ಹಾಕುವನು

ಹಿಮಾಚಲಪ್ರದೇಶ- ೧

ನಾನು ನೋಡಿದೆ,
ಹಿಮಾಲಯ ಪರ್ವತ ಬುಡದಿಂದ
ಮೇಲೆ ಕ್ಷಿತಿಜ
ಕುದುರೆಯ ಅಸ್ಥಿಪಂಜರ ಒಳಗೆ
ದುಂಬಿಗಳ ಉದ್ರಿಕ್ತ ಗುಂಜಾರವ

ನಾನು ನೋಡಿದೆ,
ತಲೆತಿರುಗಿ ಸ್ತಬ್ಧ, ಕಲ್ಲಲ್ಲಿ ಕಲ್ಲಾದೆ
ಆಸ್ಫಿಕ್ಸಿಯಾದ ತೂಗಾಡುವ ತೋಟಗಳು
ಅಲ್ಲಿ ಹುಲಿಪಟ್ಟೆಪಟ್ಟೆಯ ಚಿಟ್ಟೆ
ಚಲಿಸದೆಯೇ ಕುಳಿತಿದೆ ಪರಿಮಳ ಭರಣಿಯ ಮೇಲೆ

ನಾನು ನೋಡಿದೆ,
ಆ ಪರ್ವತದ ತುಂಬೆಲ್ಲ ಸಾಧುಸಂತರು
ಗಾಳಿ ಅಟ್ಟಾಡಿಸುವ ರಣಹದ್ದುಗಳು
ಅಸ್ಥಿಪಂಜರದೆಲುವು ಗೂಡಿನ ಹುಡುಗಿ, ಮುದುಕಿ,
ಹೊತ್ತು ತರುತ್ತಿದ್ದಾರೆ ಪರ್ವತಕ್ಕಿಂತ ದೊಡ್ಡ ಭಾರಚೀಲಗಳು

ಹಿಮಾಚಲಪ್ರದೇಶ- ೨

ನಮ್ಮದು
ಮುಡಿಕೊಟ್ಟ ತಲೆ ಮಡಿಪಂಚೆ
ಅತಿಪ್ರಾಚೀನ ಸಂಸ್ಕೃತಿಯ
ಜಡ್ಡುಗಟ್ಟಿದ
ನಾಗರೀಕತೆ
ಕಾಲುದಾರಿಯಲ್ಲಿ
ಅವನ ಉರಿವ ಕಾವಿಯ ಸನ್ಯಾಸಿ ವೇಷ
ಈ ಜಗತ್ತು
ಚಲಿಸುತಿದೆ
ಈ ನೆಲದ ಮೇಲೆ
ಚರಚರಗುಟ್ಟುವ ಚಪ್ಪಲಿಯ ಸದ್ದು
ಒಣಜಾಲಿ ಮುಳ್ಳುಗಳು
ಈ ಪವಿತ್ರ
ನೆಲದಲ್ಲಿ
ಅವನೇ ಒಂದು ನಡೆದಾಡುವ ವೇದ
ಮಂಕುಬೂದಿ ಕವಿದ ನೆಲ
ಮಾನವ
ಯೋಚಿಸಲು ಆರಂಭಿಸಿದ್ದು
ಬೆರಳೆಣಿಕೆಗೆ ಸಿಕ್ಕರೆ
ಐದುಸಾವಿರ ವರ್ಷಗಳ ಹಿಂದೆ
ವಿದ್ವಾಂಸರು ಇದ್ದರಿಲ್ಲಿ
ಇಲ್ಲೆ ಈ ಹಿಮಾಲಯದಲ್ಲಿ
ಜಗತ್ತಿನಲ್ಲೇ ಅತಿ ಚಿಕ್ಕವಯೋಮಾನದ ಪರ್ವತ ಶ್ರೇಣಿ

ಮಧುರೆ

ಬ್ರಿಟೀಶರ ಬಾರೊಂದರಲ್ಲಿ
ತಂಪು ಪಾನೀಯಗಳು, ಬ್ರಿಟೀಶರೇ ಅಲ್ಲಿಲ್ಲ
ನಮ್ಮ ಈ ಪವಿತ್ರ ಊರಿನಲ್ಲಿ ಗಗನಕ್ಕೇರಿದ ಬೆಲೆಗಳು
ಅವನು ಹೇಳಿದನು
ಕಿತ್ತಲೆರಸದ ಕೊನೆಗುಟುಕು ಹೀರುತ್ತ
ಈ ಪವಿತ್ರ ದೇಗುಲವು ಭಾರತದಲ್ಲೇ ಅತಿದೊಡ್ಡದು
ಮೀನಾಕ್ಷಿ, ಚಿಮ್ಮನ್ ದೇವತೆ
ನಿನ್ನ ಎರಡು ಕಣ್ಣುಗಳು ಎರಡು ಮೀನು
ಏಷ್ಯಾದಲ್ಲೇ ಉಪಖಂಡದಂತೆ
ಕೆ.ಜೆ.ಚಿದಂಬರಂ
ನನ್ನ ನಿಮ್ಮನ್ನು ಒಂದುಗೂಡಿಸಿದ ನೆಲ
ಮಹಾಲಿಂಗದ ನಿರ್ದೇಶಕರು ಅವರು
ಗ್ಯಾರೇಜು, ಪ್ರವಾಸಿಬಸ್ಸುಗಳ ಮರ್ಮ ಬಲ್ಲವರು.

ಕೊಚ್ಚಿನ್

ತುದಿಗಾಲಿನ ಮೇಲೆ ನಿಂತು
ಬಂದು ಹೋಗುವವರ ವೀಕ್ಷಿಸುತ್ತಿದೆ
ಕೊಕೊ ತೆಂಗು ಮರಗಳ ಗರಿಗಳು
ಬಿಳುಪು ಉದ್ದ ನಿಂತಂಥ
ಪೋರ್ಚುಗೀಸರ ಚರ್ಚು.

ನೊರೆಯ ಬಿಳುಪಿನ ಸೆರಗು
ಬಿಳಿ ಮೊಲ್ಲೆ ಮುಡಿಯಲ್ಲಿ
ಹೊನ್ನ ಕಿವಿರಿಂಗು
ಗಂಟೆ ಆರಕ್ಕೆ ಚರ್ಚಿಗೆ ಹೋಗುತ್ತಾರೆ
ಮೆಕ್ಸಿಕೋ, ಕ್ಯಾಡಿಜ್ ನಗರಗಳಲ್ಲಿ ಅಲ್ಲ
ತಿರುವಾಂಕೂರಿನಲ್ಲಿ.

ಜೋರಾಗಿ ಸ್ತೋತ್ರ ಹಾಡುತ್ತಾರೆ
ನಾಸ್ಟೋರಿಯನ್ ಮಠಾಧಿಪತಿ ಚರ್ಚಿನ ಮುಂದೆ
ಕೇಳುತ್ತಾ ನನ್ನ ಹೃದಯಬಡಿತವೇ ನಿಂತಂತಾಗುತ್ತಿದೆ

ಕ್ರಿಶ್ಚಿಯನ್ ಸ್ಮಶಾನಗಳ ಸಮಾಧಿಯ ಬಳಿಯಲ್ಲಿ
ಮೇಯುತ್ತಿವೆ ಅಲ್ಲಲ್ಲಿ
ಶೈವರ ಹಸುಗಳೇ ಇರಬೇಕು.

ಅದೇ ಕಣ್ಣುಗಳು ನಿಟ್ಟಿಸಿ ನೋಡುತ್ತಿವೆ, ಅದೇ ಉರಿಬಿಸಿಲು
ಬೋಗನ್‌ವಿಲ್ಲ ಗಿಡಗಳು ಅಸಂಖ್ಯ ಬಾಹುಗಳ ಚಾಚಿವೆ
ಅದರ ರೆಂಬೆಕೊಂಬೆ ಎಲಿಫೆಂಟಾಸಿಸ್ ತಾಗಿ ದಪ್ಪಗಾದ ಕಾಲುಗಳಂತೆ
ನಸುಗೆಂಪು ಕಡಲು ನಡುನಡುವೆ ಪಿತ್ತ ನೆತ್ತಿಗೇರಿ ತೂರಾಡುವ
ಈಚಲುಗರಿಗಳು

ಅಮೀರ್ ಖುಸ್ರುವಿನ ಸಮಾಧಿ

ಹಕ್ಕಿಗಳ ಭರಭಾರಕ್ಕೆ ಬಾಗಿ ಬಗ್ಗಿದ ಮರ
ಅದರ ಕೈ ಚಾಚಿ ಉರಿಬಿಸಿಲು ಒಡ್ಡಿಕೊಂಡ
ಹಂಬುಬಳ್ಳಿಗಳು ಶೋಕಗೀತೆ, ಪಾಚಿಗಟ್ಟಿದ ನೀರು
ವಿಷಹಸಿರು ಬಣ್ಣ, ಕೆಂಪುಗೋಡೆಯು ನಡುವೆ
ರಸ್ತೆ ಇಕ್ಕೆಲಗಳಲ್ಲಿ ಪಕ್ಷಿಧಾಮಕೆ ದಾರಿ
ಭಿಕ್ಷುಕರು, ಹೂವು, ಕುಷ್ಠರೋಗಿ, ಸ್ಫಟಿಕ ಶಿಲೆ

ಎರಡು ಸಮಾಧಿಗಳು ಅದರ ಕತೆಗಳೂ ಎರಡು
ನಿಜಾಮುದ್ದೀನ್ ಓಡಾಡುವ ಧರ್ಮಶಾಸ್ತ್ರಜ್ಞ
ಅಮೀರ್‌ಖುಸ್ರು, ಗಿಳಿ ನಾಲಿಗೆಯ
ಮಹಾಗಂಭೀರ ಸಂತಕವಿ
ನಕ್ಷತ್ರ, ಗೋಳಗುಮ್ಮಟದಿಂದ ಚಿಮ್ಮಿ
ಹೊಳೆದು ನೆಲಕ್ಕೂಗೆಯುವ ಸರೋವರದ ಅಂಚು
ಅಮೀರ್ ಖುಸ್ರುವೇ ಅನುಕರಿಸುವ ಗಿಳಿಯೆ

ಮಣ್ಣಿನ ಶೋಕವೋ ಬೆಳಕಧ್ವನಿಯೋ,
ಎರಡು ಅರ್ಥಗಳ ಒಂದು ನಿಮಿಷವೋ,
ಅಕ್ಷರಗಳು ಅಲೆದಾಡುವ ಬೆಂಕಿಯೋ,
ಅಲೋರೀಯಾದ ಕಡೆದ ಶಿಲ್ಪಾದಾಕೃತಿಯೋ
ಪ್ರತಿಪದ್ಯವೂ ಕಾಲ, ಉರಿವ ಕಾಲ.

ವಸ್ತುಗಳು ಹಾಗೂ ಪ್ರೇತಾತ್ಮಗಳು
ಪಡಿ ಪದಾರ್ಥಗಳು

ಷಟ್ಮುಖದ ಮರ ಗಾಜುಗಳು
ಶೂ ಪೆಟ್ಟಿಗೆಗಿಂತ ದೊಡ್ಡದು
ಆದರ ಒಳಗೆಲ್ಲ ಕತ್ತಲು ಹಾಗೂ ಬೆಳಕು.

ಪ್ರತಿನಿಮಿಷವು ಸ್ಮಾರಕಗಳು
ಪ್ರತಿನಿಮಿಷನೊಲ್ಲದೆ
ಇದ್ದೆಬಿಡುವುವು ಶಾಶ್ವತ ಪಂಜರದೊಳಗೆ.

ಬಿಳಿಶಿಲೆ, ಗುಂಡಿ, ಬೆರಳಕಾಪು, ದಾಳ
ಪಿನ್ನು, ಸ್ಟ್ಯಾಂಪು ಗಾಜಮಣಿಗಳು
ಆಯಾಕಾಲದ ಕತೆಯ ಹೇಳುವುದು.

ನೆನಪಿನ ಅಲೆಗಳು ಅಲೆಗಳಲ್ಲ ಪ್ರತಿಧ್ವನಿಗಳು
ಪೆಟ್ಟಿಗೆಯ ನಾಲ್ಕು ಮೂಲೆಗಳಲ್ಲಿ
ಬಚ್ಚಿಟ್ಟುಕೊಂಡು ಆಡುವ ನೆರಳಿಲ್ಲದ ಕನ್ಯೆಯರು.

ಕನ್ನಡಿಯಲ್ಲೆ ಉರಿದು ಬೂದಿಯಾದ ಬೆಂಕಿ
ಪ್ರಶಸ್ತಿಶಿಲೆಯ ಮೇಲೆ ನೀರು ಸಿದ್ರಿಸುತ್ತಿರಲು
ಜೆನ್ನಿಕೋಲನ್, ಜೆನ್ನಿಲಿಂಡರ್ ತನಿತನಿಯ ಹಾಡು.

ಒಬ್ಬನು ಚಿತ್ರಕಲೆಯಲ್ಲೇ ಸಿಕ್ಕಿಬೀಳಬೇಕು
ಅಪರಾಧಿ ಪಾತಕದಲ್ಲೇ ಸಿಕ್ಕಿಬಿದ್ದಂತೆ ಎನ್ನುವ ಡಿಗಾಸ್
ಪೆಟ್ಟಿಗೆಯ ವಸ್ತುಗಳು ಹೇಳ ಹೆಸರಿಲ್ಲದೆಯೇ ಮಂಗಮಾಯ.

ಕಾಣ್ಕೆಗಳಿಗಾಗಿ ಸೀಳುಕಿಂಡಿ ಮಿಷೀನುಗಳು
ಸಂವಾದಕ್ಕಾಗಿ ಘನೀಕರಿಸಿಟ್ಟ ಕೋಶ
ಮಿಡತೆಗಳ ಹೋಟಲು, ಸ್ಥಿರ ನಕ್ಷತ್ರಪುಂಜ.

ಅತಿಸೂಕ್ಷ್ಮ ಕನಿಷ್ಟ ಅಸಂಬಂಧ ಚೂರುಗಳು
ಇತಿಹಾಸದ ವಿರುದ್ಧ ಪಳೆಯುಳಿಕೆ ಸೃಷ್ಟಿ
ಈ ಹಾಳುಬೀಳುಗಳಲ್ಲಿ ನಿನ್ನ ಪುನಸೃಷ್ಟಿ.

ಪ್ರೇತಾತ್ಮಗಳು ಅಲೆವ ರಂಗಭೂಮಿ
ವಸ್ತುಗಳು ನಿರ್ಮಿಸಿದ ನಿಯಮಗಳು
ಗುರುತಿಸಲು ಇಟ್ಟಂತೆ ದುಂಡುಲೋಹದ ಬಳೆ.

ಪ್ರೇತಾತ್ಮಗಳು ಧುತ್ತೆಂದು ಪ್ರತ್ಯಕ್ಷವಾದಾಗ
ಅವುಗಳ ದೇಹ ಬೆಳಕಿಗಿಂತಲೂ ಹಗುರ
ಪದಬಂಧ ಸ್ಥಿರ ಉಳಿದು ಬಾಳುವಂತೆ.

ವೈಭವದ ಹೋಟೆಲು ಕಾರೋನಿ-ಸಣ್ಣಬುಡ್ಡಿ.
ಮೂರುಕ್ಲಬ್ಬುಗಳು ದಿಗ್ಭ್ರಾಂತಕ್ಕೊಳಗಾದ
ತುಂಬುಲೀನಳ ಪ್ರತಿಬಿಂಬ ತೋಟದ ತುಂಬ.

ಹುಟ್ಟುಮೂಕ ಪುಟ್ಟಹುಡುಗಿ
ನೆಟ್ಟ ನೋಟದಿಂದ ನೋಡುತ್ತಾ
ಅಡ್ಡಾದಿಡ್ಡಿ ನುಡಿಸಿದ ಪಿಯಾನೋ ವಾದ್ಯ.

ಕಣ್ಣೊಳಗೆ ಕಣ್ಣ ಬೊಂಬೆಯಲ್ಲಿ ಪ್ರತಿಬಿಂಬ
ನೋಟ ಕದಡುವ ದೃಶ್ಯಾವಳಿ
ಮೇಲಿರುವ ಆ ದೇವನೊಬ್ಬನಿಂದ ಮಾತ್ರ ಈ ಜಗವನ್ನು
ನಿರ್ನಾಮಗೊಳಿಸಲು ಸಾಧ್ಯ.

ಜೋಸೆಫ್ ಕಾರ್ನೆಲ್ ನಿನ್ನ ಪೆಟ್ಟಿಗೆ ಒಳಗೆ
ನನ್ನ ಈ ಮಾತುಗಳು ಈ ನಿಮಿಷದ ಕಾಣ್ಕೆ ಸತ್ಯಗಳು.

ಪವಿತ್ರ ಅಂಜೂರದ ಮರ

ಗಾಳಿ
ಹಣ್ಣಿನ ದರೋಡೆಕೋರ
(ಕಪಿಗಳು ಮತ್ತು ಹಕ್ಕಿಗಳು)
ರೆಂಬೆಯಲ್ಲಿನ ಬೀಜ ಚದುರಿ ಚಲ್ಲಾಡಿ
ಬೃಹತ್ ವೃಕ್ಷ
ಕಂಪಿಸುವ ಹಸಿರ
ತುಂಬಿ ತುಳುಕುವ ಮಹತ್ ಪಾನಪಾತ್ರೆ
ಸೂರ್ಯನ ಕುಡಿತ
ಒಳಗರ್ಭದಾಳ ಗಾಳಿ
ಬೀಜಗಳು
ಬಿರಿದು ಸ್ಫೋಟಿಸಿದಾಗ
ಗಿಡದ ಸೃಷ್ಟಿ
ಆ ಶೂನ್ಯದಲ್ಲಿ
ಸುತ್ತುತ್ತ ನೇಯುತ್ತಿದೆ
ಅದರಲ್ಲೆ ಬೆಳೆದು ಸೆಟೆದು ನೆಟ್ಟಗೆ ನಿಲ್ಲುತ್ತದೆ
ವರ್ಷವರ್ಷಾಂತರ ಸದಾ ನೆಟ್ಟಗೆ ಬೆಳೆಯುತ್ತ, ಬೀಳುತ್ತಾ
ಹೀಗೆ ಬಿದ್ದಾಗ
ಪುಟಿದು ಚಿಮ್ಮುವ ನೀರು
ಚಿಮ್ಮುತ್ತಲೇ ನಿರ್ಗಲ್ಲಾಗಿ ಕಾಲಾಂತದಲ್ಲಿ ಆಗುವುದು ಕಲ್ಲು
ಅದು ತನ್ನ ಜಾಡನ್ನು ತಿಳಿದು
ಬೇರು ಆಳ ಇಳಿಬಿಟ್ಟು
ವಕ್ರ ತಿರುಚಿದ ಕೊಂಬೆ
ಕಡುಗಪ್ಪು
ಬಂದರೊಳಗೊಂದು ಹೆಣೆದು ಚಾಚುತ್ತಾ
ದೂಡುವುದು ಒಳಗೆ

ಕಾಂಡಗಳು
ತೇವದಲ್ಲೆ ಸುರಂಗ ತೋಡಿ
ಪ್ರತಿಧ್ವನಿಗಳ ಅನುರಣನ ಕರಗಿ ಅಲ್ಲೆ ಸ್ತಬ್ಧ
ದಿನನಿತ್ಯ ಸೂರ್ಯ ಕಿರಿದಾಗುತ್ತ ಇಂಗಾಲಾಮ್ಲವಾಗಿ
ತೋಳುಗಳ ಹುರಿಗಟ್ಟಿದ ಕುಣಿಕೆಯಲ್ಲಿ
ಸಿಕ್ಕಿಬೀಳುವುವು
ದಪ್ಪಕಂಬಗಳು ಕೇಬಲ್ಲುಗಳು ಭೂಸಂಬಂಧ ಪಟ್ಟಿಕಟ್ಟದ
ಸರಿದಾಡುವ ಬೇರುಗಳು
ಹಬ್ಬ ಅಡರಿ
ಒಟ್ಟಾಗಿ ಸುತ್ತಿ ಸುರುಳಿ
ಪೊದೆಯಂತ ಕೈಗಳು
ಅದರ ದೇಹ ತಲುಪುವುದು, ಭೂಮಿಯನ್ನಲ್ಲ
ಕೈಚೀಸಿ ಅಪ್ಪಿ ಆಲಂಗಿಸುವ
ಚೈತನ್ಯ ತುಂಬಿದ ಅಂಜೂರದ ಮರ
ಬೆಳೆದಾಗ
ಅದರ ಕಾಂಡ
ಕೊಳೆತು ಹಾಳಾಗಲು ನೂರಾರು ವರ್ಷಗಳು
ಅದರ ತುದಿ
ಬೋಳು, ಬುರುಡೆ, ಚೂರಾದ ಜಿಂಕೆಕೊಂಬಿನ ಕವಲು
ಒಳಿಯಲ್ಲೆ ಮರೆಯಲ್ಲಿ ಒರಟಾದ ಎಲೆಗಳು
ಹಾಡುವ ಅಲೆಯೊಂದು ಶೃತಿಪಡಿಸವುದು
ನಸುಗೆಂಪಿನಿಂದ, ಕಂದು ಕಾವಿಬಣ್ಣಕ್ಕೆ ಅದರಿಂದ ಹಸುರಿಗೆ
ತನ್ನ ಗಂಟು ಹಿಕ್ಕುಗಳಲ್ಲಿ ತಾನೆ ಸಿಕ್ಕು
ಎರಡು ಸಾವಿರ ವರ್ಷಗಳು
ಅಂಜೂರದ ಮರ ತೆವಳುತ್ತ ಗಗನಕ್ಕೆ ಚಾಚಿ ಬೆಳೆಯುತ್ತ
ತಾನೆ ಉಸಿರು ಕಟ್ಟುವುದು.

ಹರ್ಷ ಉಕ್ಕಿದ ಹೃದಯ

ನಾನು ಇಲ್ಲಿ, ಬಂದೆ, ಈ
ಸಾಲುಗಳನ್ನು ಬರೆದೆ
ಅಡ್ಡಾದಿಡ್ಡಿ ಕಟ್ಟಿದ
ನೀಲಹಸಿರ ಮಸೀದಿ
ಆರು ತುಂಡುಗಳ ಸ್ತಂಭಗೋಪುರಗಳು
ಸಮಾಧಿಗಳು ಎರಡು ಅಥವಾ ಮೂರು
ಕವಿಯ ಸಂತರ ಸ್ಮಾರಕಗಳು
ತೈಮೂರನ ವಂಶಾವಳಿಯ ಹೆಸರುಗಳು.

ನೂರುದಿನದ ಹಿಂದಿನ ಗಾಳಿಯನು ಕಂಡೆ
ಅದು ರಾತ್ರಿ ಇಡೀ ಮರಳ ಚೆಲ್ಲಾಡಿತು ಸುತ್ತಲೂ
ಅದು ನನ್ನ ಹುಬ್ಬಿಗಪ್ಪಳಿಸಿ ಕಣ್ಣೆವೆಯನಿರಿದಾಗ
ಬೆಳಗಾಯಿತು.

ಹಕ್ಕಿಗಳ ಹತಾಶ ಚೀರಾಟ
ಕಲ್ಲುಗಳ ನಡುವೆ ನೀರಿನ ಝುಳುಝುಳು ನಾದ
ರೈತನ ಹೆಜ್ಜೆಗುರುತು ಯಾವುದು?
(ನೀರಧೂಳಿನ ರುಚಿಯ ಸವಿದು)
ಪ್ರಸ್ತಭೂಮಿಯಲ್ಲಿ ಮೂಕಮರ್ಮರ ನಾದ
ಕಂಡೂ
    ಕಾಣದಂತೆ
ಸುರುಳಿ ಸುತ್ತುವ ಕೆಂಧೂಳಿನ ಗಾಳಿ
ಹುರುಳಿಲ್ಲದ ನನ್ನ ಆಲೋಚನೆಗಳು
ಚಕ್ರದಂತೆ ಸುತ್ತಿ ಉರುಳುತ್ತಿರಲು
ಹೋಟಲಿನ ರೂಮಿನಲ್ಲಿ, ಬೆಟ್ಟಗಳ ತುತ್ತತುದಿಯು
ಈ ಪ್ರದೇಶವು ಒಂಟೆಗಳ ಸ್ಮಶಾನ

ನನ್ನ ಆಲೋಚನೆಗಳಿಗೆ ಕಾವು ಕೊಟ್ಟಾಗ
ಸದಾ ಇಂಥ ಹೀಗಿರುವ ಜೋತಮುಖಗಳೇ
ವಿನಾಶಗಳ ಚಕ್ರವರ್ತಿ ಎನ್ನಲೇ ಈ ಗಾಳಿಯನ್ನು?
ನನ್ನ ಒಬ್ಬನೇ ಸದ್ಗುರು
ಭೂ ಕುಸಿತಗಳು
ಕಳೆದು ಬಿಟ್ಟಿದ್ದ ಬೆಳೆದು ಹೆಚ್ಚುಹೆಚ್ಚಾಗಿ
ಕಾಕದೃಷ್ಟಿ ನನ್ನ ಮೇಲೇ ಹೊರತು ಇತರರ ಮೇಲಲ್ಲ
ನಾನೇನೋ ಹೇಳಬೇಕೆಂದಿದ್ದೆ
ಅಷ್ಟರಲ್ಲೇ
ಆ ನುಡಿಗಳನು ಗಾಳಿ ಹಾರಿಸಿತು
ಒಂದು ಮಧ್ಯಾಹ್ನದ ವೇಳೆ ಪರ್ವತಗಳೆಲ್ಲಾ ನೆರೆದು
ಮರಗಳೆಲ್ಲಾ ನಡೆದು ಬಂದು ಸುತ್ತುವರಿದು ಹಾಗೆ ನಿಂತಿರಲು
ಸೂರ್ಯ ಕಿರಣಗಳ ಹೊಳಪು ಹೆಂಚಿನ ಮೇಲೆ
ತಟ್ಟನೆ ಕಾಲಿಟ್ಟ ವಸಂತ

ಹೆಣ್ಣುಗಳ ತೋಟದಲ್ಲಿ
ಆಕಾಶನೀಲದ ಪ್ರಶಸ್ತ ಶಿಲೆಯೊಂದರ ಮೇಲೆ ಏರಲು ನಾನು
ಮಸೀದಿ ಗೋಪುರಗಳ ಮೇಲೆ ಕಹಳೆ ಸದ್ದು, ವಿವಿಧ ಪಾತ್ರಗಳು
ಕೊರಾನಿನ ಅರಬ್ಬಿಲಿಪಿಯ ಮೋಡಿ ಬರಹ ಈಗ ಸ್ಫುಟವಾಗಿ ಕಂಡು
ಮೊದಲಿಗಿಂತಲು ಹೆಚ್ಚು ಅರ್ಥ ಸ್ಫುರಿಸಿರಲು
ಚಿತ್ರಪ್ರತಿಮೆಗಳಲ್ಲದೆ ನನಗೆ ಬೇರೆ ಕಾಣ್ಕೆಗಳೇ ಇಲ್ಲ
ಆಕೃತಿಗಳು ಸುತ್ತಿದಲ್ಲದೆ ಮಾಯವಾಗುವುದನ್ನು ನಾನು ಕಾಣೆ
ಇನ್ನೂ ಹೆಚ್ಚು ನಿಶ್ಚಲವಾಗಿ ನಿಚ್ಚಳವಾಗಿ
ಸೂಫಿಗಳ ವಸ್ತುವಿಷಯಗಳಿಲ್ಲದೆಯೇ 'ಇರುವಿಕೆ'ಯ ಸಿದ್ಧಾಂತ
ಭಾವ ಶೂನ್ಯತೆಯನ್ನು ಹೆಚ್ಚು ಕುಡಿಯಲಾರೆ
ವಜ್ರದೇಹಿ ಬೋಧಿಸತ್ವನ
ಎರಡರಿಂದ ಮೂವತ್ತು ಸಂಜ್ಞೆಗಳ ನಾ ತಿಳಿಯಲಾರೆ
ನಾನು ನೋಡುವೆನು ನೀಲಾಕಾಶ ಬಗೆಬಗೆಯ ನೀಲಛಾಯೆ

ಬಿಳಿಯಿಂದ ಹಸುರಿನವರೆಗೂ
ಮರದೆಲೆಗಳ ಬಿಚ್ಚಿಟ್ಟ ಬೀಸಣಿಕೆಗಳು
ಪೈನ ಮರದ ತುದಿಯಲ್ಲಿ
ಕಪ್ಪು ಬಿಳುಪಿನ ಗುಂಡುಮುಳುಕನ ಹಕ್ಕಿಗಳು
ಹಕ್ಕಿಗಳಿಗಿಂತ ಹಗುರ ಗಾಳಿ
ನಾನು ಕಾಣುತ್ತಿರುವ ಪ್ರಪಂಚ ತನ್ನ ಮೇಲೆಯೆ ವಿಶ್ರಮಿಸಿತ್ತು
ನಾನು ಕಾಣ್ಕೆಗಳನ್ನು ಕಂಡೆ
ನಾನು ಅದಕ್ಕೆ ಹೆಸರಿಟ್ಟೆ ಅಣುಕ್ಷಣ ಎಂದು
ಅದೇ ಪರಿಪೂರ್ಣತೆಯ ನಿಯತವಾದ.

ಅಲುಗಾಡುವ ಸೇತುವೆ ದಾರಿ

ರವಿಯು ದಿನವಿಡೀ
          ಚಳಿಯು ರವಿಯಿಡೀ
ನಿರ್ಜನ ರಸ್ತೆಯಲ್ಲಿ
ಪಾರ್ಕುಮಾಡಿದ ಕಾರುಗಳು ಮಾತ್ರ
ಮಂಜು ಸುರಿದಿಲ್ಲವಿನ್ನೂ
          ಗಾಳಿಗಾಳಿ
ಕೆಂಪುಮರದ
          ಉರಿದೆದ್ದ ಜ್ವಾಲೆ
ಚಳಿಯ ಗಾಳಿಯಲ್ಲಿ
ಅವರೊಂದಿಗೆ ನುಡಿವೆ ನಾನು ನಿನ್ನೊಂದಿಗೂ ಸಹ

ನಾನೊಂದು ಭಾಷೆಯಿಂದಾವೃತ ಕೋಣೆಯಲ್ಲಿರುವೆ
ನನ್ನಂಥಹುದೇ ಬೇರೊಂದು ಕೋಣೆಯಲ್ಲಿ ನೀನು
ಅಥವಾ ನಾವಿಬ್ಬರೂ ಒಂದೇ ರಸ್ತೆಯಲ್ಲಿ
ನಿನ್ನೊಂದು ತೀಕ್ಷ್ಣ ನೋಟಕ್ಕೆ ಜನಸಾಂದ್ರತೆ ಕುಗ್ಗಿ
ಈ ಪ್ರಪಂಚದ
ಅತಿಸೂಕ್ಷ್ಮಾತಿಸೂಕ್ಷ್ಮಗಳೊಂದಿಗೆ ಬರುವ
                    ಸ್ಮರಣೆಗಳು
ಹಾಳಾಗಿ ಬೀಳುತಿವೆ ಪಾದದಡಿಯಲ್ಲಿ
ನಾನು ನಡುವೆಯೆ ನಿಲ್ಲಿಸುವೆ
ಬರೆಯದೆ ಉಳಿದ ಸಾಲು

ಕದಗಳು ತಮ್ಮಷ್ಟಕ್ಕೆ ತಾವೇ ತೆರೆದು ಮುಚ್ಚುವುವು
                              ಗಾಳಿ
ಮನೆಯೊಳ ಹೊಕ್ಕು ಮತ್ತೆ ಹೊರಟತು ಆಚೆ
                              ಗಾಳಿ

ತನ್ನೊಂದಿಗೆ ತಾನೇ ನುಡಿದುಕೊಳ್ಳುತ್ತಾ ನಿನ್ನೊಂದಿಗೂ
ಗಾಳಿ

ಅನಾಮಿಕ ಅಲೆಯುವುದು ಕೊನೆಯಿಲ್ಲದ ಕಾರಿಡಾರಿನಲ್ಲಿ
ಯಾರಿಗೆ ಗೊತ್ತು ಮತ್ತೊಂದು ತುದಿಯಲ್ಲಿ ಯಾರಿದ್ದಾರೆಂದು?
ಗಾಳಿ

ನನ್ನ ಖಾಲಿಬುರುಡೆಯಲ್ಲೇ ತಿರುಗಿ ತಿಪ್ಪರಲಾಗ ಹಾಕಿ
ಗಾಳಿ

ತನ್ನ ಸೊಂಕಿದ್ದನೆಲ್ಲಾ ಗಾಳಿಯಾಗಿಯೇ ಮಾರ್ಪಡಿಸಿ
ಗಾಳಿ

ತನ್ನ ಬೆರಳಿನಿಂದ ಚದುರಿಸುವುದೆಲ್ಲವನ್ನು ನಾ ಹೇಳಿದಂತೆ
ನಾನೆ ನಿನ್ನ ಕಣ್ಣಿಗೆ ಅಗೋಚರವಾದ
ಗಾಳಿ

ನಿನ್ನ ಕಣ್ಣು ತೆರೆಸಲಾರೆ ಕದವ ಮುಚ್ಚಲಾರೆ
ಘನವಾಗಿ ಮಾರ್ಪಟ್ಟಿತು
ಗಾಳಿ

ಈ ಗಳಿಗೆಯ ಆಕಾರವೇ ಒಂದು ವಿರಾಮ
ಈ ವಿರಾಮಕ್ಕು ನಿನ್ನದೇ ಆಕಾರ
ನೀನೊಂದು ಕೊಳ ನೀರಿನದಲ್ಲ
ಕಾಲದಿಂದಲೇ ನಿರ್ಮಾಣ ನಿನ್ನ ಆಕಾರ
ಗಡಿಯಾರದೋಲಕದ ಚೂರುಗಳ
ಹೊಳಪು ತುದಿಯಲ್ಲಿ
ನಾನೇನಾಗಿದ್ದರೂ ಈಗ ನಾನು ಅದಲ್ಲ
ತೂಕರಹಿತದ ಈ ನನ್ನ ಜೀವ
ಭೂತಕಾಲವನ್ನು ತೆಳುವಾಗಿಸುತ್ತ
ಭವಿಷ್ಯತ್ ಕಾಲವು ನಿನ್ನ ಕಣ್ಣಲ್ಲಿ ಕೊಂಚ ನೀರು ತರಿಸುವುದು

ನಿನಗೀಗ ಸೇತುವೆಯ ಆಕಾರ
ನಮ್ಮ ಕೋಣೆ ನಿನ್ನ ಕಮಾನು ಹಾದಿಯಲ್ಲಿ ಕಡಲಯಾನ ಕೈಗೊಳ್ಳಲು

ನಾವು ಎಚ್ಚರಪಟ್ಟು ಗಮನಿಸುತ್ತೇವೆ ನಿನ್ನ ಅಡ್ಡಕಂಬಿಗಳಿಂದ
ನೀನು ಗಾಳಿಯೊಡನೆ ಕಿರುದೆರೆಯಾಗಿ ಮತ್ತೂ ಲಘುವಾಗುವೆ
ದೇಹಕ್ಕಿಂತ ಹಗುರ
ಮತ್ತೊಂದು ತೀರದಲ್ಲಿ ರವಿಯು
ತಳಕೆಳಗು ಬೆಳೆದು
ಅದರ ಬೇರು ಆಕಾಶದಾಳದಲ್ಲಿ ಗಟ್ಟಿ ನೆಟ್ಟಿರಲು
ಅದರ ಎಲೆಮರೆಯಲ್ಲಿ ನಾವು ಅಡಗಿಕೊಳ್ಳಬಹುದು
ಕೊಂಬೆಗಳಿಂದ ಉತ್ಸವಾಗ್ನಿ ನಿರ್ಮಿಸಬಹುದು
ದಿನವೇ ಒಂದು ರೂಢಿಗತ ಚಟ

ಈ ಶೈತ್ಯವು ಪ್ರಪಂಚವನ್ನು ತಡೆದು ಬಂಧಿಸಿಟ್ಟು
ಗಾಜಿನಿಂದ ನಿರ್ಮಿತವಾದ ಆಕಾಶ
ಗಾಳಿಯಿಂದ ಮಾಡಿದ ಗಾಜು
ಅತಿಹಗುರ ಶಬ್ದಗಳೂ ನಿರ್ಮಿಸುವುವು
ಚಕಚಕನೆ ಶಿಲ್ಪಗಳನು
ಪ್ರತಿಧ್ವನಿಗಳು ದ್ವಿಗುಣವಾಗೆ ಶಿಲ್ಪ ಮಾಯ
ಈಗ ಹಿಮಪಾತವಾಗಲೂಬಹುದು
ಉರಿವ ಮರ ಅದುರಿ ಕಂಪಿಸುತ್ತಿರಲು
ಇರುಳು ಈಗ ಆವರಿಸಿರಲು ಸುತ್ತ
ಅಂಧಕಾರದೊಡನೆ ಆಡುವೆನು ಮಾತು ಜತೆಗೆ ನಿನ್ನೊಂದಿಗೂ

ಕವಿಯ ಸಮಾಧಿ

ಪುಸ್ತಕ
ಗಾಜು
ಮಾಸಲು ಹಸುರಿನ ಗಿಡದ ಕಾವು
ಹಕ್ಕಿಯ ಉಲಿ
ನಿದ್ರಾಸುಂದರಿ ತನ್ನ ಹಾಡ ಹಾಸಿಗೆಯಲ್ಲಿ
ಆಯಾವಸ್ತುಗಳು ತಮ್ಮ ಹೆಸರಲ್ಲೆ ಮುಳುಗಿ
ಕಣ್ಣೋಟದಿಂದಲೇ ಗುರುತಿಸಬಲ್ಲೆ
ಇದಕ್ಕಿಂತ ಆಚೆ ಹೇಳಲಾರೆ ಎಲ್ಲಿ
ಇದೆಲ್ಲವನ್ನೂ ಮೊಳೆ ಹೊಡೆದಿಟ್ಟುಕೊಳ್ಳಬೇಕೆಂದು
ಲ್ಯಾಂಪು ಪೆನ್ಸಿಲಿನ ರೇಖಾಚಿತ್ರ
ಅದು ಇದು ನೋಡಿದೆಲ್ಲ
ಮೊಳೆ ಹೊಡೆದಿಟ್ಟು
ಜೀವಂತ ದೇಗುಲದಂತೆ
ನೆಡಬೇಕು
ಮರದಂತೆ
ದೇವರಿಗೆ
ತೊಡಿಸು ಕಿರೀಟ
ಇದು ಹೆಸರು
ಅನಂತ ಎಂದು
ಆ ಮುಳ್ಳಕಿರೀಟವನ್ನು ವರ್ಣಿಸು
ಮಾತು!
ಕಾವು ಮತ್ತದರ ಅರೆಬಿರಿದ ಹೂವು
ಸೂರ್ಯ ಲೈಂಗಿಕ ಸೂರ್ಯ
ನೆರಳಿಲ್ಲದ ಹೂವು
ಅದರಾಚೆಗೂ ಎಲ್ಲಿ ಹೇಗೆ

ಕ್ಷಿತಿಜದಂತೆ
ತೆರದುಕೊಳ್ಳುತ್ತದೆ
ಪರಿಶುದ್ಧತೆ ಹಿಗ್ಗಿಚಾಚಿ
ವಸ್ತುಗಳ ಹಿಡಿದಿಟ್ಟ ಪಾರದರ್ಶಕ ಚಿತ್ರ
ಬಿದ್ದು
ಮೇಲೆದ್ದು
ನೋಟದಲ್ಲಿ
ಹಿಡಿದಿಟ್ಟ
ಪ್ರತಿಬಿಂಬಗಳಲ್ಲಿ
ಚಂದ್ರನ ಬಹುರೂಪಗಳು
ಬಯಲುಗಳ ಬದಿಯಲ್ಲಿ
ಪ್ರಪಂಚಗಳ ಕಟ್ಟು
ತತ್‌ಕ್ಷಣ
ಪ್ರಜ್ವಲಿಸುವ ಗೊಂಚಲುಗಳು
ನಕ್ಷತ್ರಗಳ ಚಲಿಸುವ ಕಾಡು
ಅಲೆದಾಡುವ ಅಕ್ಷರಗಳು
ಸಹಸ್ರವರ್ಷಗಳ ಮರಳರಾಶಿ ಅಂತ್ಯವಿಲ್ಲದೆ ಬೀಳುತ್ತ
ಆದ ಹೊತ್ತು
ಎಲ್ಲ ಕಾಲದಿಂದ ಕಾಲಕ್ಕೆ
ಒಂದೇ ಕ್ಷಣಾರ್ಧದಲ್ಲಿ
ಲ್ಯಾಂಪ್ ಪೆನ್ಸಿಲಿನ ರೇಖಾಚಿತ್ರ
ಇದರಲ್ಲಿ ನಾ ಹೇಳಲಾರೆ ಎಲ್ಲಿ
ಒಂದು ಹೆಸರು
ಮಾಡಲಾಗುವುದು
ಥಟ್ಟನೆ ಗಿಡ ಹೇಳುವುದು
ಮರದಂತೆ ಯೋಚಿಸಿ
ಚೈತನ್ಯ ತುಂಬಿ

ವಂಶವಾಹಿನಿ ಮೊದಲಾಗುವುದು ಹೆಸರಿನಿಂದ
ಆ್ಯಡಮ್ ಒಬ್ಬ
ಜೀವಂತ ದೇಗುಲದಂತೆ
ನೆರಳಿಲ್ಲದ ಹೆಸರು
ಮೊಳೆಹೊಡೆದಿಟ್ಟ
ದೇವರಂತೆ
ಇಲ್ಲೆ ಅಲ್ಲದೆ ಎಲ್ಲಿ
ಮಾತು!
ನಾನು ತಡೆದು ನಿಲ್ಲಿಸುವೆ ಪ್ರಾರಂಭದಲ್ಲೇ
ಅದೂ ಇದೂ ಹೇಳುತ್ತಾ
ನಾ ನಿಲ್ಲಿಸುವೆ
ಇರುವ
ತಕ್ಷಣವೇ ಇಟ್ಟ ಹೆಸರಿನ ನೆರಳು
ನನ್ನರಿವಿಗೆ ಬರದಂತೆ ನನ್ನ ಬಂಧಿಸಿಟ್ಟು ಇಲ್ಲವಾಗಿಸಿತು.

ಭಾಷೋ

ಇಡೀಜಗತ್ತು
ಹದಿನೇಳು ಅಕ್ಷರಗಳಲ್ಲಿ ಅಡಗಿದೆ
ಆ ಮನೆಯ ಸೂರಿನಡಿ ಅಡಗಿರುವೆ ನೀನು

ಒಣಕಲ್ಲು ಜೊಂಡು, ಹೆಮ್ಮರದ ಕಾಂಡ
ಬಿರುಕುಗಳಿಂದ ಹೊಮ್ಮಿ ಜಿನುಗುತ್ತಿದೆ,
ಜ್ಞಾನಧಾರೆಯ ಕೀಟಗಳು

ತೆಳುಗಾಳಿ ತಯಾರಿಸಿದ ಪೈನ್‌ಮರ
ಬಂಡೆ ಬಿರುಕುಗಳಿಂದ
ಹೇಗೋ ಸ್ಫುರಿಸಿ ಚಿಮ್ಮಿತು ಕವನ

ಅದರ ಬಿಗಿಯಾದ ನೇಯ್ಗೆಯೊಳಗೆ
ಸ್ವರ-ವ್ಯಂಜನಗಳು
ಜಗತ್ತನ್ನೇ ಆಳುವ ಅರಮನೆ

ಶತಶತಮಾನದ ಮೂಳೆಗಳ ರಾಶಿ
ಪರ್ವತಗಳ ಮಡುಗಟ್ಟಿದ ದುಃಖ ಕಠಿಣ ಕಲ್ಲಾಗಿ ಮಾರ್ಪಟ್ಟು
ಎಲ್ಲವೂ ಇಲ್ಲ ಅತಿ ಹಗುರ

ನಾನು ಏನು ಹೇಳುವೆನೋ
ಅದು ತಾನಾಗೇ ರಾರಾಜಿಸುತ್ತಿದೆ ಮೂರೇ ಸಾಲಿನಲ್ಲಿ
ಅದೇ ಅಕ್ಷರಗಳು ಕಟ್ಟಿದ ಶಬ್ದಸೌಧ.

ಭಾಷೋ - ಇದೊಂದು ಸ್ಥಳನಾಮ

ಗಾಳಿ ನೀರು ಮತ್ತು ಕಲ್ಲು

ನೀರು ಕಲ್ಲಿನಲ್ಲಿ ಕಂದಕವ ಕೊರೆದಿತ್ತು
ಗಾಳಿನೀರಲ್ಲಿ ಕರಗಿ ಮಾಯವಾಗಿತ್ತು
ಕಲ್ಲು ಗಾಳಿಯ ತಡೆದಿಟ್ಟರಲು
(ನೀರು, ಗಾಳಿ, ಕಲ್ಲು.)

ಗಾಳಿ ಕಲ್ಲನು ಕೊರೆಧು ಶಿಲ್ಪ ನಿರ್ಮಿಸಲು
ಕಲ್ಲು ನೀರಿನ ಅಡಿಯ ಬಟ್ಟಲಾಗಿರಲು
ಗಾಳಿ, ನೀರು ನುಗ್ಗಿ ರಭಸದಿಂದ ಹರಿಯುತ್ತಾ
(ನೀರು, ಗಾಳಿ, ಕಲ್ಲು.)

ಗಾಳಿ ತನ್ನ ತಿರುವು ಮೂಲೆಗಳಲ್ಲಿ ಗಾನ ಹಾಡುವುದು
ನೀರು ಝುಳಝುಳ ನಾದ ಮಾಡಿ ಹರಿಯುವುದು
ಆದರೆ ಕಲ್ಲು? ಅಚಲ ಘನ ಮೌನ;
(ನೀರು, ಗಾಳಿ, ಕಲ್ಲು.)

ಒಂದರಂತೆ ಮತ್ತೊಂದು
ಅವುಗಳ ಹೆಸರುಗಳಿಗಿಲ್ಲ ಆಕಾರ
ಅವು ಶೂನ್ಯದ ಒಳಹೊಕ್ಕು ಮಾಯವಾಗುವುದು,
(ನೀರು, ಗಾಳಿ, ಕಲ್ಲು.)

ನಾನೇನು ನೋಡುವೆನೋ ನಾನೇನು ಹೇಳುವೆನೋ ಅದರ ನಡುವೆ

೧

ನಾನೇನು ನೋಡುವುನೋ ನಾನೇನು ಹೇಳುವೆನೋ
ಅದರ ನಡುವೆ,
ನಾನೇನು ಹೇಳುವೆನೋ ಅಥವಾ ಮೌನ ತಾಳುವೆನೋ
ಅದರ ನಡುವೆ,
ನಾನೇನು ಮೌನ ತಾಳುವೆನೋ ಅಥವಾ ಕನಸುವೆನೋ
ಅದರ ನಡುವೆ,
ನಾನೇನು ಕನಸುವೆನೋ ಅಥವಾ ಮರೆಯುವೆನೋ
ಅದರ ನಡುವೆ,
ಕಾವ್ಯ ;
ತುಟಿಯಿಂದ ಜಾರಿತು
ಹೌದು, ಇಲ್ಲಗಳ ನಡುವೆ
ಹೇಳುತ್ತದೆ.
ನಾನು ಮೌನ ತಾಳಿದರೆ
ಅದೂ ಮೌನ.
ನಾನು ಹೇಳಿದ್ದು
ಕನಸು.
ನಾನು ಮರೆತದ್ದು
ಮಾತಲ್ಲ
ಇದೊಂದು ಕ್ರಿಯೆ
ಹೌದು ಮಾತಿನ ಕ್ರಿಯೆ.
ಕಾವ್ಯ
ನುಡಿಸುತ್ತದೆ, ಕೇಳುತ್ತದೆ
ಸತ್ಯ.

ನಾನು ಹೇಳುವುದೆಲ್ಲ
ಪರಮಸತ್ಯ
ಎಲ್ಲ ಅಳಿದು ಮಾಯವಾಗಿ
ಉಳಿದ ನಗ್ನ ಸತ್ಯ.

೨

ಹಿಡಿತಕ್ಕೆ ಸಿಕ್ಕಲಾರದ ಚಿಂತನೆ
ಹಿಡಿದಿಟ್ಟು,
ಶಬ್ದಗಳು
ಕಾವ್ಯ
ಬಂದು, ಹೋಗುತ್ತವೆ
ಇರುವಿಕೆಯ
ಇಲ್ಲದಿರುವಿಕೆಯ ನಡುವೆ
ನೇಯುವ ನೇಯ್ಗೆ
ಬಿಚ್ಚುಕೊಳ್ಳುವ ಬಿಂಬ ಪ್ರತಿಬಿಂಬಗಳು
ಕಾವ್ಯ
ಚಲ್ಲಾಡಿ ಕಣ್ಣುಗಳ ಕೆದಕುತ್ತಿವೆ
ಚೆದರುತ್ತಿರುವ ಶಬ್ದಗಳು ಕಣ್ಣೊಳಗೆ
ಕಣ್ಣು ಮಾತನಾಡಿತು
ಶಬ್ದಗಳು ಅದ ನೋಡಿತು
ನೋಟವು ಆಲೋಚಿಸಿ ಕೇಳಲು
ಹಾತೊರೆಯಿತು
ಆಲೋಚನೆಗಳು
ನೋಡುತ್ತಿವೆ
ನಮ್ಮ ನುಡಿ ಕೇಳುತ್ತಿದೆ
ಮುಟ್ಟಿ ತಟ್ಟಿನೋಡು
ಆಲೋಚನೆಯ ಹೊಳಹಿನ ನಿಜರೂಪು,
ಕಣ್ಣು ಮುಚ್ಚು
ಆಗ ಶಬ್ದ ಭಂಡಾರ ತೆರೆಯುವುದು

ಪಳೆಯುಳಿಕೆ ನಡುವೆ ಮಂತ್ರ

ಬೆಳಗು ತನ್ನ ಕಿರೀಟ ತಾನೆ ತೊಟ್ಟು, ಚಂದದ ಗರಿ ಸಿಕ್ಕಿಸಿಕೊಂಡು
ದೀರ್ಘ ಹಾಕಿದ ಕೇಕೆ ಹೊಂಬಣ್ಣದ ಚೆಲುವು
ಪ್ರತಿಫಲಾಪೇಕ್ಷೆ ಇಲ್ಲದ ನಿರ್ವ್ಯಾಜ್ಯ ಬೆಳಗು,
ಎಂಥ ಬಿಸಿನೀರಿನ ಬುಗ್ಗೆ ಆಗಸದ ನಡುವೆ!
ಕಂಡ ಕಾಣ್ಕೆಗಳು ಪ್ರಕೃತಿ ಸೌಂದರ್ಯದ ಕ್ಷಣಿಕ ಸತ್ಯ
ಕಡಲು ತೀರದಾಸರೆ ತೊರೆದು ನುಗ್ಗಿರಲು ಮುಂದೆ
ಬಂಡೆ ನಡುವೆ ನೇತಾಡುವ ಹೊಳೆವ ಜೇಡ
ತುದಿ ಶಿಖರ ಪ್ರಭೆ ಪ್ರತಿಫಲಿಸುವ ಹಸಿಹಸಿ ಗಾಯ
ಬೆರಳೆಣಿಕೆಯಷ್ಟು ಮೇಕೆಗಳು ಆದಾವು ಬಂಡೆಮಂದೆ
ಸೂರ್ಯ ಚಿನ್ನದ ಮೊಟ್ಟೆ ಇಟ್ಟ ಕಡಲಲ್ಲಿ
ಎಲ್ಲವೂ ದೈವಮಯ
ಭಗ್ನ ಶಿಲ್ಪ ಪ್ರತಿಮೆ
ಬಿಸಲ ಝಳ ತಾಕಿ ಬಿರುಕು ಬಿಟ್ಟ ಕಂಬಗಳು
ಈ ಪಳೆಯುಳಿಕೆಗಳೆಲ್ಲ ಜೀವತಳೆದು ನಿಂತಿವೆ ಸತ್ತಲೋಕದಲ್ಲಿ

ಟಿಯೋಟಿಹ್ಯೂಕಾನ್‌ನಲ್ಲಿ ಇರುಳಾಯಿತು
ಪಿರಿಮಿಡ್ಡು ತುದಿಮೇಲೆ ತರುಣರು ಮ್ಯಾರಿಜ್ಯೂನ ಸೇದುತ್ತಾರೆ
ಅವರ ಗಿಟಾರಿನ ಕರ್ಕಶ ಶಬ್ದ
ಯಾವ ಮಾದಕದ್ರವ್ಯ ಜೀವ ಜಲಗಳು ನಮಗೆ ಜೀವ ಕೊಡಬಲ್ಲವು?
ಶಬ್ದಗಳನ್ನು ನಾವೆಲ್ಲಿಂದ ಅಗೆದು ತೆಗೆಯೋಣ
ಶಬ್ದಮಂತ್ರಗಳ ಸಂಬಂಧಸೂತ್ರ ಹೇಗೆ ಕಲಿಸೋಣ
ಅದೇನು ನಾಟ್ಯವೇ? ಆಳಲು ನಗರವೇ ಯಾವ ಮಾನದಂಡಗಳಿಂದ
ಅಳೆಯಲು ಸಾಧ್ಯ?
ಮೆಕ್ಸಿಕೋಗೀತೆ ಶಾಪದಿಂದಲೆ ಸ್ಫೋಟಿಸಿತು
ಜ್ವಾಜ್ವಲಮಾನ ನಕ್ಷತ್ರ ಸಿಡಿದು ಬೆಂಕಿ ಉಗುಳುವಂತೆ

ಎಲ್ಲ ಅಂತಃಸಂಬಂಧಗಳು ಮುಚ್ಚಿಹೋಗಿವೆ ಈ ಹೆಬ್ಬಂಡೆಗಳ ನಡುವೆ
ಈ ನೆಲವು ತನ್ನ ಕೊಳತ ಗೊಬ್ಬರ ತಾನೇ ಉಣ್ಣುತ್ತಿದೆ
ನೋಡುವ ಕಣ್ಣಿಗೂ ಸ್ಪರ್ಶಿಸುವ ಕೈಗಳಿಗೂ
ಇಲ್ಲಿ ಸಾಕಷ್ಟು ವಸ್ತುಗಳುಂಟು
ಮುಳ್ಳುಪಿಯರ್‌ಹಣ್ಣು, ಹವಳ, ಮುಳ್ಳುಮುಖದ ಗ್ರಹ
ಗೊಬರು ಹಾಕಿದ ಅಂಜೂರ
ಪುನಃ ಚೇತನಗೊಳಿಸುವ ಸವಿದ್ರಾಕ್ಷಿಹಣ್ಣು
ಕನ್ಯೆಯರ ಕಾದತಲೆಗಳನ್ನು ತಂಪುಗೊಳಿಸುವುದು
ಉಪ್ಪು ಕೆನೆ, ದ್ರಾಕ್ಷಾಮದ್ಯ ಸೂರ್ಯನಿಗೆ ಪ್ರಿಯ
ಆ ದ್ವೀಪದ ಮೇಲಿರುವ ಹುಡುಗಿ ಮಬ್ಬಿನಲಿ ನನ್ನ ನಿಟ್ಟಿಸುತ್ತಿರಲು
ಸಣ್ಣ ಚರ್ಚಿನ ಮೇಲೆ ಮುಸುಕು ಹಾಕಿದ ಬೆಳಕು
ಉಪ್ಪಿನ ಗೋಪುರಗಳು, ಹಸಿರು ಫೈನ್ ಮರಗಳು ಕಡಲತೀರ ಮೇಲೆ
ಬಿಳುಪು ಬೋಟುಗಳ ಏಳುಬೀಳಿನ ಯಾನ
ಕಡಲ ನೀರಿನ ಮೇಲೆ ದೀಪ ದೇಗುಲಗಳ ನಿರ್ಮಾಣ

ನ್ಯೂಯಾರ್ಕ್, ಲಂಡನ್, ಮಾಸ್ಕೊ ಬಯಲುಗಳು
ಅಲ್ಲಿ ಆವರಿಸಿರುವ ತಿವಿ ಬಳ್ಳಿಗಳ ಪ್ರೇತ ನೆರಳು
ತೂಗಾಟ ತೊನೆದಾಟ ಬಿಸುವೇರಿದ ಸಸ್ಯ,
ಅದರ ಮೃದು ತುಪ್ಪಳವು ಇಲಿ ಗುಂಪಿನಂತೆ
ರಕ್ತಹೀನನಂತೆ ಕಾಂತಿರಹಿತ ಕಂಪಿಸುವ ಸೂರ್ಯ
ಪಾಲಿಫಿಮಸ್ಸಿನ ಆಕಳಿಕೆಗೆ
ಎದ್ದು ನಿಂತ ನಗರಗಳ ಮೇಲೆ ನಿಂತಿರುವ ಬೆಳಕು ಚೆಲ್ಲುವ ಸೂರ್ಯ
ಕೆಳಕಂದರಗಳಲ್ಲಿ ಕಾಡುಜನರ ನಿಧಾನ ನಡಿಗೆ
ಅವರನ್ನು ಹಿಂದೆ ಕೊಳಕು ಪ್ರಾಣಿಗಳೆಂದು ಗಣಿಸಿದ್ದರು.

ಪ್ರತಿ ಬೆಳಗಿನ ಸುಂದರ ಮುಂಜಾವಿನಾಕೃತಿಯ
ಮೋಡಿಮಾಂತ್ರಿಕ, ನೋಟ, ಬೆಳಕ ಬಾಣದ ರೆಕ್ಕೆ
ದ್ರಾಕ್ಷಾಮದ್ಯದ ಕಲೆ ರಕ್ತದ ಕಟುವಾಸನೆಯ ಟೇಬಲ್ ಕ್ಲಾತು
ಹವಳ ದಿಬ್ಬಗಳಲ್ಲಿ ನೀರಲ್ಲಿ ಬಾಗಿದ ರೆಂಬೆಕೊಂಬೆಗಳು

ನನ್ನ ಇಂದ್ರಿಯಗಳನ್ನೆಲ್ಲಾ ತೆರೆದಿಟ್ಟು ಅನುಭವಿಸುವೆ
ಎಂಥ ಸುಂದರ ಕ್ಷಣಗಳು ಹೊಂಬಣ್ಣ ಸಮ್ಮಿಲನ
ನಡುಹಗಲಿನ ಭಾರವಾದ ನಿಮಿಷಗಳ ಕೋದಿಟ್ಟ, ಗೋಧಿತೆನೆ,
ಅನಂತತೆಯು ತುಂತುಂಬಿ ತುಳುಕುವ ಬಟ್ಟಲು.

ನನ್ನ ಅಂಡಲೆವ ಆಲೋಚನೆಗಳ ಕಗ್ಗಂಟು
ಮತ್ತೆ ಶುರುವಾಯಿತು,
ಕೊನೆಗೂ ಪರಿಹಾರ ಹೊಳೆಯಿತು! ಕೊನೆಯಿಲ್ಲದೆ ಹರಿವ ನದಿಗಳು
ನೆತ್ತರಿನ ಕೊಲ್ಲಿ, ನಿರಂತರ ಬೆಳಗುವ ಸೂರ್ಯನ ಬಳಿ
ಎಲ್ಲವೂ ಕೊನೆಗೊಳ್ಳಲೇ ಬೇಕು ಈ ನಿಂತ ನೀರಲ್ಲಿ?

ದಿನ, ಉರುಳುವ ದಿನ
ಕಿತ್ತಳೆಯ ಬೆಳಕು ಕೊರೈಸುವ ಇಪ್ಪತ್ನಾಕು ಸರಳುಗಳು
ಆಹಾ! ಎಲ್ಲ ಸೇರಿ ಒಂದೇ ಬಣ್ಣ ಹೊಂಬಣ್ಣ
ಮನಕ್ಕೆ ಮುದ ನೀಡುವ ವಿವಿಧ ಆಕಾರಗಳು
ಎರಡು ವೈರುಧ್ಯಗಳು ಒಂದಾಗಿ ಬೆಸೆದು
ಅಂತಸ್ಸಾಕ್ಷಿ ಕನ್ನಡಿಯಲ್ಲೇ ಕರಗಿ ಒಂದಾಗಿ
ಮತ್ತೊಮ್ಮೆ ಪುರಾಣಗಳು ಚಿಮ್ಮುವ ಚಿಲುಮೆ
ಮಾನವ, ಮರ, ಇಂಥ ಪ್ರತಿಮೆಗಳೆ ಪದವಾಗಿ ಪದಗಳೇ ಹೂವಾಗಿ,
ಪದಗಳೇ ಹೂವಾಗಿ ಹೂವೇ ಹಣ್ಣಾಗಿ, ಹಣ್ಣೆ ಕ್ರಿಯೆಯಾಗಿ
ಮಾರ್ಪಡುವುದು

ನುಡಿ

ಮಾತನಾಡುವುದೆ ಒಂದು ದಿವ್ಯ ಅನುಭವ
ನಾನೊಂದು ಕವಿತೆ ಓದುವೆನು,
ಆದರೆ ಆ ದೇವ ಏನೊಂದು ನುಡಿಯದೆ
ಈ ಜಗತ್ತನ್ನೇ ನಿರ್ಮಿಸುತ್ತ ಕೆಡಹುತ್ತ
ಮೌನಿ, ಘನಮೌನಿಯಾಗಿ
ಭಯಂಕರ ಆಟಗಳ ಆಡುವನು

ಆತ್ಮವೇರಿತ್ತು ಮೇಲೆ, ಮೇಲೆ
ನಾಲಿಗೆ ಸಡಿಲವಾದರೂ
ಆಡಲಿಲ್ಲ ಒಂದೂ ಮಾತು
ಅದು ದೇವನು ಹಚ್ಚಿಟ್ಟ
ಬೆಂಕಿ ಭಾಷೆಯನ್ನು ಆಡುತ್ತಿದೆ
ಆಗ ಆ ಭಾಷೆ,
ಅಗ್ನಿಜ್ವಾಲೆಯಾಗಿ ಉರಿದು
ಧೂಮದ ಗೋಪುರವಾಗಿ
ಉರುಳುರುಳಿ ಬೀಳುವುದು
ಆಗ ಅಕ್ಷರಗಳೆಲ್ಲವೂ ಸುಟ್ಟುಬೂದಿ
ಬೂದಿ, ಅರ್ಥವಿಲ್ಲದ ಬೂದಿ.

ಮಳೆಯ ಸದ್ದನಾಲಿಸುವಂತೆ, ನನ್ನ ಮಾತು ಕೇಳು

ನನ್ನ ಮಾತು ಕೇಳು, ಮಳೆಯ ಸದ್ದನಾಲಿಸುವಂತೆ
ಅಷ್ಟೇನು ಗಮನ ಸೆಳೆವ ಸದ್ದಲ್ಲ
ಮೃದುವಾದ ಪಾದಸಪ್ಪಳದ ತೊಟ್ಟಿಕ್ಕುವ
ನೀರಿನ ತುಂತುರು, ಜತೆಗೆ ಗಾಳಿ, ಅದೇ ಕಾಲ
ಮುಸ್ಸಂಜೆ ಮುಗಿದಿಲ್ಲ
ರಾತ್ರಿ ಕಾಲಿಟ್ಟಿಲ್ಲ
ಮಬ್ಬು ತಬ್ಬಿದ ಆಕಾರಗಳು
ಆ ರಸ್ತೆ ತಿರುವಿನಂಚಲ್ಲಿ
ಕಾಲನ ವಿವಿಧಾಕೃತಿಗಳು
ನಸುಬಾಗಿ ವಿರಾಮವಾದಾಗ
ನನ್ನ ಮಾತು ಕೇಳು, ಮಳೆಯ ಸದ್ದನಾಲಿಸುವಂತೆ

ಬೇಡವಾದರು ನೀನು ಕೇಳಲೇಬೇಕು
ಕಣ್ತೆರೆದು ನಿದ್ರಿಸದೆ ಎಚ್ಚೆತ್ತು ಕೇಳು
ಪಂಚೇಂದ್ರಿಯಗಳನ್ನು ತೆರೆದು ಕೇಳು
ಮಳೆಯು ಬೀಳುತ್ತಲಿದೆ ಮೃದು ಪಾದದಸದ್ದು, ಮಬ್ಬು ಅಕ್ಷರಗಳು
ಗಾಳಿ ನೀರುಗಳಿಂದಾದ ತೂಕವಿಲ್ಲದ ಪದಗಳು
ನಾವು ಹಿಂದೆ ಹೇಗಿದ್ದೆವೋ ಅಂತೆಯೇ ಇದ್ದೇವೆ
ದಿನ, ವರ್ಷ ನಿಮಿಷಗಳು ಉರುಳುತ್ತಿವೆ
ತೂಕವಿಲ್ಲದ ಕಾಲ, ದುಃಖ ಬಲುಭಾರ

ನನ್ನ ಮಾತು ಕೇಳು ಮಳೆಯ ಸದ್ದನಾಲಿಸುವಂತೆ
ತೊಯ್ದು ಅಕ್ಷರಗಳು ಹೊಳೆ ಹೊಳೆದು
ಆವಿಯಾಗಿ ಹೋಗುತ್ತಿದೆ ದೂರ
ಇರುಳು ಕಣ್ಣೆರೆದು ನೋಡುತ್ತಿದೆ

ನೀನು ನಿನ್ನ ಆವಿಯಾದ ದೇಹ
ನೀನು, ನಿನ್ನ ರಾತ್ರಿ ಮುಖ
ನೀನು, ನಿನ್ನ ಕೇಶರಾಶಿ, ವೇಗವಿಲ್ಲದ ಮಿಂಚು.

ನೀನು ರಸ್ತೆ ದಾಟುತ್ತಾ ನನ್ನ ಮುಂದಲೆಯ ಹೊಕ್ಕೆ
ನೀರಿನ ಪಾದಗಳ ಸದ್ದು ನನ್ನ ಕಣ್ಣಿನ ಸುತ್ತ
ನನ್ನ ಮಾತು ಕೇಳು ಮಳೆಯ ಸದ್ದನಾಲಿಸುವಂತೆ
ಮಿಂಚಿನಕ್ಷರಗಳು ಹಾದಿಬದಿಯಲ್ಲಿ
ಮುಸುಕಿದ ಮಂಜು ಅಂಡಲೆವ ರಾತ್ರಿ
ಮೃದು ಹಾಸಿಗೆಯಲ್ಲಿ ಮಲಗಿ ನಿದ್ರಿಸುವಾಗ
ನಿನ್ನ ಉಸುರಿನಲ್ಲೆಲ್ಲ ಅಲೆಗಳ ಹೊಯ್ದಾಟ
ನಿನ್ನ ನೀರು ಬೆರಳುಗಳಿಂದ, ನನ್ನ ಮುಂದಲೆಯು ನೆನೆದು
ನಿನ್ನ ಬೆಂಕಿ ಬೆರಳುಗಳಿಂದ, ನನ್ನ ಕಣ್ಣೆವೆಯು ಸೀದು
ನಿನ್ನ ಗಾಳಿ ಬೆರಳುಗಳಿಂದ, ಕಾಲನ ಕಣ್ಣುಗಳು ತೆರೆಯೆ
ಕಾಣ್ಕೆಗಳ ಜೈತ್ರಯಾತ್ರೆಯ ನೆನಪಿನಂಗಳದಲ್ಲಿ
ನನ್ನ ಮಾತು ಕೇಳು, ಮಳೆಯ ಸದ್ದನಾಲಿಸುವಂತೆ

ವರ್ಷಗಳು ಉರುಳುತ್ತ ನಿಮಿಷಗಳು ಮರಳಿ ಬಂದ
ಹೆಜ್ಜೆಗಳ ಸದ್ದು ಪಕ್ಕದ ಕೋಣೆಯಲ್ಲಿ ಕೇಳಿಸಿತೇ?
ಇಲ್ಲ ಕೇಳುತ್ತಿಲ್ಲ ಎಲ್ಲೂ ಕೇಳುತ್ತಿಲ್ಲ
ಮತ್ತೊಮ್ಮೆ ಬೇರೆ ಕಾಲದಲ್ಲಿ, ಅಂದರೆ ಇಂದೇ ಕೇಳು
ಕಾಲನ ಹೆಜ್ಜೆ ಸಪ್ಪಳದ ಮೃದುಸದ್ದು
ಜಗತ್ತಿನೆಲ್ಲೆಡೆಯಲ್ಲೂ ಅಲೆವ ತೂಕರಹಿತ ಕಾಲ
ಕೇಳು ಮಳೆಯ ನೀರು ಮಾಡಿನ ಮೇಲೆ ಹರಿವ ಸದ್ದು
ರಾತ್ರಿ ಕಾಳಗಪ್ಪಿನ ಗುಂಪುಮರಗಳ ನಡುವೆ
ಕೋರೈಸುವ ಮಿಂಚಿನ ಬೆಳಕು ಎಲೆಗಳ ಮೇಲೆ
ಅಶಾಂತಿ, ಚಡಪಡಿಸುವ ತೋಟದಲ್ಲಿ ಗೊತ್ತು ಗುರಿಯಿಲ್ಲದೆ
ಕಾಲನ ನೆರಳು ಈ ಪುಟಗಳ ತುಂಬಿ ಆವರಿಸಿತ್ತು

ಮರದೊಳಗೆ

ನನ್ನ ತಲೆಯಲ್ಲೊಂದು ಮರ ಚಿಗುರಿ
ಬೆಳೆದು ಹೆಮ್ಮರವಾಗಿ
ನಾಳಗಳ ಬೇರುಗಳು
ನರಗಳ ಕೊಂಬೆ ರೆಂಬೆಗಳು
ಮನದ ಚಿಂತನಗಳ ಸೊಂಪು ಎಲೆಗಳು
ನಿನ್ನ ಕಣ್ಣೋಟದ ಬೆಂಕಿ ಸೋಂಕಿದಾಗ
ಮಾಗಿ ಹಣ್ಣಾದ ಕೆಂಬಣ್ಣದ
ಕಿತ್ತಲೆಗೆ ಹಣ್ಣಿನ ಕೆನ್ನೆತ್ತರು
ಬಿರಿದ ದಾಳಿಂಬೆ ಉರಿಯ ಬೆಳಕಾಯಿತು
ಇರುಳ ದೇಹದಲ್ಲಡಗಿ
ನನ್ನ ತಲೆ ಒಳಗೆ ಇನ್ನೂ ಒಳಗೆ
ಮರವು ಮಾತಾಡಿತು
ಬಾ ಹತ್ತಿರ, ಬಾ, ಕೇಳಿಸಿತೇ?

ರಾತ್ರಿ ಬೆಳಗು ರಾತ್ರಿ

ಬೆಳಕಿನ ಪ್ರವಾಹ ಒಂಟಿಹಕ್ಕಿ
ಮಾಡಿನ ಮೇಲೆ ಕುಳಿತು ಹಾಡುತ್ತಿದೆ
ಕಣಿವೆ ಪರ್ವತಗಳ ಈ ನಿನ್ನ ದೇಹ
ಬೆಳಕಿನ ಉಂಡೆ ಬೆಳಗಿ ಬೆಳಗಾಯಿತು

ರಾತ್ರಿ ನಿದ್ರಿಸುತ್ತಿದೆ ಬೆಂಕಿ
ನೀರು ನಕ್ಕು ಎಚ್ಚರಿಸುತ್ತಿದೆ

ನಿನ್ನ ಕೇಶಪತ್ರಗಳ ನೆರಳಿನಡಿಯಲ್ಲಿ
ಒಂದು ಬಳ್ಳಿ ಮಾಡ ಚಿಗುರಿತ್ತು
ರೆಂಬೆಕೊಂಬೆಗಳೆಲ್ಲ ಸ್ಫುಟ ಚಿತ್ರವಾಗಿ
ಈ ಉಪವನಗಳ ಸ್ಮರಿಸಿ ಚಿಂತಿಸಿದಾಗ
ಗಾಳಿಯಾಗಿ ಬಂದು ನಗ್ನ ಸ್ಮರಣೆಗಳ ಕೆದಕುವೆ
ಸೂರ್ಯ ಕಿರಣವಾಗಿ ಬಂದು ವನವ ಭೇದಿಸುವೆ
ಉದ್ದ ಕಾಡು ಮನುಷ್ಯನಂತೆ ಬೆಳೆದು ನಿಂತಿದೆ
ಬುಡದಿಂದ ತಲೆ ಎತ್ತಿದ ತಾಳೆಮರ
ವೀರಯೋಧ ಸೂರ್ಯನೆದುರು ಕಾದಲು ನಿಂತ
ಕಡುಹಸಿರೇ, ನೀನು ವಿಶ್ರಮಿಸು

ನಿನ್ನ ಈ ದೇಹ
ಕಡಲ ಹಿನ್ನೀರಿನ ನೆರಳು
ನಗ್ನ ಸ್ಥಿರಚಿತ್ರ, ಈ ದೀರ್ಘ ನಡುಹಗಲು
ನಿನ್ನ ಕಾಲುಗಳ ಮಧ್ಯೆ ಕಠಿಣಕಾಲ ಹರಿಯುತ್ತಿದೆ

ಸೂರ್ಯನ ಹೊನ್ನ ಕಿರಣಗಳ ನಾಳ
ಮರಗಳ ಗುಂಪು ಭೇದಿಸಿ ತಿರುಗುತ್ತ

ಆದ ಹಸಿರು ನಕ್ಷತ್ರಮಂಡಲ
ತ್ರಿಕೋಣಾಕಾರದ ಕೀಟ
ಹುಲ್ಲಿನ ಮೇಲೆ ಸುತ್ತಿ ಸುಳಿದಾಡುತ್ತಾ
ಗಂಟೆ ಗಂಟೆಗೂ ದೂರವನ್ನದೆ ಶ್ರಮಿಸಿ
ಹಾರಿದ ಅದನ್ನು ನೀನು ಹಿಡಿದೆ
ಅಂಗೈ ಮೇಲೆ ಹೊಳೆವ ಕೀಟ

ಅದೊಂದು ಜೀವಂತ ಹೊಳೆವ ವಜ್ರಕೀಟ
ಪ್ರಚಂಡ ರಾಕ್ಷಸನಂತೆ ನೀನು ಹಿಡಿದೆ
ಕೊನೆಗೂ ಮುಕ್ತಗೊಳಿಸು ಬಿಟ್ಟು ಬಿಡು
ಅದು ಹಾರಿಹೋಗಲಿ ಉನ್ನುತ್ತ ಮಹತ್ತಿನೆಡೆಗೆ
ದಿನವೇ ಒಂದು ಕೊನೆಯ ಹೂವು
ಗಳಿಗೆ ಗಳಿಗೆಗೂ ಉರಿದು ಭಸ್ಮವಾಗಿ
ಕಪ್ಪುಬಣ್ಣ ತಾಳಿ ಉದುರಿ ಮತ್ತೆ ಕೊನರಿ
ಅಗೋಚರ ಸೂಕ್ಷ್ಮ ದಾಳ ದಾಟುತ್ತಾ
ಕರಿ ನೆರಳುಗಳ ಒಳ ಹೊಕ್ಕೆ
ಹೊಕ್ಕು ರಾತ್ರಿರಾಣಿಯ ಕೂಡಿದೆ
ನಗ್ನತೆ ಬಳಿ ಸಾಗಿ ಬಂದೆ
ಶ್ವೇತ ಘಮಘಮಿಸುವ ಸುಗಂಧಿ ನೀನು
ಮೈಚಾಚಿ ಮಲಗಿರುವೆ ಹುಲ್ಲುಹಾಸಿನ ಮೇಲೆ
ಮತ್ತೆ ನೀನು ಹೆಣ್ಣಾಗಿ ಮುನ್ನಿನಂತಾದೆ

ಖಾಲಿ ಹಾಳೆಗಳು
ರಾತ್ರಿಯ ಕಾಯಗಳು
ಆಸೆಯ ಅಲೆಗಳು
ಕನಸುಗಳ ಸಂತೆ

ಮುಟ್ಟಿಮೆಟ್ಟಲಾರದ ಹಳ್ಳಿ
'ನಿನ್ನ ಕಣ್ಣಿವೆ ಕೆಳಗೆ ಮಲಗಿ ನಿದ್ರಿಸಲು,
ತೀವ್ರ ಹೆಬ್ಬಯಕೆಗಳ ಭೋರೆಂಬ ಬಿರುಗಾಳಿ
ಮುಟ್ಟಿದೊಡನೆ ತಟ್ಟನೆ ಮಾಂಸದ ಮಕ್ಕಳಾಗಿ
ರಕ್ತ ಕುಡಿದು, ಆಕೃತಿಗಳಾಗಿ
ಆ ಆಕೃತಿಗಳೇ ಅತಿಯಾಸೆಯಾಗಿ
ಒಂದರಂತೆ ಮತ್ತೊಂದು ಸಾಲಾಗಿ ನಿಂತು
ಒಂದರ ಬೆನ್ನಿಗೊಂದು ಮುಖ
ಜೀವನದ ಸಾವಿನ ಒಂದು ಮುಖ
ಸಾವು ಜೀವದ ಇನ್ನೊಂದು ಮುಖ

ಗ್ರಂಥಋಣ

1. *Collected poems 1957-1987*
   Edited By, Eliot Weinberger

2. *Sellected Poems*
   A Bilingual Edition
   Edited by, Charles Tumlinson

3. *On poets and others*
   Essays translated by, Michacl Schmidt N.Y. Seaver. Books 1986

4. *One Earth, Four or Five Worlds Reflections contemporary History trans :*
   Helenlane N.Y. Harcourt Brace Javanovich 1985.

ಅನುಬಂಧ

ನೊಬೆಲ್ ಪ್ರಶಸ್ತಿ ವಿಜೇತ ಲೇಖಕ-ಲೇಖಕಿಯರು

ವರ್ಷ	ವಿಜೇತರು	ದೇಶ-ಭಾಷೆ
೧೯೦೧	ಸುಲಿ ಪ್ರುಧೋಮ್ (Sully Prudhomme)	ಫ್ರಾನ್ಸ್-ಫ್ರೆಂಚ್
೧೯೦೨	ಥಿಯೊಡೋರ್ ಮೊಮೆಸೆನ್ (Theodor Mommesen)	ಜರ್ಮನಿ-ಜರ್ಮನ್
೧೯೦೩	ಬ್ಯೋರ್ನ್‌ಸ್ಟನ್ ಬ್ಯೋರ್ನ್‌ಸನ್ (Bjornstjerne Bjornson)	ನಾರ್ವೆ-ನಾರ್ವೇಜಿಯನ್
೧೯೦೪	ಫ್ರೆಡೆರಿಕ್ ಮಿಸ್ತ್ರಲ್ (Frederic Mistral)	ಫ್ರಾನ್ಸ್-ಫ್ರೆಂಚ್
	ಯೋಸೆ ಈಚೆಗಾರೆ (Jose Echegaray)	ಸ್ಪೇನ್-ಸ್ಪ್ಯಾನಿಷ್
೧೯೦೫	ಹೆನ್ರಿಕ್ ಸಿಯೆನ್‌ಕಿಯೆವಿಚ್ (Henryk Sienkiewicz)	ಪೋಲೆಂಡ್-ಪೋಲಿಷ್
೧೯೦೬	ಜಿಯೂಸೆ ಕಾರ್ದೂಚ್ಚಿ (Giouse Carducci)	ಇಟಲಿ-ಇಟಾಲಿಯನ್
೧೯೦೭	ರಡ್‌ಯಾರ್ಡ್ ಕಿಪ್ಲಿಂಗ್ (Rudyard Kipling)	ಗ್ರೇಟ್ ಬ್ರಿಟನ್-ಇಂಗ್ಲಿಷ್
೧೯೦೮	ರುಡಾಲ್ಫ್ ಯೂಕೆನ್ (Rudolf Eucken)	ಜರ್ಮನಿ-ಜರ್ಮನ್
೧೯೦೯	ಸೆಲ್ಮಾ ಲಾಗರ್‌ಲಾಫ್ (Selma Lagerlof)	ಸ್ವೀಡನ್-ಸ್ವೀಡಿಷ್
೧೯೧೦	ಪಾಲ್ ಹೇಸೆ (Paul Heyse)	ಜರ್ಮನಿ-ಜರ್ಮನ್
೧೯೧೧	ಮಾರಿಸ್ ಮೇತರ್‌ಲಿಂಕ್ (Mourice Maeterlinck)	ಬೆಲ್ಜಿಯಂ-ಫ್ರೆಂಚ್
೧೯೧೨	ಗೆರ್‌ಹಾರ್ಟ್ ಹಾಪ್ಟ್‌ಮನ್ (Gerhart Hauptmann)	ಜರ್ಮನಿ-ಜರ್ಮನ್

೧೯೧೩	ರವೀಂದ್ರನಾಥ ಠಾಕೂರ್ (Rabindranath Togore)	ಭಾರತ-ಬಂಗಾಳಿ
೧೯೧೪	ಯಾರಿಗೂ ಇಲ್ಲ	- -
೧೯೧೫	ರೋಮೆ ರೋಲಾ (Romain Rolland)	ಫ್ರಾನ್ಸ್-ಫ್ರೆಂಚ್
೧೯೧೬	ವೆರ್ನೆರ್.ವಿ.ಹೈದೆನ್‌ಸ್ತಾಮ್ (Verner V.Heidenstam)	ಸ್ವೀಡನ್-ಸ್ವೀಡಿಷ್
೧೯೧೭	ಕಾರ್ಲ್ ಜೈಲೆರೂಪ್ (Karl Gjellerup)	ಡೆನ್ಮಾರ್ಕ್-ಡೇನಿಷ್
	ಹೆನ್ರಿಕ್ ಪೋಂತೊಪ್ಪಿದಾನ್ (Henrik Pantoppidan)	ಡೆನ್ಮಾರ್ಕ್-ಡೇನಿಷ್
೧೯೧೮	ಯಾರಿಗೂ ಇಲ್ಲ	- -
೧೯೧೯	ಕಾರ್ಲ್ ಸ್ಪಿಟೆಲರ್ (Carl Spitteler)	ಸ್ವಿಟ್ಜರ್‌ಲ್ಯಾಂಡ್-ಜರ್ಮನ್
೧೯೨೦	ನುಟ್ ಹ್ಯಾಮ್ಸುನ್ (Knut Hamsun)	ನಾರ್ವೆ-ನಾರ್ವೇಜಿಯನ್
೧೯೨೧	ಅನಾತೋಲ್ ಫ್ರಾನ್ಸ್ (Anatole France)	ಫ್ರಾನ್ಸ್-ಫ್ರೆಂಚ್
೧೯೨೨	ಯಾಸಿಂತೊ ಬೆನಾವಂತೆ (Jacinto Benavente)	ಸ್ಪೇನ್-ಸ್ಪ್ಯಾನಿಷ್
೧೯೨೩	ಡಬ್ಲ್ಯು.ಬಿ. ಯೇಟ್ಸ್ (W.B. Yeats)	ಐರ್ಲೆಂಡ್-ಇಂಗ್ಲಿಷ್
೧೯೨೪	ವ್ಲಾದಿಸ್ಲಾ ರೇಮೋಂತ್ (Wladyslaw Reymont)	ಪೋಲೆಂಡ್-ಪೋಲಿಷ್
೧೯೨೫	ಜಾರ್ಜ್ ಬರ್ನಾರ್ಡ್ ಷಾ (George Bernard Shaw)	ಗ್ರೇಟ್ ಬ್ರಿಟನ್-ಇಂಗ್ಲಿಷ್
೧೯೨೬	ಗ್ರೇತ್ಸಿಯಾ ದೆಲೆದ್ದಾ (Grazia Deledda)	ಇಟಲಿ-ಇಟಾಲಿಯನ್
೧೯೨೭	ಹೆನ್ರಿ ಬೆರ್ಗ್‌ಸನ್ (Henri Bergson)	ಫ್ರಾನ್ಸ್-ಫ್ರೆಂಚ್
೧೯೨೮	ಸಿಗ್ರಿದ್ ಉಂದ್‌ಸೆತ್ (Sigrid Undset)	ನಾರ್ವೆ-ನಾರ್ವೇಜಿಯನ್
೧೯೨೯	ಥಾಮಸ್ ಮಾನ್ (Thomas Mann)	ಜರ್ಮನಿ-ಜರ್ಮನ್
೧೯೩೦	ಸಿಂಕ್ಲೇರ್ ಲೀವಿಸ್ (Sinclair Lewis)	ಅಮೆರಿಕ-ಇಂಗ್ಲಿಷ್

೧೯೩೧ ಎರಿಕ್ ಎಕೆಲ್ ಕಾರ್ಲ್‌ಫೆಲ್ಟ್
(Erik Axel Karlfeldt) ಸ್ವೀಡನ್-ಸ್ವೀಡಿಷ್

೧೯೩೨ ಜಾನ್ ಗಾಲ್ಸ್‌ವರ್ದಿ (John Galsworthy) ಗ್ರೇಟ್ ಬ್ರಿಟನ್-ಇಂಗ್ಲಿಷ್

೧೯೩೩ ಇವಾನ್ ಬುನಿನ್ (Ivan Bunin) ರಷ್ಯಾ/ಫ್ರಾನ್ಸ್-ರಷ್ಯನ್

೧೯೩೪ ಲುಯಿಜಿ ಪಿರಾಂಡೆಲ್ಲೊ (Luigi Pirandello) ಇಟಲಿ-ಇಟಾಲಿಯನ್

೧೯೩೫ ಯಾರಿಗೂ ಇಲ್ಲ - -

೧೯೩೬ ಯೂಜೀನ್ ಓ'ನೀಲ್ (Eugene O'Neill) ಅಮೆರಿಕ-ಇಂಗ್ಲಿಷ್

೧೯೩೭ ರೋಜರ್ ಮಾರ್ತಿನ್ ದೂ ಗಾರ್
(Roger Martin Du Gard) ಫ್ರಾನ್ಸ್-ಫ್ರೆಂಚ್

೧೯೩೮ ಪರ್ಲ್.ಎಸ್. ಬಕ್ (Pearl S.Buck) ಅಮೆರಿಕ-ಇಂಗ್ಲಿಷ್

೧೯೩೯ ಫ್ರಾನ್ಸ್ ಈಮಿಲ್ ಸಿಲ್ಲಾನ್ ಪಾ
(Frans Eemil Sillanpaa) ಫಿನ್ಲೆಂಡ್-ಫಿನ್ನಿಷ್

೧೯೪೦ ಯಾರಿಗೂ ಇಲ್ಲ - -

೧೯೪೧ ಯಾರಿಗೂ ಇಲ್ಲ - -

೧೯೪೨ ಯಾರಿಗೂ ಇಲ್ಲ - -

೧೯೪೩ ಯಾರಿಗೂ ಇಲ್ಲ - -

೧೯೪೪ ಯೊಹಾನ್ನೆಸ್.ವಿ. ಯೆನ್ಸನ್
(Johannes V.Jensen) ಡೆನ್ಮಾರ್ಕ್-ಡೇನಿಷ್

೧೯೪೫ ಗೇಬ್ರಿಯೆಲಾ ಮಿಸ್ತ್ರಲ್ (Gabriela Mistral) ಚಿಲಿ-ಸ್ಪ್ಯಾನಿಷ್

೧೯೪೬ ಹರ್ಮನ್ ಹೆಸ್ (Hermann Hesse) ಸ್ವಿಟ್ಜರ್‌ಲ್ಯಾಂಡ್-ಜರ್ಮನ್

೧೯೪೭ ಆಂದ್ರೆ ಜೀದ್ (Andre Gide) ಫ್ರಾನ್ಸ್-ಫ್ರೆಂಚ್

೧೯೪೮ ಟಿ.ಎಸ್. ಎಲಿಯಟ್ (T.S. Eliot) ಗ್ರೇಟ್ ಬ್ರಿಟನ್-ಇಂಗ್ಲಿಷ್

೧೯೪೯ ವಿಲಿಯಂ ಫಾಕ್ನರ್ (William Faulkner) ಅಮೆರಿಕ-ಇಂಗ್ಲಿಷ್

೧೯೫೦ ಬರ್ಟ್ರೆಂಡ್ ರಸೆಲ್ (Bertrans Russel) ಗ್ರೇಟ್ ಬ್ರಿಟನ್-ಇಂಗ್ಲಿಷ್

೧೯೫೧ ಪಾರ್ ಲಾಗರ್‌ಕ್ವಿಸ್ಟ್ (Par Legerkvist) ಸ್ವೀಡನ್-ಸ್ವೀಡಿಷ್

೧೯೫೨ ಫ್ರಾನ್ಸುವಾ ಮೋರಿಯಾರ್ಕ್ (Francois Mouriac) ಫ್ರಾನ್ಸ್-ಫ್ರೆಂಚ್

೧೯೫೩ ವಿನ್‌ಸ್ಟನ್ ಚರ್ಚಿಲ್ (Winston Churchill) ಗ್ರೇಟ್ ಬ್ರಿಟನ್-ಇಂಗ್ಲಿಷ್

೧೯೫೪ ಅರ್ನೆಸ್ಟ್ ಹೆಮ್ಮಿಂಗ್‌ವೇ (Ernest Hemingwar) ಅಮೆರಿಕ-ಇಂಗ್ಲಿಷ್

೧೯೫೫ ಹಾಲ್‌ದೋರ್ ಲ್ಯಾಕ್ಸ್‌ನೆಸ್ (Halldor Laxness) ಐಸ್‌ಲೆಂಡ್-ಐಸ್‌ಲ್ಯಾಂಡಿಕ್

೧೯೫೬ ಯುವಾನ್ ಆರ್. ಖಿಮೆನೆಸ್ (Juan R. Jimenez) ಸ್ಪೇನ್-ಸ್ಪ್ಯಾನಿಷ್

೧೯೫೭ ಆಲ್ಬರ್ಟ್‌ಕಾಮು (Albert Camus) ಫ್ರಾನ್ಸ್-ಫ್ರೆಂಚ್

೧೯೫೮ ಬೋರಿಸ್ ಪಾಸ್ತರ್‌ನಾಕ್ (Boris Pasternak) (ಪ್ರಶಸ್ತಿ ಪಡೆಯಲಿಲ್ಲ) ಸೋವಿಯೆತ್ ಒಕ್ಕೂಟ-ರಷ್ಯನ್

೧೯೫೯ ಸಾಲ್ವತೋರೆ ಕಾಸಿಮೋದೊ (Salvatore Quasimodo) ಇಟಲಿ-ಇಟಾಲಿಯನ್

೧೯೬೦ ಸೇಂಟ್-ಜಾನ್ ಪೆರ್ಸ್ (Saint-John Perse) ಫ್ರಾನ್ಸ್-ಫ್ರೆಂಚ್

೧೯೬೧ ಇವೊ ಆಂದ್ರಿಚ್ (Ivo Andric) ಯೂಗೋಸ್ಲಾವಿಯಾ-ಸೆರ್ಬೊ-ಕ್ರೋತ್

೧೯೬೨ ಜಾನ್ ಸ್ಟೈನ್‌ಬೆಕ್ (John Steinbeck) ಅಮೆರಿಕ-ಇಂಗ್ಲಿಷ್

೧೯೬೩ ಜಿಯಾರ್‌ಜೋಸ್ ಸೆಫೇರಿಸ್ (Giorgos Seferis) ಗ್ರೀಸ್-ಗ್ರೀಕ್

೧೯೬೪ ಜೀನ್-ಪಾಲ್ ಸಾರ್ತ್ರ್ (Jean-Paul Sartre) (ಪ್ರಶಸ್ತಿ ನಿರಾಕರಿಸಿದ) ಫ್ರಾನ್ಸ್-ಫ್ರೆಂಚ್

೧೯೬೫ ಮಿಖಾಯಿಲ್ ಶೊಲೋಖೋವ್ (Mikhail Sholokhov) ಸೋವಿಯೆತ್ ಒಕ್ಕೂಟ-ರಷ್ಯನ್

೧೯೬೬ ಎಸ್.ವೈ. ಆಗ್ನಾನ್ (S.Y. Agnon) ಇಸ್ರೇಲ್-ಹೀಬ್ರೂ
ನೆಲ್ಲಿ ಸ್ಯಾಚ್ಸ್ (Nelly Sachs) ಜರ್ಮನಿ-ಜರ್ಮನ್

೧೯೬೭ ಮಿಗೇಲ್ ಏಂಜಲ್ ಅಸ್ತೂರಿಯಾಸ್
(Miguel Angle Asturias) ಗ್ವಾಟೆಮಾಲಾ-ಸ್ಪ್ಯಾನಿಷ್

೧೯೬೮ ಯಸುನಾರಿ ಕವಾಬಾಟ
(Yasunari Kawabata) ಜಪಾನ್-ಜಾಪನೀಸ್

೧೯೬೯ ಸ್ಯಾಮ್ಯುಯೆಲ್ ಬೆಕೆಟ್
(Samuel Beckt) ಐರ್ಲೆಂಡ್/ಫ್ರಾನ್ಸ್-ಫ್ರೆಂಚ್/ಇಂಗ್ಲಿಷ್

೧೯೭೦ ಅಲೆಕ್ಸಾಂದರ್ ಸೋಲ್ಜೆನಿತ್ಸಿನ್ ಸೋವಿಯತ್
(Alexsander Solzhenitsyn) ಒಕ್ಕೂಟ-ರಷ್ಯನ್

೧೯೭೧ ಪ್ಯಾಬ್ಲೊ ನೆರೂದಾ (Pablo Neruda) ಚಿಲಿ-ಸ್ಪ್ಯಾನಿಷ್

೧೯೭೨ ಹೇನ್ರಿಶ್ ಬ್ಯೋಲ್ (Heinrich Boll) ಪಶ್ಚಿಮ ಜರ್ಮನಿ-ಜರ್ಮನ್

೧೯೭೩ ಪ್ಯಾಟ್ರಿಕ್ ವೈಟ್ (Patrick White) ಆಸ್ಟ್ರೇಲಿಯ-ಇಂಗ್ಲಿಷ್

೧೯೭೪ ಐವಿಂಡ್ ಜಾನ್ಸನ್ (Eyvind Johnson) ಸ್ವೀಡನ್-ಸ್ವೀಡಿಷ್
ಹ್ಯಾರಿ ಮಾರ್ತಿನ್‌ಸನ್ (Harry Martinson) ಸ್ವೀಡನ್-ಸ್ವೀಡಿಷ್

೧೯೭೫ ಯೂಜೇನಿಯೊ ಮೊಂತಾಲೆ
(Eugeoio Montale) ಇಟಲಿ-ಇಟಾಲಿಯನ್

೧೯೭೬ ಸಾಲ್ ಬೆಲೊ (Saul Bellow) ಅಮೆರಿಕ್-ಇಂಗ್ಲಿಷ್

೧೯೭೭ ವಿನ್ಸೆಂತೆ ಅಲೆಕ್ಸಾಂದ್ರೆ (Vincente Aleixandre) ಸ್ಪೇನ್-ಸ್ಪ್ಯಾನಿಷ್

೧೯೭೮ ಐಸಾಕ್ ಭಾಷೆವಿಸ್ ಸಿಂಗರ್
(Isaac Bashevis Singer) ಪೋಲೆಂಡ್/ಅಮೆರಿಕ-ಯಿದ್ದಿಶ್

೧೯೭೯ ಒಡಿಸ್ಯೂಸ್ ಎಲೀಟಿಸ್ (Odysseus Elytis) ಗ್ರೀಸ್-ಗ್ರೀಕ್

೧೯೮೦ ಚೆಸ್ಲಾ ಮಿಲೋತ್ಸ್
(Czeslaw Milosz) ಪೋಲೆಂಡ್/ಅಮೆರಿಕ-ಪೋಲಿಷ್

೧೯೮೧ ಎಲಿಯಾಸ್ ಕ್ಯಾನೆಟಿ (Elias Canetti) ಗ್ರೇಟ್ ಬ್ರಿಟನ್-ಜರ್ಮನ್

೧೯೮೨ ಗೇಬ್ರಿಯಲ್ ಗಾರ್ಸಿಯಾ ಮಾರ್ಕೇಸ್
(Gabriel Garcia Marquez) ಕೊಲಂಬಿಯ-ಸ್ಪ್ಯಾನಿಷ್

೧೯೮೩ ವಿಲಿಯಂ ಗೋಲ್ಡಿಂಗ್ (William Golding) ಗ್ರೇಟ್ ಬ್ರಿಟನ್-ಇಂಗ್ಲಿಷ್

೧೯೮೪ ಯಾರೋಸ್ಲಾವ್ ಸೀಫರ್ತ್ (Jaroslow Seifert) ಚೆಕೋಸ್ಲೋವಾಕಿಯ-ಚೆಕ್

೧೯೮೫ ಕ್ಲೌದ್ ಸಿಮೋನ್ (Claude Simon) ಫ್ರಾನ್ಸ್-ಫ್ರೆಂಚ್

೧೯೮೬ ವೊಲೆ ಷೊಯಿಂಕ (Wole Soyinka) ನೈಜರಿಯಾ-ಇಂಗ್ಲಿಷ್

೧೯೮೭ ಜೋಸೆಫ್ ಬ್ರಾಡ್‌ಸ್ಕಿ (Joseph Brodsky) ರಷಿಯಾ-ರಷ್ಯನ್

೧೯೮೮ ನಜೀಬ್ ಮಹಫೌಜ್ (Nagib Mahfug) ಈಜಿಪ್ಟ್-ಅರಾಬಿಕ್

೧೯೮೯ ಕಾಮಿಲೆ ಯೋಸೆ ಸೆಲಾ (Camilo Jose Cela) ಸ್ಪೈನ್-ಸ್ಪ್ಯಾನಿಷ್

೧೯೯೦ ಒಕ್ತಾವಿಯಾ ಪಾಜ್ (Octavio Paz) ಮೆಕ್ಸಿಕೊ-ಸ್ಪ್ಯಾನಿಷ್

೧೯೯೧ ನ್ಯಾಡಿನ್ ಗೋರ್ಡಿಮರ್ (Nandine Gordimar) ದ. ಆಫ್ರಿಕ-ಇಂಗ್ಲಿಷ್

೧೯೯೨ ಡೆರೆಕ್ ವಾಲ್ಕಟ್ (Derek Wolcott) ಸ್ಟೆಂಟ್ ಲೂಸಿಯಾ(ಕೆರೆಬಿಮನ್)-ಇಂಗ್ಲಿಷ್

೧೯೯೩ ಟೋನಿ ಮಾರಿಸನ್ (Toni Morison) ಅಮೆರಿಕ-ಇಂಗ್ಲಿಷ್

೧೯೯೪ ಕೆಂಜಬುರೋ ಒಯೆ (Kanzabaro oe) ಜಪಾನ್-ಜಪಾನಿ

೧೯೯೫ ಸೀಮನ್ ಹೀನಿ (Seaman Heany) ಯುಕೆ/ಐರಿಷ್

೧೯೯೬ ವಿಸ್ಲಾವಾ ಸಿಂಬೊ (Wislawa zymoska) ಪೋಲೆಂಡ್-ಪೋಲಿಷ್

೧೯೯೭ ಡೇರಿಯೋ ಫೋ (Dario Fo) ಇಟಲಿ - ಇಟಾಲಿಯನ್

***



೧೯೯೦ ನೇ ಸಾಲಿನ ನೊಬೆಲ್ ಪುರಸ್ಕಾರದ ಗೌರವವನ್ನು ಪಡೆದ ಅಕ್ಟೇವಿಯಾ ಪಾಜ್ ಮೆಕ್ಸಿಕೋ ದೇಶದವನು. ಸ್ಪಾನಿಷ್ ಭಾಷೆಯಲ್ಲಿ ಬರೆಯುವ ಪ್ರಮುಖ ಕವಿಯಾದ ಪಾಜ್ ಭಾರತದಲ್ಲಿಯೂ ಕೆಲವು ಕಾಲ ರಾಯಭಾರಿಯಾಗಿದ್ದ. ಈ ಶತಮಾನದ ಜಗತ್ತಿನ ಪ್ರಮುಖ ಕವಿಗಳಲ್ಲಿ ಒಬ್ಬನಾದ ಪಾಜ್ ತನ್ನ ಕಾವ್ಯೋದ್ಯೋಗದೊಂದಿಗೆ, ಲೇಖನ, ಉಪನ್ಯಾಸಗಳ ಮೂಲಕವೂ ಗಮನಾರ್ಹ ಸ್ಥಾನ ಪಡೆದಿದ್ದಾನೆ. ಇತಿಹಾಸವನ್ನು ಕಲಾತ್ಮಕವಾಗಿ ಪುನರ್ ನಿರ್ಮಿಸುವ, ಪ್ರತಿಭೆಯನ್ನು ತನ್ನ ಕಾವ್ಯದಲ್ಲಿ ತೋರಿಸಿಕೊಂಡಿರುವ ಪಾಜ್ :

ಸತ್ಯ ಇತಿಹಾಸಗಳ ನಡುವೆ ಕಟ್ಟಿದ ಸೇತುವೆ
ಆ ದಾರಿ ಈ ದಾರಿ ತಿಳಿಸಿ ಹೇಳಲಾಗದ ದಾರಿ ;
ನೋಡಿದವರ ಕಣ್ಣಿಗೆ
ಸ್ಥಿರತೆಯಲ್ಲೂ ಚಲನಶೀಲತೆ ತೋರುವ ದಾರಿ.

- ಎಂದು ಇತಿಹಾಸ ಹಾಗೂ ಕಾವ್ಯದ ಸಂಬಂಧವನ್ನು ಹೇಳಿಕೊಳ್ಳುವಂಥವನು. ಈ ವಾಚಿಕೆಯಲ್ಲಿ ಪಾಜ್‌ನ ಸಾಹಿತ್ಯದ ಪರಿಚಯವನ್ನು ಕನ್ನಡ ಓದುಗರಿಗೆ ನೀಡಲು ಯತ್ನಿಸಿದೆ.

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು - ೫೬೦ ೦೧೮